# ಕರ್ನಾಟಕ ವಿಕಾಸ
# Karnataka Vikas

ಸೆಪ್ಟೆಂಬರ್ 2018 September 2018







ಪ್ರಕೃತಿ ವಿಕೋಪ
ತಂದ ಆಪತ್ತು...
ಪರಿಹಾರಕ್ಕೆ
ಸರ್ಕಾರದ
ಸ್ಪಂದನೆ




# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ


ಸೆಪ್ಟೆಂಬರ್ 2018
September 2018

ಸಂಪುಟ : 59
Volume : 59
ಸಂಚಿಕೆ : 10
Issue : 10


## ಈ ಸಂಚಿಕೆಯೊಳಗೆ


| | | |
|---|---|---|
| ಸಚಿವಾಲಯ ಸಂದೇಶ | | 5 |
| ವರದಿ | ಪ್ರಶಾಂತ್ ಕುಮಾರ್ ಮಿಶ್ರಾ | 7 |
| | ಜಿಲ್ಲಾ ಪಂಚಾಯತ್, ಧಾರವಾಡ<br>ಜಿಲ್ಲಾ ಪಂಚಾಯತ್, ಉಡುಪಿ<br>ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ | 10 |
| | ಕುಮಾರ್ | 18 |
| | ಜಿ. ಗೋವಿಂದಸ್ವಾಮಿ | 20 |
| | ಡಾ॥ ಸುರೇಶ ನಾಡಗೌಡರ್ | 23 |
| | ನಾಗೇಂದ್ರ | 26 |
| | ರಾಚಯ್ಯ ಚೌಕಿಮಠ | 29 |
| | ಜಿಲ್ಲಾ ಪಂಚಾಯಿತಿ, ಮೈಸೂರು | 32 |
| | ಮುರಳಿ.ಡಿ | 34 |
| ಕವಿಯ(ಕ್ಷ) ಪ್ರಶ್ನೆ | ಡಾ॥ ಶ್ರೀರಾಮಯ್ಯ | 37 |
| ಸುತ್ತೋಲೆಗಳು | | 38 |



ಪ್ರಕಾಶಕರು
ಎಂ.ಕೆ.ಕೆಂಪೇಗೌಡ
ನಿರ್ದೇಶಕರು(ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಪ್ರಧಾನ ಸಂಪಾದಕರು
ಡಾ॥ ಬೂವನಹಳ್ಳಿ ನಾಗರಾಜ್
ನಿರ್ದೇಶಕರು, ಸುವರ್ಣ ಗ್ರಾಮೋದಯ
ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿ

ಮುಖ್ಯ ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ
ಶ್ರೀನಿವಾಸ ಹೆಚ್ ಮಾರಂಗಪ್ಪನವರ

ಸಹಾಯಕ ಸಂಪಾದಕರು
ಆಗ್ನೇಸ್ ಮೇರಿ


### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ.100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಚೇರಿ ವಿಳಾಸ


ಸಂಪಾದಕರು ಕರ್ನಾಟಕ ವಿಕಾಸ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ.309, 3ನೇ ಮಹಡಿ, ಗೇಟ್ ನಂ.1,
ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ವಿಧಿ,
ಬೆಂಗಳೂರು – 560 001.
ದೂರವಾಣಿ: 080–22353857
www.rdpr.kar.nic.in
Email: kvrdpr@gmail.com


### ವಿಶೇಷ ಸೂಚನೆ


ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆ ಕುರಿತು ನಿಮ್ಮ ನುಡಿ




**ಮಾನ್ಯರೆ,**

ಆಗಸ್ಟ್ 2018ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿನ ಇಲಾಖೆಯ ಸಚಿವರು ಹಿರಿಯ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ನಡೆಸಿ ಅಭಿವೃದ್ಧಿಯ ಕ್ರಮಗಳನ್ನು ಕೈಗೊಂಡಿರುವುದು, ಇಲಾಖೆಯ ವಿವಿಧ ಕಾರ್ಯಕ್ರಮಗಳ ವರದಿ ತುಂಬಾ ಚೆನ್ನಾಗಿ ಮೂಡಿ ಬಂದಿದ್ದು, ಇಲಾಖೆಯ ಸಮಗ್ರ ಯೋಜನೆಗಳ ಮುನ್ನೋಟ ವರದಿಯು ಇಲಾಖಾ ಕಾರ್ಯಕ್ರಮಗಳನ್ನು ತಿಳಿಯುವಲ್ಲಿ ಸಹಕಾರಿಯಾಗಿದೆ. ಗ್ರಾಮೀಣ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಸ್ವಾತಂತ್ರ್ಯ ದಿನಾಚರಣೆಯ ಸುಸಂದರ್ಭದಲ್ಲಿ ಈ ವರ್ಷವು ಉತ್ತಮ ಕಾರ್ಯಕ್ರಮಗಳೊಂದಿಗೆ ಅಭಿವೃದ್ಧಿ ಹೊಂದಲಿ ಎಂದು ಆಶಿಸುತ್ತೇನೆ.

**– ಶ್ರೀ ಎಂ.ಜಯರಾಮಯ್ಯ**
ಮಾಜಿ ಜಿಲ್ಲಾ ಪಂಚಾಯತಿ ಸದಸ್ಯರು,
ನೆಲಮಂಗಲ, ಬೆಂಗಳೂರು (ಗ್ರಾ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯು ಅಭಿವೃದ್ಧಿಯತ್ತ ದಿಟ್ಟಹೆಜ್ಜೆಯಿಟ್ಟು ನೂತನ ಯೋಜನೆ, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಗ್ರಾಮಾಭಿವೃದ್ಧಿಯತ್ತ ಸಾಗುತ್ತಿರುವುದು ಗಾಂಧೀಜಿಯವರ ಕನಸನ್ನು ನನಸು ಮಾಡುವಲ್ಲಿ ಒಳ್ಳೆಯ ಪ್ರಯತ್ನವೇ ಸರಿ. ಎಂಜಿಎನ್ಆರ್‌ಇಜಿಎ ಯೋಜನೆಯಡಿ ವಿವಿಧ ಕಾರ್ಯಕ್ರಮಗಳನ್ನು ಕೈಗೊಂಡು ನಿರುದ್ಯೋಗಿಗಳಿಗೆ ಉದ್ಯೋಗ ನೀಡಿ ದುಡಿಯುವ ಕೈಗಳಿಗೆ ಕಾಯಕ ನೀಡಿ ಗ್ರಾಮೀಣ ಜನರ ಬದುಕಿಗೆ ದಾರಿದೀಪವಾಗಿದೆ. ಅಂತೆಯೇ ಪತ್ರಿಕೆಯಲ್ಲಿನ ಲೇಖನಗಳು, ಯಶೋಗಾಥೆಗಳು, ಸರ್ಕಾರದ ನಡವಳಿಗಳು ಓದುಗರಿಗೆ ಉತ್ತಮ ಪತ್ರಿಕೆಯಾಗಿ ಪ್ರಕಟಗೊಳ್ಳುತ್ತಿದೆ.

**– ಕವಿತ ಅರುಣ್‌ಕುಮಾರ್**
ಸುಂಕದಕಟ್ಟೆ, ಬೆಂಗಳೂರು.

ಕರ್ನಾಟಕ ವಿಕಾಸ ಮಾಸ ಪತ್ರಿಕೆಯ 2018ರ ಆಗಸ್ಟ್ ಸಂಚಿಕೆಯಲ್ಲಿನ ಮಾಹಿತಿಯು ಬಹಳ ಉಪಯುಕ್ತವಾಗಿದೆ. ಇಲಾಖೆಯ ವಿವಿಧ ಶಾಖೆಯಗಳ ಸಮಗ್ರ ಯೋಜನೆಗಳ ಮುನ್ನೋಟವು ಜನತೆಗೆ ಬಹಳ ಉಪಯುಕ್ತವಾಗಿದೆ. ನೂತನವಾಗಿ ಅಧಿಕಾರಿ ವಹಿಸಿಕೊಂಡಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸರ್ಕಾರದ ಕಾರ್ಯದರ್ಶಿಗಳಿಗೆ ಅಭಿನಂದನೆ ತಿಳಿಸುತ್ತಾ ಪತ್ರಿಕೆಯು ಇನ್ನು ಚೆನ್ನಾಗಿ ಮೂಡಿಬರಲಿ ಎಂದು ಆಶಿಸುತ್ತೇನೆ.

**– ಉದಯ್ ಜಿ.**
ನ್ಯೂ ಸೆಂಚುರಿ ಸ್ಕೂಲ್,
ನೆಲಮಂಗಲ, ಬೆಂಗಳೂರು (ಗ್ರಾ)

## ಸಚಿವಾಲಯದಿಂದ
# ಸಂದೇಶ




**ಎಲ್.ಕೆ.ಅತೀಕ್**
ಭಾ.ಆ.ಸೇ.
**ಸರ್ಕಾರದ ಪ್ರಧಾನ ಕಾರ್ಯದರ್ಶಿ**



ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.


ಪ್ರಿಯ ಬಂಧುಗಳೇ,

## ಪ್ರಕೃತಿ ವಿಕೋಪ ತಂದ ಆಪತ್ತು... ಪರಿಹಾರಕ್ಕೆ ಸ್ಪಂದನೆ

ಕೊಡಗು ಜಿಲ್ಲೆಯೂ ಒಳಗೊಂಡಂತೆ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಇತ್ತೀಚಿಗೆ ಬಿದ್ದ ಭಾರಿ ಮಳೆಯಿಂದಾಗಿ ಪ್ರವಾಹ ಉಂಟಾಗಿ ಅಪಾರ ಪ್ರಮಾಣದ ಆಸ್ತಿಪಾಸ್ತಿಗಳಿಗೆ ನಷ್ಟ ಸಂಭವಿಸಿದ್ದು ಜನತೆ ಸಂಕಷ್ಟಕ್ಕೆ ಸಿಲುಕಿರುತ್ತಾರೆ. ಈ ಪ್ರವಾಹದಿಂದ ಸಂಕಷ್ಟಕ್ಕೆ ಸಿಲುಕಿರುವ ಜನರ ರಕ್ಷಣೆಗಾಗಿ ಸರ್ಕಾರ ಕೈಗೊಂಡಿರುವ ಪರಿಹಾರ ಕಾರ್ಯಕ್ಕೆ ಸಾರ್ವಜನಿಕರು ಮತ್ತು ಸಂಘ ಸಂಸ್ಥೆಗಳು ನೆರವು ನೀಡಿದ್ದಾರೆ. ಈ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡು ಸಂಕಷ್ಟಕ್ಕೆ ಸಿಲುಕಿದವರ ತಕ್ಷಣದ ಪರಿಹಾರ ಕಾರ್ಯಕ್ಕೆ ಸಂವೇದನೆಯಿಂದ ಸ್ಪಂದಿಸಿದವರ ಎಲ್ಲರ ಕಾರ್ಯ ಸ್ಮರಣೀಯವಾದದ್ದು.

ಪ್ರಕೃತಿ ವಿಕೋಪದಿಂದ ಹಾನಿಗೊಳಗಾಗಿರುವ ಸಂತ್ರಸ್ಥರಿಗೆ ನೆರವಾಗು-ವಂತಹ, ನೆರವು ನೀಡುವಂತಹ ಸ್ಪಂದನ ಕಾರ್ಯದಲ್ಲಿ ರಾಜ್ಯದ ಗ್ರಾಮ ಪಂಚಾಯತಿಗಳು ಸಹ ಸ್ವಂತ ಸಂಪನ್ಮೂಲದಿಂದ ತಮ್ಮ ಸಾಮರ್ಥ್ಯಾನುಸಾರ ಆರ್ಥಿಕ ನೆರವು ನೀಡಲು ಮುಂದೆ ಬಂದಿದ್ದು ಮತ್ತು ಇದಕ್ಕೆ ಸರ್ಕಾರ ಅನುಮತಿಯನ್ನು ಕೋರಿದ್ದರ ಮೇರೆಗೆ ಅನುಮತಿಯನ್ನು ಸಹ ನೀಡಿ, ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಂದಾಯ ಮಾಡಬಹುದಾದ ಹಣವನ್ನು ಮುಖ್ಯಮಂತ್ರಿಗಳ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ-2018, ಖಾತೆ ನಂಬರ್:37887098605, IFSC: SBIN0040277, ಬ್ಯಾಂಕ್ ಶಾಖೆ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಧಾನ ಸೌಧ, ಬೆಂಗಳೂರು ಇಲ್ಲಿಗೆ ಕಳುಹಿಸಲು ಕೋರಿದೆ.

### ರಾಜ್ಯಕ್ಕೆ ಪ್ರಥಮ ರಾಷ್ಟ್ರೀಯ ಪ್ರಶಸ್ತಿ...

ಮಹಾತ್ಮ ಗಾಂಧಿ ನರೇಗಾ ಯೋಜನೆಯ ಉತ್ತಮ ಆಡಳಿತ (Good Governance) ನಿರ್ವಹಣೆಗೆ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಜ್ಯಕ್ಕೆ 2017-18ನೇ ಸಾಲಿಗೆ ಪ್ರಥಮ ಪ್ರಶಸ್ತಿ ನೀಡಿ ಗೌರವಿಸಿದ್ದು, ಇಲಾಖೆಯ ಹಿರಿಮೆಯನ್ನು ಹೆಚ್ಚಿಸಿದೆ. ಈ ಪ್ರಶಸ್ತಿಯು ರಾಷ್ಟ್ರದಲ್ಲೇ ಕರ್ನಾಟಕ

ರಾಜ್ಯದ ಗ್ರಾಮ ಪಂಚಾಯತಿಗಳ ಪಾರದರ್ಶಕತೆಯಲ್ಲಿ ಮತ್ತು ಉತ್ತಮ ದಾಖಲೆ ನಿರ್ವಹಣೆಯಲ್ಲಿ ಮಂಚೂಣಿಯಲ್ಲಿರುವುದನ್ನು ಸೂಚಿಸುತ್ತದೆ ಮತ್ತು ಈ ನಿಟ್ಟಿನಲ್ಲಿ ಶ್ರಮಿಸಿದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಅಭಿನಂದಿಸುತ್ತೇನೆ.

ಈ ಪ್ರಶಸ್ತಿ ಯೋಜನೆಯ ಅನುಷ್ಠಾನದಲ್ಲಿ ಭಾಗಿಯಾಗಿದ್ದ ಎಲ್ಲಾರಿಗೂ ತಮ್ಮ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ. ತಮ್ಮ ತಮ್ಮ ಜವಾಬ್ದಾರಿಗಳನ್ನು ಜತನದಿಂದ ನಿರ್ವಹಿಸಿ ಉದ್ಯೋಗ ಖಾತ್ರಿ ಯೋಜನೆಯ ಫಲಶೃತಿ ಲಿಂಗಾತೀತಾವಾಗಿ ಎಲ್ಲಾರಿಗೂ ಧಕ್ಕುವಂತೆ ಮಾಡುವ ಯೋಜನಾ ಅನುಷ್ಠಾನದ ಪ್ರಕ್ರಿಯೆಯಲ್ಲಿ ತಾವುಗಳು ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳಲು ಕೋರುತ್ತೇನೆ.

## ಗ್ರಾಮ ಪಂಚಾಯತಿಗಳಲ್ಲಿ ಆಧಾರ್ ತಿದ್ದುಪಡಿ ಕೇಂದ್ರ...

ಕರ್ನಾಟಕ ರಾಜ್ಯದಲ್ಲಿ 2018ರ ಅಂದಾಜಿಸಲಾದ ಜನಸಂಖ್ಯೆಯಂತೆ ಶೇ.95ರಷ್ಟು ಆಧಾರ್ ನೋಂದಣಿಗಳಾಗಿದೆ. ಇವುಗಳಲ್ಲಿ ಸಾಕಷ್ಟು ತಿದ್ದುಪಡಿಗಳು ದಿನಂಪ್ರತಿ ಬರುತ್ತಿದ್ದು, ತಿದ್ದುಪಡಿಗಳನ್ನು ಮಾಡಿಸಲು ಗ್ರಾಮೀಣ ಜನತೆಗೆ ಸಮೀಪದಲ್ಲಿ ಆಧಾರ್ ಕೇಂದ್ರಗಳು ಇರಲಿಲ್ಲ. ಈ ಹಿಂದೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಆಧಾರ್ ತಿದ್ದುಪಡಿ ಮಾಡಿಸಿಕೊಳ್ಳಬೇಕಾಗಿದ್ದರಿಂದ ಸಾರ್ವಜನಿಕರಿಗೆ ತ್ವರಿತ ಗತಿಯಲ್ಲಿ ಸೇವೆಯನ್ನು ಒದಗಿಸುವುದಕ್ಕೆ ತೊಡಕಾಗುತಿತ್ತು, ಜೊತೆಗೆ ಸಾರ್ವಜನಿಕರು ಆಧಾರ್ ತಿದ್ದುಪಡಿಗಾಗಿ ಸಾಕಷ್ಟು ದೂರ ಕ್ರಮಿಸಬೇಕಾಗಿದ್ದರಿಂದ ಸಾಕಷ್ಟು ಹಣ ವ್ಯಯಿಸಬೇಕಾಗುತಿತ್ತು.

ಈ ಸಮಸ್ಯೆಗೆ ಪರಿಹಾರವಾಗಿ ಗ್ರಾಮೀಣ ಜನತೆಯು ತಮಗೆ ಅವಶ್ಯವಿರುವ ಆಧಾರ್ ತಿದ್ದುಪಡಿ ಸೇವೆಯನ್ನು ತ್ವರಿತ ಗತಿಯಲ್ಲಿ ತಮ್ಮ ಗ್ರಾಮ ಪಂಚಾಯತಿಯಲ್ಲೇ ಪಡೆದುಕೊಳ್ಳುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯು ದಿನಾಂಕ:05.09.2018 ರಂದು ದೇಶದಲ್ಲೇ ಪ್ರಪ್ರಥಮವಾಗಿ ಗ್ರಾಮ ಪಂಚಾಯತ್‌ಗಳಲ್ಲಿ ಆಧಾರ್ ತಿದ್ದುಪಡಿ ಕೇಂದ್ರಗಳನ್ನು ಸ್ಥಾಪಿಸಿ ಮತ್ತು ದೇಶದಲ್ಲಿ ಒಂದೇ ಬಾರಿ 6022 ಆಧಾರ್ ತಿದ್ದುಪಡಿ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಕರ್ನಾಟಕ ಸರ್ಕಾರದ ಹಿರಿಮೆಯನ್ನು ಹೆಚ್ಚಿಸಿರುತ್ತದೆ.

ಆಧಾರ್ ತಿದ್ದುಪಡಿ ಕೇಂದ್ರಗಳಲ್ಲಿ ಸಾರ್ವಜನಿಕರ ಮನೆ ವಿಳಾಸ, ಮೊಬೈಲ್ ಸಂಖ್ಯೆ, ಪಿನ್ ಕೋಡ್ ಹಾಗೂ ಇ–ಮೇಲ್ ಐಡಿಗಳನ್ನು ಆಧಾರ್‌ನಲ್ಲಿ ತಿದ್ದುಪಡಿ ಮಾಡಲಾಗುತ್ತಿವೆ ಮತ್ತು ಈ ಕೇಂದ್ರಗಳನ್ನು ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಯಶಸ್ವಿಯಾಗಿ ನಿರ್ವಹಿಸುವ ಮುಖಾಂತರ ರಾಜ್ಯಕ್ಕೆ ಉತ್ತಮವಾದ ಹೆಸರನ್ನು ತರುತ್ತೀರೆಂದು ಆಶಿಸುತ್ತೇನೆ.

(ಎಲ್.ಕೆ.ಅತೀಕ್)

ವರದಿ




**ಪ್ರಶಾಂತ್ ಕುಮಾರ್ ಮಿಶ್ರಾ**
(ಭಾ.ಆ.ಸೇ)

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕೊಡಗು ಜಿಲ್ಲಾ ಪಂಚಾಯಿತಿ


**ಪ್ರಾಕೃತಿಕ ವಿಕೋಪದಿಂದ ಮಡಿಕೇರಿ ತಾಲೂಕಿನಲ್ಲಿ ಮಕ್ಕಂದೂರು, ಮದೆ, ಕೆ.ನಿಡುಗಣೆ, ಬೆಟ್ಟಗೇರಿ, ಕಾಂತೂರು ಮೂರ್ನಾಡು, ಮರಗೋಡು, ಸಂಪಾಜೆ, ಮೇಕೇರಿ, ಹೊದ್ದೂರು, ಬೇಂಗೂರು, ಕುಂದಚೇರಿ ಹಾಗೂ ಗಾಳಿಬೀಡು ಗ್ರಾಮ ಪಂಚಾಯತಿಗಳಲ್ಲಿ ತೀವ್ರ ಹಾನಿಯಾಗಿದೆ.**

# ಪ್ರಕೃತಿ ವಿಕೋಪ ತಂದ ಆಪತ್ತು... ಪರಿಹಾರಕ್ಕೆ ಸರ್ಕಾರದ ಸ್ಪಂದನೆ

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಹಾಗೂ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ದಿನಾಂಕ:23.08.2018ರಂದು ಕೊಡಗು ಜಿಲ್ಲೆಗೆ ಭೇಟಿ ನೀಡಿ ಪ್ರಾಕೃತಿಕ ವಿಕೋಪದಿಂದಾಗಿ ಜಿಲ್ಲೆಯಲ್ಲಿ ಅಪಾರ ಪ್ರಮಾಣದ ಆಸ್ತಿಪಾಸ್ತಿ ನಷ್ಟವಾಗಿರುವುದು, ಬಹಳಷ್ಟು ರಸ್ತೆಗಳು ಹಾನಿಗೀಡಾಗಿದ್ದು, ಅನೇಕ ಗ್ರಾಮಗಳು ಸಂಪರ್ಕ ವಂಚಿತವಾಗಿದ್ದು, ಬಹಳಷ್ಟು ರಸ್ತೆಗಳು ದುರಸ್ಥಿ ಮಾಡಲು ಸಹ ಸಾಧ್ಯವಾಗದ ರೀತಿಯಲ್ಲಿ ಹಾಳಾಗಿವೆ. ರಸ್ತೆ ಎಲ್ಲಿತ್ತು ಎಂಬ ಕುರುಹು ಸಹ ಸಿಗದ ಮಟ್ಟದಲ್ಲಿ ತೀವ್ರ ಹಾನಿಯಾಗಿವುದನ್ನು ಪರಿಶೀಲಿಸಿದರು. ಪ್ರಾಕೃತಿಕ ವಿಕೋಪದಿಂದ ಹಾನಿಗೊಳಗಾಗಿರುವ ಮಕ್ಕಂದೂರು-ತಂತಿಪಾಲ, ಹೆಬ್ಬೆಟಗೇರಿ-ದೇವಸ್ತೂರು, ಹೆಬ್ಬೆಟ್ಟಗೇರಿ-ಕುಮಾರಸ್ವಾಮಿ ಕಾಲೋನಿರಸ್ತೆ ಹಾಗೂ ಹೆಬ್ಬೆಟ್ಟಗೇರಿ-ಷಣ್ಮುಗ ಕಾಲೋನಿ ರಸ್ತೆಗಳನ್ನು ಪರಿಶೀಲಿಸುವುದಾಗಿ ಹಾಗೂ ಹಾನಿಯಾಗಿರುವ ಬಗ್ಗೆ ಪೂರ್ಣ ವಿವರವನ್ನು ಪಡೆದರು.

ಕಳೆದ ಐದಾರು ವರ್ಷಗಳಿಗಿಂತ ಅತೀ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದ್ದು, ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕಿನಲ್ಲಿ ವಿಪರೀತ ಮಳೆ ಸುರಿದಿದ್ದು ಜಿಲ್ಲೆಯಲ್ಲಿ ಅತೀವೃಷ್ಟಿ ತಲೆದೋರಿದೆ. ಇದರಿಂದ ರಸ್ತೆಗಳು ಹಾಳಾಗುವುದರೊಂದಿಗೆ ಕುಡಿಯುವ ನೀರಿನ ಸ್ಥಾವರಗಳು, ಕೃಷಿ ಮತ್ತು ತೋಟಗಾರಿಕಾ ಬೆಳೆಗಳು, ಪ್ರಾಥಮಿಕ ಅಂದಾಜಿನ ಪ್ರಕಾರ ಸುಮಾರು 9808 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆಗಳು, 11086 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕಾ ಬೆಳೆಗಳು ನಾಶವಾಗಿವೆ. ಪಂಚಾಯತ್ ರಾಜ್ ಇಲಾಖಾ ವ್ಯಾಪ್ತಿಗೆ ಒಳಪಡುವ ರಸ್ತೆ 4247.74 ಕಿ.ಮೀ ಗಳಿದ್ದು ಇದರಲ್ಲಿ 1944.76ಕಿ.ಮೀ ಉದ್ದದರಸ್ತೆ ಹಾಳಾಗಿದೆ. ಸದರಿ ರಸ್ತೆಯನ್ನು ಪುನರ್ ನಿರ್ಮಿಸಲು ರೂ.26125.00ಲಕ್ಷಗಳ ಅವಶ್ಯಕತೆಯನ್ನು ಅಂದಾಜಿಸಲಾಗಿದೆ. ಹಾಗೆಯೇ 84 ಸೇತುವೆಗಳು ಹಾಳಾಗಿದ್ದು ರೂ.1133.50 ಲಕ್ಷ ಹಾನಿಯಾಗಿದೆ. 182 ಸರ್ಕಾರಿ ಕಟ್ಟಡಗಳಿಗೆ ಹಾನಿಯಾಗಿದ್ದು ರೂ.523.20 ಲಕ್ಷಗಳಷ್ಟು ನಷ್ಟವಾಗಿದೆ. ಸುಮಾರು 217 ತಡೆಗೋಡೆಗಳು ನಾಶವಾಗಿದ್ದು ರೂ.1333.40 ಲಕ್ಷದಷ್ಟು ಹಾನಿಯಾಗಿದ್ದು, ಒಟ್ಟಾರೆ ರೂ.29123.60 ಲಕ್ಷದಷ್ಟು ಹಾನಿಯಾಗಿರುವ ಬಗ್ಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಇಂಜಿನಿಯರ್‌ಗಳಿಂದ ಅಂದಾಜಿಸಲಾಗಿರುತ್ತದೆ. ಈಗಾಗಲೇ ತಾತ್ಕಾಲಿಕವಾಗಿ ಮಕ್ಕಂದೂರು-ತಂತಿಪಾಲ ರಸ್ತೆ, ಗಾಳಿಬೀಡು ಕಾಲೂರು ರಸ್ತೆ ಮೊದಲಾದವುಗಳನ್ನು ದುರಸ್ಥಿ ಪಡಿಸಲು ಅಗತ್ಯ ಕ್ರಮವಹಿಸಲಾಗಿದ್ದು, ಮೈಸೂರು, ಹಾಸನ ಮೊದಲಾದ ಕಡೆಗಳಿಂದ ಸುಮಾರು 20ಕ್ಕೂ ಅಧಿಕ ಇಂಜಿನಿಯರ್‌ಗಳಿಂದ ರಸ್ತೆ ದುರಸ್ಥಿಗೆ ಸಂಬಂಧಿಸಿದಂತೆ ತುರ್ತಾಗಿ ಸಮೀಕ್ಷಾ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು, ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ಹಿಟಾಚಿ, ಜೆಸಿಬಿ ಹಾಗೂ ಸಾಮಾಗ್ರಿಗಳನ್ನು ಒದಗಿಸಲು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ. ಪಿ.ಎಂ.ಜಿ.ಎಸ್.ವೈ ಹಾಗೂ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ ನಿರ್ಮಾಣವಾದ ರಸ್ತೆಗಳ ಹಾನಿ ಬಗ್ಗೆ ಮಾಹಿತಿಯನ್ನು ಮಾನ್ಯ ಸಚಿವರು ಪಡೆದರು.



ಪ್ರಾಕೃತಿಕ ವಿಕೋಪದಿಂದ ಮಡಿಕೇರಿ ತಾಲೂಕಿನಲ್ಲಿ ಮಕ್ಕಂದೂರು, ಮದೆ, ಕೆ.ನಿಡುಗಣೆ, ಬೆಟ್ಟಗೇರಿ, ಕಾಂತೂರು ಮೂರ್ನಾಡು, ಮರಗೋಡು, ಸಂಪಾಜೆ, ಮೇಕೇರಿ, ಹೊದ್ದೂರು, ಬೇಂಗೂರು, ಕುಂದಚೇರಿ ಹಾಗೂ ಗಾಳಿಬೀಡು ಗ್ರಾಮ ಪಂಚಾಯತಿಗಳಲ್ಲಿ ತೀವ್ರ ಹಾನಿಯಾಗಿದೆ. ಹಾಗೆಯೇ ಸೋಮವಾರಪೇಟೆ ತಾಲೂಕಿನ ಬೆಟ್ಟದಳ್ಳಿ, ಗರ್ವಾಲೆ, ಗುಡ್ಡೆಹೊಸೂರು, ಕೆದಕಲ್, ಕಿರಗಂದೂರು, ಕೂಡಿಗೆ, ಕೂಡುಮಂಗಳೂರು, ಮಾದಾಪುರ, ಮುಳ್ಳುಸೋಗೆ, ನೆಲ್ಲಿಹುದಿಕೇರಿ ಗ್ರಾಮ ಪಂಚಾಯತಿಗಳು ಹಾಗೂ ವಿರಾಜಪೇಟೆ ತಾಲೂಕಿನ ಸಿದ್ದಾಪುರ, ಕಾಕೋಟು ಪರಂಬು, ಹಾಲುಗುಂದ, ಕೆ.ಬಾಡಗ, ಮಾಯಮುಡಿ, ಕೆದಮಳ್ಳೂರು, ಕುಟ್ಟಗ್ರಾಮ ಪಂಚಾಯತಿಗಳಲ್ಲಿ ತೀವ್ರ ಹಾನಿಯಾಗಿರುವ ಬಗ್ಗೆ ಮಾಹಿತಿ ನೀಡಿ, ತೊಂದರೆಗೆ ಒಳಗಾದ ಜನರನ್ನು ರಕ್ಷಿಸಲು ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಯಿತು.

ನಿರಾಶ್ರಿತರ ರಕ್ಷಣೆಗಾಗಿ 51 ಪರಿಹಾರ ಕೇಂದ್ರಗಳನ್ನು ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ತೆರೆಯಲಾಗಿದ್ದು ಸುಮಾರು 7040 ಜನರು ಪರಿಹಾರ ಕೇಂದ್ರಗಳಲ್ಲಿ ರಕ್ಷಣೆ ಪಡೆಯುತ್ತಿದ್ದು, ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ಪ್ರತಿಯೊಂದು ಪರಿಹಾರ ಕೇಂದ್ರದ ಮೇಲ್ವಿಚಾರಣೆಗಾಗಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು, ಪ್ರತಿ ನಿತ್ಯ ಅವರಿಂದ ಮಾಹಿತಿ ಪಡೆದು ಪರಿಹಾರ ಕೇಂದ್ರಗಳಿಗೆ ಅಗತ್ಯವಿರುವ ಸಾಮಾಗ್ರಿಗಳನ್ನು ತುರ್ತಾಗಿ ಸರಬರಾಜು ಮಾಡಲಾಗುತ್ತಿದೆ. ಅತಿವೃಷ್ಟಿಯಿಂದ ಸಮಸ್ಯೆಗೆ ಒಳಗಾದವರಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಉದ್ಯೋಗವಕಾಶ ಕಲ್ಪಿಸಲು ಕ್ರಮವಹಿಸಲಾಗುವುದು. ಈ ಸಂಬಂಧ ಪರಿಷ್ಕೃತ ಕ್ರಿಯಾ ಯೋಜನೆ ರೂಪಿಸಲಾಗಿದೆ. ಸ್ವಸಹಾಯ ಸಂಘಗಳ ಮೂಲಕ ನಿರಾಶ್ರಿತರ ಕುಟುಂಬಗಳಿಗೆ ನೆರವು ನೀಡಲು ಕ್ರಮವಹಿಸಲಾಗಿದೆ. ಸರ್ಕಾರದ ವಿವಿಧ ವಸತಿ ಯೋಜನೆಯಡಿ ಮನೆ ಕಳೆದುಕೊಂಡವರಿಗೆ ಮನೆಗಳನ್ನು ನಿರ್ಮಾಣ ಮಾಡಲು ತೀರ್ಮಾನಿಸಲಾಗಿದೆ. ಪ್ರತಿ ಗ್ರಾಮ ಪಂಚಾಯತಿಯಲ್ಲಿ ಶುಚಿತ್ವ ಕಾಪಾಡುವಂತೆ ಹಾಗೂ ಸಾಂಕ್ರಾಮಿಕ ರೋಗಗಳು ಹರಡದಂತೆ ಮುಂಜಾಗ್ರತಾ ಕ್ರಮವಹಿಸಲು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಸ್ವಚ್ಛತೆಯ ನಿರ್ವಹಣೆಗಾಗಿ ಪ್ರತಿ ಗ್ರಾಮ ಪಂಚಾಯತಿಗೆ ರೂ.50,000/- ಅನುದಾನವನ್ನು ಈಗಾಗಲೇ ಒದಗಿಸಲಾಗಿದೆ. ಆಧಾರ್ ಕಾರ್ಡ್, ಪಡಿತರ ಚೀಟಿ ಕಳೆದುಕೊಂಡವರಿಗೆ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಅಗತ್ಯ ದಾಖಲೆಗಳನ್ನು ಒದಗಿಸಲು ಕ್ರಮವಹಿಸಲಾಗುವುದು.

ಪ್ರಕೃತಿ ವಿಕೋಪದಿಂದ ಜಿಲ್ಲೆಯಲ್ಲಿ ಹಾನಿಗೊಳಗಾಗಿರುವ ರಸ್ತೆಗಳನ್ನು ಪುನರ್ ನಿರ್ಮಾಣ ಮಾಡಲು ಪ್ರಥಮ ಆದ್ಯತೆ ಮೇರೆಗೆ ಕ್ರಮವಹಿಸಲಾಗಿದ್ದು, ಹಾನಿಗೊಳಗಾದ ಪ್ರದೇಶಗಳಿಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸಿ, 4500 ಕಿ.ಮೀ ಗಾಮೀಣ ರಸ್ತೆಗಳ ಪೈಕಿ ಶೇಕಡ 10ರಷ್ಟು, ಅಂದರೆ 250ಕಿ.ಮಿ ರಸ್ತೆ ದುರಸ್ಥಿ ಪಡಿಸಲಾಗದಷ್ಟು ಸಂಪೂರ್ಣ ಹಾನಿಗೊಳಗಾಗಿದ್ದು, 2000ಕಿ.ಮೀ ನಷ್ಟು ರಸ್ತೆ ಭಾಗಶಃ ಹಾನಿಗೀಡಾಗಿದೆ. ಈಗಾಗಲೇ ರೂ.11.50 ಕೋಟಿಗಳನ್ನು ಹಾಗೂ ಪ್ರಕೃತಿ ವಿಕೋಪ ನಿಧಿಯಡಿ ರೂ.12.00 ಕೋಟಿ ಹಣ ಬಳಸಿಕೊಂಡು ದುರಸ್ಥಿ ಪಡಿಸಲು ಕ್ರಮ ವಹಿಸಲಾಗುವುದು. ತುರ್ತಾಗಿ ಸಂಪರ್ಕ



ಕಡಿತಗೊಂಡಿರುವ ರಸ್ತೆ ಕಾಮಗಾರಿಗಳನ್ನು ಸರಿಪಡಿಸಿ ತದನಂತರ ಸಂಪೂರ್ಣ ಹಾನಿಯಾಗಿರುವ ದೀರ್ಘಾವದಿ ರಸ್ತೆ ಕಾಮಗಾರಿಗಳ ಬಗ್ಗೆ ತಜ್ಞರೊಂದಿಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು. ಮೊದಲಿಗೆ ಪ್ರಥಮ ಆಧ್ಯತೆ ಮೇರೆಗೆ ಸಂಪರ್ಕ ಕಡಿತಗೊಂಡಿರುವ ರಸ್ತೆಗಳಿಗೆ ವೆಟ್‌ಮಿಕ್ಸ್ ಹಾಕಿ ಬೆಟ್ಟಗೇರಿ, ಚೇರಂಬಾಣೆ ಹಾಗೂ ಹಾನಿಗೊಳಗಾದ ಇತರಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಜನರ ಓಡಾಟಕ್ಕೆ ಹಾಗೂ ಲಘು ವಾಹನಗಳು ಚಲಿಸಲು ಅನುವಾಗುವಂತೆ ಕ್ರಮ ವಹಿಸಲು ಮಾನ್ಯ ಸಚಿವರು ಇಂಜಿನಿಯರ್‌ಗಳಿಗೆ ಸೂಚಿಸಿದರು.

ಮೊದಲಿಗೆ ಕಡಿದು ಹೋಗಿರುವ ರಸ್ತೆ ಸಂಪರ್ಕವನ್ನು ತಾತ್ಕಾಲಿಕ ಕ್ರಮದ ಮೂಲಕ ದುರಸ್ತಿ ಪಡಿಸಲು ಕ್ರಮ ವಹಿಸಬೇಕು. ಈ ಹಿಂದೆ ಈ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸಿ

ಅನುಭವವಿರುವ ಇಂಜಿನಿಯರ್‌ಗಳನ್ನು ತಾತ್ಕಾಲಿಕವಾಗಿ ರಸ್ತೆ ನಿರ್ಮಾಣ ಕಾರ್ಯಕ್ಕೆ ನಿಯೋಜಿಸಿಕೊಡಬೇಕು. ರಸ್ತೆ ದುರಸ್ಥಿ ಕಾಮಗಾರಿಗಳನ್ನು ನಿರ್ವಹಿಸಿರುವ ಬಗ್ಗೆ ಇಂಜಿನಿಯರ್ ಹಾಗೂ ಸಂಬಂಧಿಸಿದ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ದೃಢೀಕರಿಸಿದ ನಂತರ ಬಿಲ್ ಪಾವತಿಸಲು ಕ್ರಮವಹಿಸಬೇಕು. ಇದರಿಂದ ನಕಲಿ ಬಿಲ್‌ಗಳು ಸೃಷ್ಠಿಯಾಗುವುದನ್ನು ತಪ್ಪಿಸಬಹುದು. ಸಂಕಷ್ಟಕ್ಕೆ ಸಿಲುಕಿರುವ ಜನರು ಪರಿಹಾರ ಕೇಂದ್ರಗಳಿಂದ ತಮ್ಮ ಮನೆಗಳಿಗೆ ತೆರಳಿ ಜಾನುವಾರುಗಳನ್ನು ಅವಕಾಶ ನೀಡಬೇಕು. ಮುಂದುವರೆದು ಪರಿಸರಕ್ಕೆ ತಕ್ಕಂತೆ ಗುಣಮಟ್ಟದ ಸಾಮಾಗ್ರಿಗಳನ್ನು ಬಳಕೆ ಮಾಡಿ ರಸ್ತೆ ಪುನರ್ ನಿರ್ಮಾಣ ಮಾಡಬೇಕು. ಕಾಮಗಾರಿ ಸ್ಥಳವನ್ನು ಪರಿಶೀಲಿಸಿ ಗುಣಮಟ್ಟದ ಕಾಮಗಾರಿ ಮಾಡಲು ಸಾಧ್ಯವಾಗುತ್ತದೆ. ಪೇರಾಜೆ, ಸಂಪಾಜೆ, ಚೆಂಬು ಹಾಗೂ ಮದೆ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಅಗತ್ಯವಿರುವ ಸೀಮೆಎಣ್ಣೆ ವಿತರಿಸಲು ಕ್ರಮ ವಹಿಸಬೇಕು.

ಪ್ರಕೃತಿ ವಿಕೋಪದಿಂದ ಉಂಟಾದ ಸಂಪೂರ್ಣ ಹಾನಿಯ ಬಗ್ಗೆ ಮಾಹಿತಿ ಪಡೆದು ಪ್ರಥಮ ಆಧ್ಯತೆಯಲ್ಲಿ ಹಾನಿಗೊಳಗಾಗಿರುವ ರಸ್ತೆಗಳ ಪುನರ್ ನಿರ್ಮಾಣ ಕಾರ್ಯವಾಗಬೇಕು, ಪುನರ್ ನಿರ್ಮಿಸಲು ಸಾಧ್ಯವಾಗದಿರುವ ಭಾಗಗಳಲ್ಲಿ ಪರ್ಯಾಯ ಕ್ರಮಗಳನ್ನು ತಜ್ಞರೊಂದಿಗೆ ಚರ್ಚಿಸಿ ಕ್ರಮ ವಹಿಸುವುದು. ಇದಕ್ಕೆ ಅಗತ್ಯವಿರುವ ಯಂತ್ರೋಪಕರಣಗಳು ಹಾಗೂ ಸಾಮಾಗ್ರಿಗಳನ್ನು ಲಭ್ಯತೆಯಿಲ್ಲದಿದ್ದಲ್ಲಿ ಪಕ್ಕದ ಜಿಲ್ಲೆಗಳಿಂದ ತರಿಸಿ, ಯುದ್ಧೋಪಾದಿಯಲ್ಲಿ ಸಂಪರ್ಕ ಕಡಿತಗೊಂಡಿರುವ ರಸ್ತೆಗಳ ಪುನರ್ ನಿರ್ಮಾಣ ಕಾರ್ಯಕೈಗೊಂಡು ಜನರಿಗೆ ಸೌಲಭ್ಯ ಕಲ್ಪಿಸಬೇಕು. ಪ್ರಕೃತಿ ವಿಕೋಪದಿಂದ ಹಾನಿಗೊಳಗಾಗಿರುವ ಕುಡಿಯುವ ನೀರಿನ ಸ್ಥಾವರಗಳನ್ನು ಪುನರ್ ಸ್ಥಾಪಿಸಬೇಕು. ಅಶುದ್ಧಗೊಂಡಿರುವ ಕುಡಿಯುವ ನೀರಿನ ಜಲಮೂಲಗಳನ್ನು ಶುದ್ಧೀಕರಿಸಲು ಕ್ರಮವಹಿಸುವುದು. ನಿರಾಶ್ರಿತರಾಗಿ ಪರಿಹಾರ ಕೇಂದ್ರಗಳಲ್ಲಿ ಆಶ್ರಯ ಪಡೆದಿರುವವರಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮಿಣ ಉದ್ಯೋಗ ಖಾತ್ರಿ ಯೋಜನೆಯಡಿ ಉದ್ಯೋಗ ಒದಗಿಸಲು ಕ್ರಮವಹಿಸಬೇಕು.

ಸಂಪರ್ಕ ಕಡಿತಗೊಂಡು ಶಾಲಾ ಕಾಲೇಜುಗಳಿಗೆ ತೆರಳಲು ಸಮಸ್ಯೆಯಾಗಿರುವ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ತಾತ್ಕಾಲಿಕವಾಗಿ ಸಮಾಜ ಕಲ್ಯಾಣ ಇಲಾಖೆ, ಐ.ಟಿ.ಡಿ.ಪಿ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ವಸತಿ ನಿಲಯಗಳಲ್ಲಿ ಪ್ರವೇಶಾವಕಾಶ ಒದಗಿಸಬೇಕೆಂದು ಮಾನ್ಯ ಸಚಿವರು ತಿಳಿಸಿ ಪ್ರಕೃತಿ ವಿಕೋಪದಿಂದ ಹಾನಿಗೀಡಾದ ಕೊಡಗು ಜಿಲ್ಲೆಯ ಪುನರ್ ನಿರ್ಮಾಣ ಕಾರ್ಯದಲ್ಲಿ ಸರ್ಕಾರ ಎಲ್ಲಾ ರೀತಿಯ ಸಹಕಾರ ನೀಡಲು ಸಿದ್ಧವಾಗಿದೆ ಎಂದು ತಿಳಿಸಿದರು. ■



ವರದಿ

ಜಿಲ್ಲಾ ಪಂಚಾಯತ್, ಧಾರವಾಡ

***

ಜಿಲ್ಲಾ ಪಂಚಾಯತ್, ಉಡುಪಿ

***

ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ

**ಮಳೆ ನೀರು ಮತ್ತು ಜಲಸಂರಕ್ಷಣೆಯ ಕಾಮಗಾರಿಗಳನ್ನು ವಿಶೇಷ ಆದ್ಯತೆಯ ಮೇಲೆ ನಡೆಸಬೇಕು ಹಾಗೂ ಪ್ರಸ್ತುತ ಸಾಲಿನಲ್ಲಿ ಧಾರವಾಡ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಕನಿಷ್ಠ 100 ಮಲ್ಟಿ ಆರ್ಚ್ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಗಳನ್ನು ನಿರ್ಮಿಸಬೇಕು. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಸಹಭಾಗಿತ್ವದೊಂದಿಗೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಜಿಲ್ಲೆಯಲ್ಲಿ ಕನಿಷ್ಠ 200 ರಿಂದ 250 ಕೋಟಿ ರೂ.ಗಳವರೆಗೆ ವೆಚ್ಚ ಭರಿಸಲು ಅವಕಾಶವಿದ್ದು, ಇದರ ಸದುಪಯೋಗ ಪಡೆದುಕೊಂಡು ಆಸ್ತಿ ಹಾಗೂ ಉದ್ಯೋಗ ಸೃಜನೆ ಮಾಡಿ ಪ್ರಗತಿ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುತ್ತದೆ.**

# ಅಭಿವೃದ್ಧಿ ಪ್ರವಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಸಚಿವರಾದ ಸನ್ಮಾನ್ಯ ಶ್ರೀ.ಕೃಷ್ಣಬೈರೇಗೌಡರವರು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ.ಎಲ್.ಕೆ.ಅತೀಕ್ ರವರ ಅಧ್ಯಕ್ಷತೆಯಲ್ಲಿ ದಿನಾಂಕ:29–08–2018 ರಂದು ಧಾರವಾಡ ಜಿಲ್ಲಾ ಪಂಚಾಯತಿಯಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಿ ಇಲಾಖೆಯಿಂದ ಹಮ್ಮಿಕೊಂಡ ವಿವಿಧ ಕಾಮಗಾರಿ/ಯೋಜನೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದು, ಪರಿಶೀಲಿಸಿ ಇಲಾಖೆಯ ಯೋಜನೆಗಳನ್ನು ಪರಿಷ್ಕೃತಗೊಳಿಸಿ ಫಲಪ್ರದವಾಗಿ ಅನುಷ್ಠಾನಗೊಳಿಸಲು ಮೇಲಧಿಕಾರಿಗಳಿಗೆ ಸೂಚಿಸಿದರು.

## ಗ್ರಾಮೀಣ ಕುಡಿಯುವ ನೀರು:

ಮಾನ್ಯ ಸಚಿವರು ಪ್ರಸಕ್ತ ಸಾಲಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ NRDWP, SDP, ಟಾಸ್ಕ್‌ಫೋರ್ಸ್ ಮತ್ತಿತರ ಕಾರ್ಯಕ್ರಮಗಳಡಿ ಹಂಚಿಕೆಯಾದ ಅನುದಾನದಲ್ಲಿ ತೆಗೆದುಕೊಂಡ ಮುಂದುವರೆದ ಕಾಮಗಾರಿಗಳು ಹಾಗೂ ಹೊಸ ಕಾಮಗಾರಿಗಳ ವಿವರಗಳನ್ನು ಪಡೆದು, ಕೈಗೊಂಡ ಕಾಮಗಾರಿಗಳ ಹಣ ಪಾವತಿಯಲ್ಲಿ ದೀರ್ಘ ಕಾಲೀನ ವಿಳಂಬವಾಗಿರುವುದಕ್ಕೆ ಹಾಗೂ 2016–17ರ ಕಾಮಗಾರಿಗಳ ವೆಚ್ಚವು ಮಾರ್ಚ್–2018 ರವರೆಗೂ ಪಾವತಿಯಾಗದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿ, ಆಯಾ ವರ್ಷದಲ್ಲಿ ಮಂಜೂರಾದ ಕಾಮಗಾರಿಗಳನ್ನು ಅದೇ ವರ್ಷ ಮುಕ್ತಾಯಗೊಳಿಸುವಂತೆ ಸೂಚಿಸಿದರು. ಪ್ರಸಕ್ತ ವರ್ಷದಲ್ಲಿ ರೂ.20.00 ಕೋಟಿ ಅನುದಾನ ಹಂಚಿಕೆ ಮಾಡಲಾಗಿದ್ದು, ಗ್ರಾಮಗಳಲ್ಲಿ ಸಮಸ್ಯಾತ್ಮಕ ಇರುವ ಕಾಮಗಾರಿಗಳನ್ನು ಅಳವಡಿಸಿಕೊಳ್ಳುವಂತೆ ಹಾಗೂ ಜಿಲ್ಲೆಯಲ್ಲಿ ಶಾಶ್ವತ ಶುದ್ಧ ಕುಡಿಯುವ ನೀರು ಪೂರೈಕೆಗೆ ಅಗತ್ಯ ಕ್ರಮವಹಿಸಬೇಕು ಮತ್ತು ಯಾವುದೇ ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳುವುದು.

## ಸ್ವಚ್ಛ ಭಾರತ ಅಭಿಯಾನ:



ಸ್ವಚ್ಛ ಭಾರತ ಅಭಿಯಾನ ಯೋಜನೆಯಡಿ ಈಗಾಗಲೇ ಜಿಲ್ಲೆಯು ODF ಆದ ಕಾರಣ ಎಲ್ಲಾ ಗ್ರಾಮಗಳಲ್ಲಿ IEC ಕಾರ್ಯಕ್ರಮ ನಡೆಸಿ ಅಭಿಯಾನದ ಮೂಲಕ ಪ್ರತಿಯೊಂದು ಮನೆಗಳಿಗೆ ಭೇಟಿ ನೀಡಿ ಶೌಚಾಲಯ ಬಳಕೆಯ ಬಗ್ಗೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ತಿಳುವಳಿಕೆ ನೀಡುವುದು.

ಗ್ರಾಮ ಪಂಚಾಯತಿ ಮಟ್ಟದಲ್ಲಿ ತ್ಯಾಜ್ಯ ವಿಲೇವಾರಿ ಬಗ್ಗೆ ಅರಿವು ಮೂಡಿಸಬೇಕಾಗಿದ್ದು, ಪ್ಲಾಸ್ಟಿಕ್, ಗ್ಲಾಸ್ ಇತರೆ ಕೊಳೆಯಲಾರದ ಪದಾರ್ಥಗಳನ್ನು

ಬೇರ್ಪಡಿಸುವ ಬಗ್ಗೆ ಕೈಗೊಂಡ ಕ್ರಮದ ಕುರಿತು ವಿವಿಧ ಗ್ರಾಮ ಪಂಚಾಯತಿಗಳ ಸದಸ್ಯರು ಸ್ವಸಹಾಯ ಗುಂಪುಗಳ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ, ಗ್ರಾಮ ಪಂಚಾಯತಿಯಲ್ಲಿ ಶೇ.75% ರಷ್ಟು ತಿಪ್ಪೆ ಗುಂಡಿಗಳಿದ್ದು, ಆ ಗ್ರಾಮದ ಜನರು ಹಸಿಕಸವನ್ನು ತಮ್ಮ ತಿಪ್ಪೆ ಗುಂಡಿಯಲ್ಲಿ ಬಳಕೆ ಮಾಡುವುದರಿಂದ ಒಣಕಸಗಳಾದ ಪ್ಲಾಸ್ಟಿಕ್, ಗ್ಲಾಸ್ ಹಾಗೂ ಕೊಳೆಯಲಾರದ ಪದಾರ್ಥಗಳನ್ನು ಮಾತ್ರ ವಿಂಗಡಿಸಿ, ಅವುಗಳನ್ನು ವಾರದಲ್ಲಿ ಒಂದು ಅಥವಾ ಎರಡು ಸಾರಿ ಸಂಸ್ಕರಣೆ ಹಾಗೂ ವಿಲೇವಾರಿ ಮಾಡುವುದರ ಮೂಲಕ ಗ್ರಾಮವನ್ನು ಸ್ವಚ್ಛವಾಗಿ ಇಡಲು ಸಾಧ್ಯವಾಗುತ್ತದೆ. ಜಾಗ ಗುರುತಿಸುವಿಕೆ ಹಾಗೂ ಶೆಡ್ ನಿರ್ಮಾಣ ಮಾಡುವ ಬದಲು ಉಡುಪಿ, ಬೆಂಗಳೂರು, ಮಂಗಳೂರು ಜಿಲ್ಲೆಗಳ ಕಸ ವಿಲೇವಾರಿ ಮಾದರಿಗಳನ್ನು ಅಧ್ಯಯನ ಮಾಡಿ ಈ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿಗೆ ಎರಡು ಗ್ರಾಮ ಪಂಚಾಯತಿಗಳನ್ನು ಗುರುತಿಸಿ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಯಶಸ್ವಿಯಾಗಿ ಅಳವಡಿಸಬೇಕು. ಕಸ ಸಂಗ್ರಹಣೆಯ ಬಗ್ಗೆ IEC ಮುಖಾಂತರ ಮಾಹಿತಿ ನೀಡಿ, ಗ್ರಾಮ ಪಂಚಾಯತಿ ಮಟ್ಟದಲ್ಲಿ ಅಧ್ಯಕ್ಷರು, ಸದಸ್ಯರುಗಳು ಹಾಗೂ ಜಿಲ್ಲೆಯಲ್ಲಿ ಅರ್ಹ NGO ಗಳನ್ನು ಗುರುತಿಸಿ ಅವರ ಮುಖಾಂತರ ಯೋಜನೆ ಯಶಸ್ವಿಗೊಳಿಸಲು ಹಾಗೂ ಸ್ವಸಹಾಯ ಗುಂಪುಗಳ ಮುಖಾಂತರ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಯಶಸ್ವಿಗೊಳಿಸುವುದು.

## ಗ್ರಾಮ ವಿಕಾಸ / ಮುಖ್ಯಮಂತ್ರಿ ಗ್ರಾಮ ವಿಕಾಸ / ಮಾದರಿ ಗ್ರಾಮ ಯೋಜನೆ:

ಗ್ರಾಮ ವಿಕಾಸ ಯೋಜನೆಯಡಿ 23 ಗ್ರಾಮಗಳು ಆಯ್ಕೆಯಾಗಿದ್ದು, ಅದರಲ್ಲಿ ಒಂದನೇ ಹಂತದ ರಸ್ತೆ ಕಾಮಗಾರಿಗಳು ಪೂರ್ಣಗೊಂಡಿದ್ದು, 2ನೇ ಹಂತದ ಕಾಮಗಾರಿಗಳು ಪ್ರಗತಿಯಲ್ಲಿವೆ. ಮುಖ್ಯಮಂತ್ರಿ ಗ್ರಾಮ ವಿಕಾಸ/ಮಾದರಿ ಗ್ರಾಮ ಯೋಜನೆಯಡಿ 24 ಗ್ರಾಮಗಳು ಆಯ್ಕೆಯಾಗಿ, ಕ್ರಿಯಾ ಯೋಜನೆ ಅನುಮೋದನೆಯಾಗಿವೆ. ತಕ್ಷಣ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಬೇಗ ಕಾಮಗಾರಿ ಪ್ರಾರಂಭಿಸಿ ಬಿಡುಗಡೆಯಾದ ಅನುದಾನಕ್ಕನುಗುಣವಾಗಿ ಕಾಮಗಾರಿ ಪೂರ್ಣಗೊಳಿಸುವುದು.

## ಗ್ರಾಮೀಣ ರಸ್ತೆಗಳು:

2018–19ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಸುರಿದ ಬಾರಿ ಮಳೆಯಿಂದ ರಸ್ತೆಗಳು ಹಾಳಾಗಿದ್ದು, ದುರಸ್ಥಿ ಕಾರ್ಯಕ್ರಮಕ್ಕೆ ರೂ.1190.76 ಲಕ್ಷ ಅನುದಾನದ ಅವಶ್ಯವಿರುತ್ತದೆ. ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಯೋಜನೆಯಡಿ ಪ್ರಸಕ್ತ ಸಾಲಿಗೆ ರೂ.380.00 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಕ್ರಿಯಾ ಯೋಜನೆ ತಯಾರಿಕೆ ಹಂತದಲ್ಲಿದೆ. ಟಾಸ್ಕ್‌ಪೋರ್ಸ ಯೋಜನೆಯಡಿ ರೂ.241.23ಲಕ್ಷ ಅನುದಾನ ಹಂಚಿಕೆ ಮಾಡಿದ್ದು, ಟಾಸ್ಕಪೋರ್ಸ ಸಮಿತಿಯಲ್ಲಿ ಕ್ರಿಯಾ ಯೋಜನೆ ಅನುಮೋದನೆ ಸಲ್ಲಿಸಲಾಗಿರುತ್ತದೆ.

## ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ:

ಧಾರವಾಡ ಜಿಲ್ಲೆಯಲ್ಲಿ ಒಟ್ಟು 05 ತಾಲೂಕುಗಳಿದ್ದು ಒಟ್ಟು 144 ಗ್ರಾಮ ಪಂಚಾಯತಗಳಿದ್ದು, ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಕ್ರಿಯಾ ಯೋಜನೆ ಅನುಮೋದಿಸಲಾಗಿದೆ. ಒಟ್ಟು 16.00 ಲಕ್ಷ ಮಾನವ ದಿನಗಳ ಗುರಿ ಇದ್ದು ಇದರಲ್ಲಿ ಈವರೆಗೆ 3.55 ಲಕ್ಷ ಮಾನವ ದಿನಗಳ ಪ್ರಗತಿ



ಸಾಧಿಸಲಾಗಿದೆ. ಯೋಜನೆಯ ಒಗ್ಗೂಡಿಸುವಿಕೆಯಡಿ ಕೆಲವು ಅನುಷ್ಠಾನ ಅಧಿಕಾರಿಗಳು ಇಲಾಖಾವಾರು ಪ್ರಗತಿಯನ್ನು ಕೈಗೊಳ್ಳಲಾಗಿರುತ್ತದೆ.

2018-19ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಒಗ್ಗೂಡಿಸುವಿಕೆಯಡಿ ಒಟ್ಟು 75 ಶಾಲಾ ಶೌಚಾಲಯಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಇದರಲ್ಲಿ ಈವರೆಗೆ 20 ಶಾಲಾ ಶೌಚಾಲಯಗಳ ಕಾಮಗಾರಿಗಳು ಮುಕ್ತಾಯಗೊಳಿಸಿ ಪ್ರಗತಿ ಸಾಧಿಸಲಾಗಿದೆ. ಇನ್ನುಳಿದ 55 ಕಾಮಗಾರಿಗಳು ಪ್ರಗತಿಯ ಹಂತದಲ್ಲಿವೆ. 2016-17ನೇ ಸಾಲಿನಲ್ಲಿ ಒಟ್ಟು 25 ಅಂಗನವಾಡಿ ಕಟ್ಟಡಗಳು ಹಾಗೂ 2017-18ನೇ ಸಾಲಿನಲ್ಲಿ ಒಟ್ಟು 25 ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಗಳು ಅನುಮೋದನೆಯಾಗಿದೆ. ಈವರೆಗೆ 11 ಅಂಗನವಾಡಿ ಕಟ್ಟಡ ಕಾಮಗಾರಿಗಳು ಪೂರ್ಣಗೊಂಡಿದ್ದು, ಇನ್ನುಳಿದ ಅಂಗನವಾಡಿ ಕಟ್ಟಡ ಕಾಮಗಾರಿಗಳು ಪ್ರಗತಿ ಹಂತದಲ್ಲಿವೆ. 06 ಅಂಗನವಾಡಿ ಕಟ್ಟಡಗಳ ನಿರ್ಮಾಣ ಮಾಡಲು ಸ್ಥಳದ ಸಮಸ್ಯೆ ಇರುವುದರಿಂದ ನಿರ್ಮಾಣ ಮಾಡಲು ತೊಂದರೆಯಾಗಿರುವುದರಿಂದ ಅಧಿಕಾರಿಗಳೇ ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿ ಸಮಸ್ಯೆ ಪರಿಹರಿಸಲು ಪಯತ್ನ ಮಾಡಲಾಗುತ್ತಿದೆ.

ಹಿಂದಿನ ಆರ್ಥಿಕ ವರ್ಷದಲ್ಲಿ ಒಟ್ಟು 36 ಮಲ್ಟಿ ಆರ್ಚ್ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, 04 ಮಲ್ಟಿ ಆರ್ಚ್ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿವೆ. ನಂತರ ಒಗ್ಗೂಡಿಸುವಿಕೆಯಡಿ ವಸತಿ ಯೋಜನೆಯಡಿ ಇಲ್ಲಿಯವರೆಗೂ ಒಟ್ಟು 30000 ಮಾನವ ದಿನಗಳನ್ನು ಸೃಜಿಸಲಾಗಿದೆ. 2018-19ನೇ ಸಾಲಿಗೆ ಒಟ್ಟು 11,454 ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಜಿಲ್ಲೆಯಲ್ಲಿ ಈಗ ಮಳೆ ಇರುವುದರಿಂದ ಮನೆ ನಿರ್ಮಾಣ ಕಾರ್ಯ ಸ್ವಲ್ಪ ಕುಂಠಿತವಾಗಿದೆ. ಯೋಜನೆಯ ಎಲ್ಲಾ ಅನುಷ್ಠಾನ ಇಲಾಖೆಗಳಿಂದ ಈವರೆಗೆ ಒಟ್ಟು 62,300 ಮಾನವ ದಿನಗಳನ್ನು ಸೃಜಸಲಾಗಿದೆ ಹಾಗೂ ಗ್ರಾಮ ಪಂಚಾಯತಿಗಳ ಮೂಲಕ 3,54,000 ಮಾನವ ದಿನಗಳ ಸೃಜನೆ ಮಾಡಿ ಪ್ರಗತಿ ಸಾಧಿಸಲಾಗಿದೆ.

ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕಡಿಮೆ ಪ್ರಗತಿಯಾಗಿದ್ದು, ನರೇಗಾ ಯೋಜನೆಯಡಿ ಮಲ್ಟಿ ಆರ್ಚ್ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಾಗ ನಾಲಾ ಅಭಿವೃದ್ಧಿ ಸೇರಿಸಿ ಚೆಕ್ ಡ್ಯಾಂಗಳನ್ನು ನಿರ್ಮಿಸುವ ವಿಶೇಷ ಪ್ಯಾಕೇಜ್ ತಯಾರಿಸಿ ಅನುಷ್ಠಾನಗೊಳಿಸುವುದು ಹಾಗೂ ಹೆಚ್ಚುವರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕಾದರೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ವಿಶೇಷ ಗ್ರಾಮ ಸಭೆ ನಡೆಸಿ ಅನುಮೋದನೆ ಪಡೆದು ಕಾಮಗಾರಿ ಪ್ರಾರಂಭಿಸಬೇಕು.

ಮಳೆ ನೀರು ಮತ್ತು ಜಲಸಂರಕ್ಷಣೆಯ ಕಾಮಗಾರಿಗಳನ್ನು ವಿಶೇಷ ಆದ್ಯತೆಯ ಮೇಲೆ ನಡೆಸಬೇಕು ಹಾಗೂ ಪ್ರಸ್ತಕ್ತ ಸಾಲಿನಲ್ಲಿ ಧಾರವಾಡ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಕನಿಷ್ಠ 100 ಮಲ್ಟಿ ಆರ್ಚ್ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಗಳನ್ನು ನಿರ್ಮಿಸಬೇಕು. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಸಹಭಾಗಿತ್ವದೊಂದಿಗೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಜಿಲ್ಲೆಯಲ್ಲಿ ಕನಿಷ್ಠ 200 ರಿಂದ 250 ಕೋಟಿ ರೂ.ಗಳವರೆಗೆ ವೆಚ್ಚ ಭರಿಸಲು ಅವಕಾಶವಿದ್ದು, ಇದರ ಸದುಪಯೋಗ ಪಡೆದುಕೊಂಡು ಆಸ್ತಿ ಹಾಗೂ ಉದ್ಯೋಗ ಸೃಜನೆ ಮಾಡಿ ಪ್ರಗತಿ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುತ್ತದೆ.

**ಸಾರ್ವಜನಿಕ ಶಿಕ್ಷಣ ಇಲಾಖೆ:** ಇಲಾಖೆಯ ವತಿಯಿಂದ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಒಗ್ಗೂಡಿಸುವಿಕೆಯಡಿ 2018-19ನೇ ಸಾಲಿನಲ್ಲಿ ಒಟ್ಟು 75 ಕಾಮಗಾರಿಗಳಿಗೆ ಅಂದಾಜು ಮೊತ್ತ ರೂ.128.90 ಲಕ್ಷಗಳಿಗೆ 2678 ಮಾನವ ದಿನಗಳ ಸೃಜನೆಯ ಗುರಿ ಇದೆ.

ಜಿಲ್ಲೆಯಲ್ಲಿ ಒಟ್ಟು 871 ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಇರುತ್ತವೆ. ಆಟದ ಮೈದಾನ 273 ಶಾಲೆಗಳಿಗೆ ಇರುವುದಿಲ್ಲ ಮತ್ತು 699 ಶಾಲೆಗಳಿಗೆ ಶಾಲಾ ಕಂಪೌಂಡ್ ಇದ್ದು, 172 ಶಾಲೆಗಳಿಗೆ ಶಾಲಾ ಕಾಂಪೌಂಡ್ ಇರುವುದಿಲ್ಲ. ಶಾಲಾ ಕಂಪೌಂಡ್ ಜೊತೆಗೆ ಶಾಲಾ ಆಟದ ಮೈದಾನ ನಿರ್ಮಾಣ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ತೆಗೆದುಕೊಂಡು ಸಂಪೂರ್ಣವಾಗಿ ಅನುಷ್ಠಾನಗೊಳಿಸಬೇಕು.

**ಪಶು ಸಂಗೋಪನೆ ಇಲಾಖೆ:** ಇಲಾಖೆಯಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಒಗ್ಗೂಡಿಸುವಿಕೆಯಡಿ 2018-19ನೇ ಸಾಲಿಗೆ 615 ಕಾಮಗಾರಿಗಳಿಗೆ ಒಟ್ಟು ಅಂದಾಜು ಮೊತ್ತ ರೂ.193.19 ಲಕ್ಷಗಳಿಗೆ ಪಶುಭಾಗ್ಯ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ದನದ ಕೊಟ್ಟಿಗೆ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು.

**ತೋಟಗಾರಿಕೆ ಇಲಾಖೆ:** ಮಹಾತ್ಮ ಗಾಂಧಿ ನರೇಗಾ ಯೋಜನೆಯ ಒಗ್ಗೂಡಿಸುವಿಕೆಯಡಿ 2018-19ನೇ ಸಾಲಿಗೆ 591 ಕಾಮಗಾರಿಗಳಿಗೆ ಒಟ್ಟು ಅಂದಾಜು ಮೊತ್ತ ರೂ.189.54 ಲಕ್ಷಗಳಿಗಳ ಗುರಿ ಇದ್ದು ಈ ಪೈಕಿ ಇಲ್ಲಿಯವರೆಗೆ 3171 ಮಾನವ ದಿನಗಳ ಸೃಜನೆ ಮಾಡಿದ್ದು 5.04ಲಕ್ಷ ವೆಚ್ಚ ಭರಿಸಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ (MORD) ಪ್ರಧಾನ ಸುತ್ತೋಲೆಯ ಅಂಶಗಳನ್ನು ಅಧಿಕಾರಿಗಳು ಸರಿಯಾಗಿ ಅರಿತುಕೊಂಡು,



ಅರ್ಹ ಫಲಾನುಭವಿಗಳಿಗೆ ಎಲ್ಲ ರೀತಿಯಲ್ಲಿ ಯೋಜನೆಯ ಸೌಲಭ್ಯಗಳನ್ನು ಒದಗಿಸಬೇಕು. ಮರ ತೋಟಗಾರಿಕೆ ಹಾಗೂ ನರೇಗಾ ಒಗ್ಗೂಡಿಸುವಿಕೆ ಅಡಿಯಲ್ಲಿ ತೆಗೆದುಕೊಳ್ಳಬಹುದಾದ ಕಾಮಗಾರಿಗಳ ಸುತ್ತೋಲೆಯನ್ವಯ ಬಾಳೇ ಅಂಗಾಂಶ ಬೆಳೆಗೆ 1.00 ಹೆಕ್ಟರ್‌ಗೆ ರೂ.2.11 ಲಕ್ಷಗಳು, ಮಾವಿನ ಬೆಳೆಗೆ 1.00 ಹೆಕ್ಟೇರ್‌ಗೆ ರೂ.58,000/– ಗಳಷ್ಟು ನೀಡಲು ಅವಕಾಶವಿರುತ್ತದೆ. ಜಿಲ್ಲೆಯ ಎಲ್ಲಾ ಬಿ.ಪಿ.ಎಲ್ ಎಸ್.ಸಿ ಎಸ್.ಟಿ, ಮಹಿಳಾ ಪ್ರಧಾನ ಕುಟುಂಬಗಳು, ಅಂಗವಿಕಲ ಪ್ರಧಾನ ಕುಟುಂಬಗಳು, ಸಣ್ಣ ಹಾಗೂ ಅತೀ ಸಣ್ಣ ರೈತರುಗಳಿಗೆ ಕಡ್ಡಾಯವಾಗಿ ನರೇಗಾ ಯೋಜನೆಯ ಸೌಲಭ್ಯಗಳನ್ನು ಒದಗಿಸಬೇಕು.

ಮಹಾತ್ಮ ಗಾಂಧಿ ನರೇಗಾ ಯೋಜನೆಯ ಒಗ್ಗೂಡಿಸುವಿಕೆಯಡಿ 2018–19ನೇ ಸಾಲಿಗೆ ಒಟ್ಟು 1614 ಕಾಮಗಾರಿಗಳಿಗೆ ಅಂದಾಜು ಮೊತ್ತ ರೂ.3665.20ಲಕ್ಷಗಳಿಗೆ 1128 ಮಾನವ ದಿನಗಳ ಸೃಜಿಸಲು ಗುರಿ ಇದ್ದು, ಬದು ನಿರ್ಮಾಣ ಹಾಗೂ ಹಂತ ಹಂತದ ಕೃಷಿ ಹೊಂಡ 9X9 and 12X12 ಕಾಮಗಾರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಮಹಾತ್ಮ ಗಾಂಧಿ ನರೇಗಾ ಯೋಜನೆಯು ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸುವುದು, ಬಹು ಬಾಳಿಕೆಯ ಆಸ್ತಿ ಸೃಜನೆಯ ಮಾಡುವಲ್ಲಿ ಪ್ರಮುಖವಾಗಿದ್ದು, ಸದರಿ ಯೋಜನೆಯನ್ನು ಜಿಲ್ಲೆಯ ಎಲ್ಲ ಗ್ರಾಮ ಪಂಚಾಯತಿಗಳು, ಅನುಷ್ಠಾನ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಜಿಲ್ಲೆಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಬೇಕು.

ಯೋಜನೆಯಡಿ ಹೆಚ್ಚುವರಿ ಹಣಕ್ಕಾಗಿ ಸರ್ಕಾರದ ಕಡೆ ಎದುರು ನೋಡುವ ಅವಶ್ಯಕತೆ ಇರುವುದಿಲ್ಲ. ಗ್ರಾಮ ಪಂಚಾಯತ ಹಂತದಲ್ಲಿಯೇ ಖರ್ಚು ಭರಿಸಬಹುದು. ಅನುಷ್ಠಾನಾಧಿಕಾರಿಗಳು ಹೆಚ್ಚು ಕಾಳಜಿ ವಹಿಸಬೇಕು. ತಾಲೂಕ ಪಂಚಾಯತನ ಕಾರ್ಯನಿರ್ವಾಹಕ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸಿ, ಅಧಿಕಾರಿಗಳು ಸಾಮಾನ್ಯವಾದ ಕೆಲಸದ ಮನೋಭಾವದಿಂದ ಹೊರಬಂದು ಸೃಜನಶೀಲರಾಗಿ ಆಲೋಚಿಸಿದರೆ ಇರುವ ಅವಕಾಶಗಳಲ್ಲಿಯೇ ಅನೇಕ ಹೊಸ ಪ್ರಯೋಗಗಳನ್ನು ಮಾಡಲು ಸಾಧ್ಯವಿದೆ. ನಿಯಮಾವಳಿಗಳನ್ನು ಅಪೂರ್ಣವಾಗಿ ಅರ್ಥೈಸಿಕೊಂಡು ಜನರಿಗೆ ತೊಂದರೆ ಕೊಡಬಾರದು. ಜಿಲ್ಲೆಯ ಹಿರಿಯ ಅಧಿಕಾರಿಗಳು ಪ್ರತಿ ಎರಡು ವಾರಗಳಿಗೊಮ್ಮೆ ತಾಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸಬೇಕು.

ನರೇಗಾ ಯೋಜನೆಯಡಿ ಕೂಲಿ ಹಾಗೂ ಸಾಮಗ್ರಿ 60:40 ರ ಅನುಪಾತ ಕಾಯ್ದುಕೊಳ್ಳುವ ಮೂಲಕ ಅನೇಕ ಕ್ರಾಂತಿಕಾರಕ ಬದಲಾವಣೆ ತರಲು ಸಾಧ್ಯವಿದೆ. ಮಲ್ಟಿ ಆರ್ಚ್ ಚೆಕ್ ಡ್ಯಾಂ ಕಾಮಗಾರಿಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ನಾಲಾ ಜೋಡಣೆ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು ಅದೇ ರೀತಿ ಶಾಲೆಗಳಿಗೆ ಶಾಲಾ ಕಂಪೌಂಡ್ ನಿರ್ಮಾಣದ ಸಂದರ್ಭದಲ್ಲಿ ಶಾಲಾ ಆಟದ ಮೈದಾನ ಕಾಮಗಾರಿಯನ್ನು ಸೇರಿಸಿ ಕೈಗೆತ್ತಿಕೊಳ್ಳುವುದು. ಇದೆಲ್ಲದಕ್ಕೂ ಕಾರ್ಯನಿರ್ವಾಹಕ ಅಧಿಕಾರಿಗಳು, ಯೋಜನೆಯ ಅನುಷ್ಠಾನಾಧಿಕಾರಿಗಳಿಗೆ ಮತ್ತು ಚುನಾಯಿತ ಪ್ರತಿನಿಧಿಗಳ ಇಚ್ಛಾಶಕ್ತಿ ಅಗತ್ಯ ಎಂದು ಮಾನ್ಯ ಸಚಿವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

# ಉಡುಪಿ ಜಿಲ್ಲಾ ಪರಿಶೀಲನೆ

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಕೃಷ್ಣ ಬೈರೇಗೌಡರವರು ದಿನಾಂಕ: 20.08.2018ರಂದು ಉಡುಪಿ ಜಿಲ್ಲೆಯ ಪ್ರಗತಿ ಪರಿಶೀಲನೆ ಹಾಗೂ ಕ್ಷೇತ್ರ ಭೇಟಿ ಕಾರ್ಯಕ್ರಮಕ್ಕೆ ಜಿಲ್ಲೆಗೆ ಆಗಮಿಸಿದ್ದು, ಪ್ರವಾಸಿ ಮಂದಿರದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸೇರಿದಂತೆ ಅಧಿಕಾರಿಗಳೊಂದಿಗೆ ಚರ್ಚಿಸಿದ ನಂತರ ಜಿಲ್ಲಾಧಿಕಾರಿಗಳು ಉಡುಪಿ ಜಿಲ್ಲೆಯಲ್ಲಿ ತ್ಯಾಜ್ಯವನ್ನು ಸಂಪನ್ಮೂಲವಾಗಿ ಪರಿವರ್ತಿಸಿ ನಿರ್ವಹಣೆ ಮಾಡುವ ವಿನೂತನ ವಿಧಾನ ಅನುಷ್ಠಾನಗೊಳಿಸುತ್ತಿರುವ ಅಂಶವನ್ನು ಗಮನಕ್ಕೆ ತಂದು ಕುಂದಾಪುರ ತಾಲೂಕು ವಂಡ್ಸೆ ಗ್ರಾಮ ಪಂಚಾಯತ್‌ಗೆ ಭೇಟಿ ನೀಡುವಂತೆ ಕೋರಿದರು. ಅದರಂತೆ ಮಾನ್ಯ ಸಚಿವರು ಸದರಿ ಗ್ರಾಮ ಪಂಚಾಯತ್‌ಗೆ ಭೇಟಿ ನೀಡಿದರು.

ವಂಡ್ಸೆ ಗ್ರಾಮ ಪಂಚಾಯತಿ ಕುಂದಾಪುರದಿಂದ 15 ಕಿ.ಮೀ. ದೂರ ಕೊಲ್ಲೂರು ಕುಂದಾಪುರದ ರಾಜ್ಯ ಹೆದ್ದಾರಿಯಲ್ಲಿರುವ ಗ್ರಾಮ ಪಂಚಾಯತಿಯು ಹೋಬಳಿ ಕೇಂದ್ರವಾಗಿರುತ್ತದೆ. ಸದರಿ ಗ್ರಾಮ ಪಂಚಾಯತಿ ಪಶ್ಚಿಮಘಟ್ಟ ಪ್ರದೇಶದಲ್ಲಿ ಬರುವ ಗ್ರಾಮವಾಗಿದ್ದು, ಪೇಟೆ ಹಾಗೂ ಚದುರಿದಂತೆ ಮನೆ ಹೊಂದಿರುವ ಪ್ರದೇಶವಾಗಿದ್ದು, 970 ಮನೆ, 150 ಉದ್ಯಮಗಳನ್ನು ಒಳಗೊಂಡಿರುತ್ತದೆ. ಗ್ರಾಮ ಪಂಚಾಯತಿಗೆ ಭೇಟಿ ನೀಡಿದ ಸಚಿವರಿಗೆ ಅಲ್ಲಿಯ ನಿರ್ವಹಣಾ ಕೇಂದ್ರದ ಮೇಲ್ವಿಚಾರಕರಿಂದ ಕೇಂದ್ರದ ಕಾರ್ಯನಿರ್ವಹಣೆಯ ಬಗ್ಗೆ ವಿಸ್ತಾರವಾಗಿ ವಿವರಣೆ ಪಡೆದರು. ಈ ಕಾರ್ಯಕ್ರಮದ ಪ್ರಾರಂಭದಲ್ಲಿ ಜನರ ಪ್ರತಿಕ್ರಿಯೆ ಹಾಗೂ ಅನುಷ್ಠಾನದಲ್ಲಿ ಎದುರಿಸಿದ ಸವಾಲುಗಳು ಹಾಗೂ ಕಾರ್ಯಕ್ರಮದಲ್ಲಿ ಜನರ ಸಹಕಾರ ಇತ್ಯಾದಿ ಅಂಶಗಳ ಬಗ್ಗೆ ಪೂರ್ಣ ಮಾಹಿತಿಯನ್ನು ಪಡೆದುಕೊಂಡು, ಸದರಿ ಗ್ರಾಮ ಪಂಚಾಯತಿಯಲ್ಲಿ ಪೇಟೆ ಪ್ರದೇಶದ 290 ಮನೆ/ಉದ್ಯಮಗಳಿಂದ ದಿನಕ್ಕೆ 2 ಬಾರಿ ತ್ಯಾಜ್ಯ ಕಳೆದ 10 ತಿಂಗಳಿನಿಂದ ನಿರಂತರವಾಗಿ ಸಂಗ್ರಹಿಸುತ್ತಿರುವುದಾಗಿ ದೂರ ದೂರದ ಮನೆಗಳಿಂದ ವಾರದಲ್ಲಿ ಒಂದು ಬಾರಿ ಒಣ ತ್ಯಾಜ್ಯ ಸಂಗ್ರಹಿಸುತ್ತಿರುವುದಾಗಿ, ಮನೆ, ಅಂಗಡಿ/ ಉದ್ಯಮಗಳಿಗೆ ತಿಂಗಳಿಗೆ ಈ ಸಂಬಂಧ ದರ ನಿಗದಿಪಡಿಸಿದ್ದು, ಅದು ಹಾಗೂ ತ್ಯಾಜ್ಯಗಳ ಮಾರಾಟದಿಂದ ಬಂದ ಸಂಪನ್ಮೂಲದಿಂದ ಪ್ರಸ್ತುತ ಸಂಘ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಾರಂಭದ 6 ತಿಂಗಳವರೆಗೆ ಮಾತ್ರ ಗ್ರಾಮ ಪಂಚಾಯತಿ ಸಂಪನ್ಮೂಲ ಹಾಗೂ ಖರ್ಚಿನ ವ್ಯತ್ಯಾಸದ ಮೊತ್ತ ನೀಡುತ್ತಿದ್ದು, ಈಗ ಸಂಗ್ರಹಣೆ ಖರ್ಚು ಹೊಂದಾಣಿಕೆಯಾಗಿ ಸ್ವತಂತ್ರವಾಗಿ ಸಂಘ ನಡೆಯುತ್ತಿದೆ ಎಂದು ತಿಳಿಸಿದರು.

ತ್ಯಾಜ್ಯ ವಿಂಗಡಣೆ ಕೇಂದ್ರ, ಕಂಪೋಸ್ಟ್ ಗೊಬ್ಬರ ಘಟಕಕ್ಕೆ ಭೇಟಿ ನೀಡಿದ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿ ಇದೊಂದು ಉತ್ತಮ ಮಾದರಿಯಾಗಿದ್ದು, ಜಿಲ್ಲೆಯಲ್ಲಿ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಇದೇ ಮಾದರಿಯಲ್ಲಿ ಅನಷ್ಠಾನಕ್ಕೆ ಕ್ರಮವಹಿಸುವಂತೆ ತಿಳಿಸಿದರು.

ಜಿಲ್ಲೆಯ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ನಡೆಸಿದ ಸಚಿವರು MGNREGA ಯೋಜನೆಯಡಿ ತೋಟಗಾರಿಕಾ ಬೆಳೆಗಳ ವಿಸ್ತರಣೆಗೆ



ವೈಯಕ್ತಿಕ ಬಾವಿ, ದನದ ಕೊಟ್ಟಿಗೆ ಇತ್ಯಾದಿಗೆ ಹೆಚ್ಚು ಅವಕಾಶಗಳಿದ್ದು, ಸದುಪಯೋಗಪಡಿಸಿಕೊಳ್ಳಬೇಕು. ಮುಖ್ಯಮಂತ್ರಿ ರಸ್ತೆ ಅಭಿವೃದ್ಧಿ (CMGSY) ಯೋಜನೆಯಡಿ ಪ್ರಾಕೃತಿಕ ವಿಕೋಪದಿಂದ ಹಾನಿಯಾದ ರಸ್ತೆಗಳನ್ನು ಸರಿಪಡಿಸಲು ಕ್ರಮವಹಿಸಬೇಕು. ತ್ಯಾಜ್ಯ ನಿರ್ವಹಣೆಯ ಬಗ್ಗೆ ಜಿಲ್ಲೆಯು ಅಳವಡಿಸಿಕೊಂಡಿರುವ ಮಾದರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಸಚಿವರು ರಾಜ್ಯದ ಇತರೇ ಭಾಗಗಳಿಗೂ ವಿಸ್ತರಿಸಲು ಕ್ರಮವಹಿಸಲಾಗುವುದು.

ಜಿಲ್ಲೆಯಲ್ಲಿ ತ್ಯಾಜ್ಯ ನಿರ್ವಹಣೆಯ ಸಮಸ್ಯೆಯನ್ನು ಬಗೆಹರಿಸುವ ಉದ್ದೇಶದಿಂದ "ಸ್ವಚ್ಛ ಉಡುಪಿ ಮಿಷನ್" ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿರುತ್ತದೆ. ಈ ಕಾರ್ಯಕ್ರಮದಡಿ ಜಿಲ್ಲೆಯ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ತ್ಯಾಜ್ಯವನ್ನು ಸಂಪನ್ಮೂಲವಾಗಿ ಪರಿವರ್ತಿಸುವ ಘನ ಮತ್ತು ದ್ರವ ಸಂಪನ್ಮೂಲ ನಿರ್ವಹಣೆ, SLRM (Solid and Liquid Resource Management) ಎಂಬ ವಿಧಾನದಲ್ಲಿ ಕಸವನ್ನು ಸಂಪನ್ಮೂಲವನ್ನಾಗಿ ಪರಿವರ್ತಿಸುವ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ. ಈ ಯೋಜನೆಯಲ್ಲಿ ಕಸವನ್ನು ವೈಜ್ಞಾನಿಕ ರೀತಿಯಲ್ಲಿ ನಿರ್ವಹಿಸಿ ಆದಾಯದ ಮೂಲವನ್ನಾಗಿ ಪರಿವರ್ತಿಸಲಾಗುತ್ತದೆ.

ಪ್ರತಿ ವಾಣಿಜ್ಯ ಕೇಂದ್ರ, ಮನೆಗಳಿಗೆ ಹಸಿರು ಹಾಗೂ ಕೆಂಪು ಬಕೆಟ್ ಗಳನ್ನು ವಿತರಿಸಿ ಹಸಿ ಹಾಗೂ ಒಣ ಕಸವನ್ನು ಪ್ರತ್ಯೇಕ ಪ್ರತ್ಯೇಕವಾಗಿ ದಿನಕ್ಕೆ ಎರಡು ಬಾರಿ ಸಂಗ್ರಹಿಸಿ ಎಸ್.ಎಲ್.ಆರ್.ಎಮ್ ಕೇಂದ್ರಕ್ಕೆ ತಂದು ನಿರ್ವಹಿಸಲಾಗುತ್ತಿದೆ. ಹಸಿ ಕಸವನ್ನು ಪಶುಗಳಿಗೆ ಆಹಾರವಾಗಿ ನೀಡುವ ಮೂಲಕ, ಒಣ ಹೂವುಗಳಿಂದ ರಂಗೋಲಿ ಹುಡಿ, ಮೊಟ್ಟೆ ಚಿಪ್ಪಿನಿಂದ ಕ್ಯಾಲ್ಸಿಯಂ ಹುಡಿ, ಕಿತ್ತಾಳೆ, ಲಿಂಬೆ ಚಿಪ್ಪೆಯಿಂದ ಪಾತ್ರೆ ತೊಳೆಯುವ ಹುಡಿ ತಯಾರಿಕೆ, ಸಾವಯವ ಗೊಬ್ಬರ ತಯಾರಿಕೆ ಮುಂದಾದ ರೀತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದೆ. ಒಣ ಕಸವನ್ನು ಪ್ಲಾಸ್ಟಿಕ್ ವಸ್ತುಗಳು, ಪ್ಲಾಸ್ಟಿಕ್ ಚೀಲಗಳು, ರಟ್ಟು, ಪೇಪರ್, ರಬ್ಬರ್, ಮೇಟಲ್, ಗಾಜು ಇತ್ಯಾದಿ ವಿಭಾಗಗಳಾಗಿ ವಿಂಗಡಿಸಿ ಮರುಬಳಕೆದಾರರಿಗೆ ಮಾರಾಟ ಮಾಡಲಾಗುವುದು.

ತ್ಯಾಜ್ಯವನ್ನು ಸಾರ್ವಜನಿಕ ಪ್ರದೇಶ, ಬೀದಿಯಲ್ಲಿ ಸುರಿಯುವುದು, ಪ್ಲಾಸ್ಟಿಕ್ ಸಮೇತ ಸುಡುವುದು, ನೀರಿನ ಮೂಲಗಳಿಗೆ ಹಾಕುವುದನ್ನ ತಡೆಗಟ್ಟುವ ಮೂಲಕ ಗ್ರಾಮವನ್ನು ಸ್ವಚ್ಛ ಗ್ರಾಮವನ್ನಾಗಿ ಮಾಡಲು ಸಾಧ್ಯವಾಗಲಿದೆ. ಇದುವರೆಗೆ ಜಿಲ್ಲೆಯಲ್ಲಿ ಒಟ್ಟು 44 ಗ್ರಾಮ ಪಂಚಾಯತಿಗಳಲ್ಲಿ SLRM ಕಾರ್ಯಕ್ರಮ ಪ್ರಾರಂಭಿಸಲಾಗಿದ್ದು, 13 ಗ್ರಾಮ ಪಂಚಾಯತಿಗಳಲ್ಲಿ ಪೇಟೆ ಹೊಂದಿರುವ ಪ್ರದೇಶಗಳಲ್ಲಿ ದಿನಕ್ಕೆ ಎರಡು



ಬಾರಿ ಹಸಿ ಹಾಗೂ ಒಣತ್ಯಾಜ್ಯ ಸಂಗ್ರಹಣೆಯಾಗುತ್ತಿದ್ದು, ಇನ್ನುಳಿದ ಗ್ರಾಮ ಪಂಚಾಯತಿಗಳಲ್ಲಿ ವಾರಕ್ಕೊಮ್ಮೆ ಒಣಕಸವನ್ನು ಸಂಗ್ರಹಿಸಲಾಗುತ್ತದೆ. ಹಸಿಕಸ ಮನೆ ಹಂತದಲ್ಲಿ ನಿರ್ವಹಿಸಲಾಗುತ್ತದೆ. SLRM ಕೇಂದ್ರಗಳಲ್ಲಿ ಇದುವರೆಗೆ ಸುಮಾರು 450 ಟನ್ ಗಳಷ್ಟು ಹಸಿ ಹಾಗೂ ಒಣ ವಸ್ತುಗಳನ್ನು ಸಂಗ್ರಹಿಸಲಾಗಿದ್ದು ವೈಜ್ಞಾನಿಕವಾಗಿ ನಿರ್ವಹಿಸಲಾಗಿದೆ. ಪುನರ್ಬಳಕೆ ಮಾಡಬಹುದಾದ ವಸ್ತುಗಳನ್ನು ಮಾರಾಟ ಮಾಡಿ ಇದುವರೆಗೆ ಸುಮಾರು 8 ಲಕ್ಷ ರೂ. ಆದಾಯಗಳಿಸಲಾಗಿದೆ. ಸುಮಾರು 143 (ಪುರುಷರು ಹಾಗೂ ಮಹಿಳೆಯರು) ಸ್ವಸಹಾಯ ಸಂಘದ ಸದಸ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ.

## ಗ್ರಾ.ಪಂ.ಗೆ ಸಚಿವರ ಭೇಟಿ

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರಾದ ಶ್ರೀ.ಕೃಷ್ಣಬೈರೇಗೌಡರವರು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಕಳ್ಳಿಗೆ ಗ್ರಾಮ ಪಂಚಾಯತಿಗೆ ದಿನಾಂಕ 21/08/2018 ರಂದು ಭೇಟಿ ನೀಡಿದರು. ವಸತಿ ಸಚಿವರು ಹಾಗೂ ದ.ಕ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಯು.ಟಿ ಖಾದರ್, ಮಾಜಿ ಸಚಿವರು ಅರಣ್ಯ ಮತ್ತು ಪರಿಸರ ಜೀವಿಶಾಸ್ತ್ರ ಹಾಗೂ ಮಾಜಿ ಜಿಲ್ಲಾ ಉಸ್ತುವಾರಿ ಸಚಿವರು ರಮಾನಾಥ ರೈ ಹಾಗೂ ಗ್ರಾಮ ಪಂಚಾಯತ್ ಅಧ್ಯಕ್ಷರು ಶ್ರೀಮತಿ ರತ್ನ ಹಾಗೂ ಉಪಾಧ್ಯಕ್ಷರು, ಸದಸ್ಯರುಗಳು, ಸ್ಥಳೀಯ ಜನಪ್ರತಿನಿಧಿಗಳು ಸೇರಿದ್ದರು. ನಿರ್ದೇಶಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎಂ.ಆರ್ ರವಿ, ಶ್ರೀಮತಿ ಮಂಜುಳ ಸ್ವಚ್ಛ ಭಾರತ್ ಮಿಷನ್ ಮಂಗಳೂರು, ಬಂಟ್ವಾಳ ತಾಲೂಕು ಕಾರ್ಯನಿರ್ವಹಣಾಧಿಕಾರಿ ಶ್ರೀ ರಾಜಣ್ಣ ಹಾಗೂ ಶ್ರೀ ಪ್ರಶಾಂತ್ ಸಹಾಯಕ ನಿರ್ದೇಶಕರು, ತಾಲೂಕು ಪಂಚಾಯತ್ ಬಂಟ್ವಾಳ ಹಾಗೂ ಇಲಾಖಾ ಅಧಿಕಾರಿಗಳು ಉಪಸ್ಥಿತರಿದ್ದು,

ಕಟ್ಟಡದ ವಿನ್ಯಾಸ ಹಾಗೂ ಕಛೇರಿ ವ್ಯವಸ್ಥೇಯ ಬಗ್ಗೆ ಚರ್ಚೆ ನಡೆಸಿದ್ದು, ಗ್ರಾಮ ಪಂಚಾಯತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಬಗ್ಗೆ ಮಾಹಿತಿ ಪಡೆದ ಸಚಿವರು, ಪಂಚಾಯತಿಯಲ್ಲಿ ಒದಗುವ ಸೇವೆಗಳ ಬಗ್ಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯೊಂದಿಗೆ ಮಾತುಕತೆ ನಡೆಸಿದರು. ಪಂಚಾಯತಿ ವ್ಯಾಪ್ತಿಯಲ್ಲಿ ಎಷ್ಟು ಜನಸಂಖ್ಯೆ ಇದೆ, ಪಂಚಾಯತಿಗೆ ಹೆಚ್ಚಾಗಿ ಯಾವ ಸೇವೆಗಳಿಗೆ ಜನರು





ಬರುತ್ತಾರೆ, ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಮನೆಗಳಿಗೆ ಪಂಚಾಯತಿಯಿಂದ ಕುಡಿಯುವ ನೀರಿನ ನೀರಿನ ವ್ಯವಸ್ಥೆ ಹೇಗೆ ಒದಗಿಸಲಾಗುತ್ತಿದೆ ಎಂಬ ಮಾಹಿತಿಗಳನ್ನು ಕೇಳಿದರು. ಕಳ್ಳಿಗೆ ಗ್ರಾಮ ಪಂಚಾಯತಿಯಲ್ಲಿ ಪ್ರಸ್ತುತ ಬಾಪೂಜಿ 100 ಸೇವೆಗಳು ಪಂಚಾಯತ್ ನಲ್ಲಿ ಒದಗಿಸಲು ಆರಂಭವಾಗಿರುವುದರಿಂದ ಜನರು ಹೆಚ್ಚಾಗಿ ಜಾತಿ ಮತ್ತು ಆದಾಯ ಪ್ರಮಾಣ ಪಡೆಯಲು ಬರುತ್ತಾರೆ. ಹಾಗೂ ಪಂಚಾಯತಿ ವ್ಯಾಪ್ತಿಯಲಿ ಸುಮಾರು 700 ಮನೆಗಳಿಗೆ ನಲ್ಲಿ ನೀರಿನ ಮೂಲಕ ನೀರು ಒದಗಿಸಲಾಗುತ್ತಿದೆ. ಅದಕ್ಕೆ ನೀರಿನ ಕರವನ್ನು ಮಾಸಿಕವಾಗಿ ಪಡೆಯಲಾಗುತ್ತಿದೆ. ಕಳ್ಳಿಗೆ ಗ್ರಾಮ ಪಂಚಾಯತಿಯಲ್ಲಿ ಹೆಚ್ಚಾಗಿ ತೆರೆದ ಬಾವಿಯೂ ಇರುವುದರಿಂದ ಉಳಿದ ಗ್ರಾಮಸ್ಥರು ನಲ್ಲಿ ನೀರಿಗೆ ಅವಲಂಬಿತರಾಗಿಲ್ಲ ಎಂದು ಮಾಹಿತಿ ನೀಡಿದರು.

ಕಸದ ವಿಲೇವಾರಿಯ ಬಗ್ಗೆ ಚರ್ಚೆ ನಡೆಸಿದ ಸಚಿವರು ಯಾವ ರೀತಿಯಲ್ಲಿ ಕಸದ ನಿರ್ವಹಣೆಯಾಗುತ್ತಿದೆ ಎಂದು ಕೇಳಿದರು. ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯವರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಮೆನಗಳಲ್ಲೆ ತಮ್ಮ ಕಸ ವಿಲೇವಾರಿಯ ಬಗ್ಗೆ ಜವಾಬ್ದಾರಿಯನ್ನು ತಾವೇ ವಹಿಸುವಂತೆ ಜನರಲ್ಲಿ ಅರಿವು ಮೂಡಿಸಲಾಗಿದೆ ಹಾಗೂ ಜನರೇ ತಮ್ಮ ಹಸಿ ಕಸದ ವಿಲೇವಾರಿ ಮಾಡುತ್ತಿದ್ದಾರೆ ಮತ್ತು ಪ್ಲಾಸ್ಟಿಕ್ ಸಂಗ್ರಹಣೆ ಮಾಡಿ ಪ್ರತಿ ಶನಿವಾರ ಅಂಗನವಾಡಿಗೆ ಕೊಡುತ್ತಾರೆ ಅಲ್ಲಿಂದ ಪಂಚಾಯತಿ ಸಂಗ್ರಹಣೆ ಮಾಡುತ್ತದೆ ಎಂದು ಮಾಹಿತಿ ನೀಡಿದರು.

ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಬಹಳಷ್ಟು ಪರಿಣಾಮಕಾರಿಯಾಗಿ ನಡೆಸಲಾಗುತ್ತಿದೆ. ಕಳ್ಳಿಗೆ ಗ್ರಾಮ ಪಂಚಾಯತಿಯಲ್ಲಿ ಸ್ವಚ್ಛತೆಯ ಸಲುವಾಗಿ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವಂತಹ ಜನರನ್ನು ಎಚ್ಚರಿಸುವಂತಹ ಸ್ವಚ್ಛತೆಯ ಗೀತೆಯ ಕಾಲಿಂಗ್ ಬೆಲ್‌ನ್ನು ಕಳ್ಳಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು 1127 ಮನೆಗಳಿಗೆ ಅಳವಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಳ್ಳಿಗೆ ಗ್ರಾಮ ಪಂಚಾಯತಿಯನ್ನು ಮಾದರಿ ಗ್ರಾಮವನ್ನಾಗಿ ಆಯ್ಕೆ ಮಾಡಲಾಗಿದ್ದು, ಪ್ರಸ್ತುತ ಸುಮಾರು 200 ಮನೆಗಳಿಗೆ ಅಳವಡಿಸಲಾಗಿದೆ ಹಾಗೂ ಪ್ರಗತಿಯಲ್ಲಿದೆ. ಈ ಕಾಲಿಂಗ್ ಬೆಲ್ ಅಭಿಯಾನವನ್ನು ಸ್ವಚ್ಛ ಭಾರತ್ ಮಿಷನ್ ಹಾಗೂ ರಾಮಕೃಷ್ಣ ಮಠ ಮಂಗಳೂರು ಮತ್ತು ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಸಹಯೋಗದಲ್ಲಿ ನಡೆಸಲಾಗುತ್ತಿದೆ. ಇದೊಂದು ವಿನೂತನ ಹಾಗೂ ಯಶಸ್ವಿ ಕಾರ್ಯಕ್ರಮವಾಗಿದೆ. ■

ವರದಿ



**ಕುಮಾರ್**

ಪಂಚಾಯತಿ ಅಭಿವೃದ್ಧಿ ಅಧಿಕಾರಿ,
ಬಾಶೆಟ್ಟಿಹಳ್ಳಿ ಗ್ರಾಪಂ. ಬೆಂಗಳೂರು
(ಗ್ರಾ)

**ಶಿಕ್ಷಣ ಕೊಡುವಷ್ಟು ಸಾಮರ್ಥ್ಯ ಮನುಷ್ಯನಿಗೆ ಯಾವುದೂ ಕೊಡುವುದಿಲ್ಲ. ಓದು ಬರಹ ತಿಳಿದು ಅಂತರಂಗದ ಅರಿವನ್ನು ತಿಳಿದವರು ಸುಜ್ಞಾನಿಯಾಗಿರುತ್ತಾನೆ. ಶಿಕ್ಷಕರಲ್ಲಿ ಪರಿಶ್ರಮ, ಶ್ರದ್ಧೆ, ಆದರ್ಶ ಇದ್ದರೆ ಅದು ಮಕ್ಕಳ ಮೇಲೆ ಉತ್ತಮ ಪರಿಣಾಮ ಬೀರುತ್ತದೆ. ಅಂಕಗಳಿಸುವುದೇ ಗುರಿಯಲ್ಲ. ಮಕ್ಕಳಲ್ಲಿ ಅನ್ವೇಷಣಾ ಮನೋಭಾವ, ಉತ್ತಮ ಪ್ರಜ್ಞೆ ಬೆಳೆಸಿ, ಶಿಕ್ಷಕರು ಅವರ ಪ್ರತಿಭೆಯನ್ನು ಹೊರ ತೆಗೆಯಬೇಕೆಂದು ಸಂಸದರು ಹೇಳಿದರು.**

# ಗ್ರಾಮ ಪಂಚಾಯತಿಗಳಲ್ಲಿ ಆಧಾರ್ ತಿದ್ದುಪಡಿ ಕೇಂದ್ರ

ಸಾರ್ವಜನಿಕರಿಗೆ ತ್ವರಿತಗತಿಯಲ್ಲಿ ಸೇವೆ ಒದಗಿಸುವುದಕ್ಕಾಗಿ ರಾಜ್ಯ ಸರ್ಕಾರವು ಗ್ರಾಮ ಪಂಚಾಯಿತಿಗಳಲ್ಲಿ ಆಧಾರ್ ತಿದ್ದುಪಡಿ ಕೇಂದ್ರಗಳನ್ನು ಸ್ಥಾಪಿಸಿದ್ದು, ದೇಶದಲ್ಲಿ ಈ ಸೌಲಭ್ಯ ಕಲ್ಪಿಸಿದ ಮೊದಲ ರಾಜ್ಯ ಕರ್ನಾಟಕವಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಶ್ರೀ.ಕೃಷ್ಣಭೈರೇಗೌಡ ರವರು ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಆಧಾರ್ ತಿದ್ದುಪಡಿ ಕೇಂದ್ರವನ್ನು ಉದ್ಘಾಟಿಸಿ, ಸರ್ಕಾರಿ ಅಥವಾ ಖಾಸಗಿ ಸೌಲಭ್ಯ ಪಡೆಯಲು ಆಧಾರ ಸ್ತಂಭವಾಗಿರುವ ಆಧಾರ್ ಕಾರ್ಡ್ ವ್ಯಕ್ತಿಯ ಮೂಲ ಗುರುತಿನ ಚೀಟಿಯಾಗಿರುತ್ತದೆ. ರಾಜ್ಯದಲ್ಲಿ ಶೇ.95 ರಷ್ಟು ಜನರು ಆಧಾರ್ ನೋಂದಣಿ ಮಾಡಿಸಿಕೊಂಡಿದ್ದು, ಇವುಗಳಲ್ಲಿ ಸಾಕಷ್ಟು ತಿದ್ದುಪಡಿಗಳು ದಿನಂಪ್ರತಿ ಬರುತ್ತದೆ. ಗ್ರಾಮೀಣ ಜನರು ಆಧಾರ್ ತಿದ್ದುಪಡಿಗಾಗಿ ಸಾಕಷ್ಟು ದೂರ ಕ್ರಮಿಸಬಾರದೆಂದು ಈ ಸಮಸ್ಯೆಗೆ ಪರಿಹಾರವಾಗಿ ಸಾರ್ವಜನಿಕರಿಗೆ ಕೈಗೆಟುಕುವ ಅಂತರ ಹಾಗೂ ಕೈಗೆಟುಕುವ ದರದಲ್ಲಿ ಆಧಾರ್ ತಿದ್ದುಪಡಿ ಮಾಡಲು ಸಹಕಾರವಾಗುವಂತೆ ಗ್ರಾಮ ಪಂಚಾಯಿತಿಗಳಲ್ಲಿ ಆಧಾರ್ ತಿದ್ದುಪಡಿ ಕೇಂದ್ರ ಸ್ಥಾಪಿಸಲಾಗಿದೆ ಎಂದರು. ಸಭೆಯಲ್ಲಿ ಇಲಾಖಾ ಹಿರಿಯ ಅಧಿಕಾರಿಗಳು ಹಾಗೂ ಮುಖ್ಯರಸ್ಥರು ಹಾಜರಿದ್ದರು.

ರಾಜ್ಯದ 6022 ಗ್ರಾಮ ಪಂಚಾಯಿತಿಗಳಲ್ಲೂ ಆಧಾರ್ ತಿದ್ದುಪಡಿ ಕೇಂದ್ರ ಸ್ಥಾಪಿಸಲಾಗಿದ್ದು, ಸಾರ್ವಜನಿಕರ ಮನೆ ವಿಳಾಸ, ಮೊಬೈಲ್ ಸಂಖ್ಯೆ, ಪಿನ್‌ಕೋಡ್, ಹಾಗೂ ಇ-ಮೇಲ್ ಐಡಿಗಳನ್ನು ಆಧಾರ್‌ನಲ್ಲಿ ತಿದ್ದುಪಡಿಮಾಡಲಾಗುವುದು. ಸಾರ್ವಜನಿಕರು ಈ ಸೇವೆಯನ್ನು ಬಳಸಿಕೊಳ್ಳಬೇಕು, ವಿದ್ಯುತ್ ಬಿಲ್ ಪಾವತಿ, ನೀರಿನ ಬಿಲ್ ಪಾವತಿ, ಕಂದಾಯ ಪಾವತಿ, ಬಸ್, ವಿಮಾನ, ರೈಲು ಪ್ರಮಾಣದ ಮುಂಗಡ ಬುಕ್ಕಿಂಗ್ ಸೇವೆ ಸೇರಿದಂತೆ ನಾನಾ ಸೇವೆಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ಒದಗಿಸಲು ಯೋಜನೆ ರೂಪಿಸಲಾಗಿದ್ದು, ಮುಂದಿನ ಒಂದೆರಡು ತಿಂಗಳಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಬೆಂಗಳೂರು-ಒನ್ ಸೇವಾ ಕೇಂದ್ರದ ಮಾದರಿಯಲ್ಲೇ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಮಾಹಿತಿ ನೀಡಿದರು.





ತಾಲ್ಲೂಕು ಕಚೇರಿ, ನಾಡ ಕಚೇರಿ, ಬಾಪೂಜಿ ಸೇವಾ ಕೇಂದ್ರಗಳ ಮೇಲಿನ ಕೆಲಸದ ಒತ್ತಡವನ್ನು ತಪ್ಪಿಸಲು ಗ್ರಾಮ ಪಂಚಾಯಿತಿಗಳಲ್ಲಿ ಸೇವಾ ಕೇಂದ್ರಗಳನ್ನು ಶೀಘ್ರದಲ್ಲಿ ಆರಂಭಿಸಲಾಗುವುದು. ಕೆ-ಸ್ವಾನ್‌ನಲ್ಲಿ ಸರ್ವರ್ ಸಮಸ್ಯೆ ಇರುವುದಿಂದ ರೂ.500 ಕೋಟಿ ವೆಚ್ಚದಲ್ಲಿ ಕೆ-ಸ್ವಾನ್-2 ಎಂಬ ನೆಟ್‌ವರ್ಕ್ ಸೌಲಭ್ಯವನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಇದರಿಂದ ನೆಟ್‌ವರ್ಕ್ ಸಾಮರ್ಥ್ಯದಲ್ಲಿ ಗಣನೀಯ ಏರಿಕೆ ಕಾಣಲಿದೆ. ಕೆಲವು ತಿಂಗಳುಗಳಲ್ಲಿ ಕೆ-ಸ್ವಾನ್-2 ಕಾರ್ಯಾರಂಭಗೊಳ್ಳಲಿದೆ.

ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಡಿಜಿಟಲ್ ಲೈಬ್ರರಿಯನ್ನು ಉದ್ಘಾಟಿಸಿ, ಸದರಿ ಡಿಜಿಟಲ್ ಲೈಬ್ರರಿಯಲ್ಲಿ ಶಾಲಾ/ಕಾಲೇಜು ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕಗಳು, ಇತಿಹಾಸಕ್ಕೆ ಸಂಬಂಧಿಸಿದಂತೆ ಪುಸ್ತಕಗಳು, ವೈದ್ಯಕೀಯ ಪುಸ್ತಕಗಳು, ಸಾಹಿತ್ಯ ಪುಸ್ತಕಗಳು, ಸ್ಪರ್ಧಾತ್ಮಕ ಪರೀಕ್ಷೆ ಪುಸ್ತಕಗಳು ಕೃಷಿಗೆ ಸಂಬಂಧಿಸಿದ ಪುಸ್ತಕಗಳನ್ನು ಮತ್ತು ಇತರೆ ಪುಸ್ತಕಗಳನ್ನು ತಂತ್ರಾಂಶದಲ್ಲಿ ಇಂದಿಕರಿಸಿಲಾಗಿದೆ. ತಂತ್ರಾಂಶವನ್ನು ಹೊರತುಪಡಿಸಿ ಸ್ವ-ಇಚ್ಛೆಯಿಂದ ಓದಲು ಬಯಸುವವರಿಗಾಗಿ ಮುದ್ರಿತ ಪುಸ್ತಕಗಳು ಸಹ ಲಭ್ಯವಿರುತ್ತದೆ. ಇದರಿಂದ ಗ್ರಾಮೀಣ ಜನತೆಗೆ, ಶಾಲಾ ಕಾಲೇಜು ಮಕ್ಕಳಿಗೆ, ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಮತ್ತು ಓದುಗರಿಗೆ ತುಂಬಾ ಅನುಕೂಲವಾಗುವ ರೀತಿಯಲ್ಲಿ ಅಭಿವೃದ್ಧಿ ಪಡಿಸಲಾಗಿರುತ್ತದೆ. ಈ ತಂತ್ರಾಂಶವು ರಾಜ್ಯಕ್ಕೆ ಮಾದರಿಯಾಗಲಿದೆ ಅಪಾರ ಜ್ಞಾನ ಭಂಡಾರವನ್ನು ಹೊಂದಿದೆ ಇದರಿಂದ ಗ್ರಾಮೀಣ ಜನರಿಗೆ ಪ್ರಸ್ತುತ ತಂತ್ರಜ್ಞಾನ ಮತ್ತು ಮಾಹಿತಿಯನ್ನು ಪಡೆಯಲು ತುಂಬಾ ಅನುಕೂಲವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಮಕ್ಕಳ ಭವಿಷ್ಯ ರೂಪಿಸುವವರು ಶಿಕ್ಷಕರು, ಸಮಾಜ ಮತ್ತು ದೇಶದ ಉತ್ತಮ ಭವಿಷ್ಯ ನಿರ್ಮಾಣಕ್ಕೆ ಇವರ ಕೊಡುಗೆ ಬಹುಪಾಲು ಇರುವುದರಿಂದ, ಹಲವು ವೃತ್ತಿಗಳಿಗೆ ಮೀರಿದ ಗೌರವ ಶಿಕ್ಷಕ ವೃತ್ತಿಗಿದ್ದು, ಜವಾಬ್ದಾರಿಯುತ ವೃತ್ತಿಯಾಗಿದೆ. ಸರ್ಕಾರಿ ಶಾಲೆಗಳಿಗೆ ದಾಖಲಾಗುವ ಮಕ್ಕಳ ಪ್ರಮಾಣ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಣೆಯಾದರೆ, ಸರ್ಕಾರಿ ಶಾಲೆಗಳಿಗೆ ದಾಖಲಾಗುವ ಮಕ್ಕಳ ಸಂಖ್ಯೆ ಏರಿಕೆಯಾಗಲಿದೆ. ಆದ್ದರಿಂದ ಶಿಕ್ಷಕರು ಮಕ್ಕಳ ಶಿಕ್ಷಣದ ಬಗ್ಗೆ ಕಾಳಜಿವಹಿಸಿ ಬದಲಾವಣೆ ತರುವ ಸಂಕಲ್ಪ ಮಾಡಿದರೆ ಶಿಕ್ಷಕರ ದಿನಾಚರಣೆಯು ಅರ್ಥಪೂರ್ಣವಾಗುತ್ತದೆ ಎಂದು ತಿಳಿಸಿದರು.

ಸಂಸದರಾದ ಡಾ॥ಎಂ.ವೀರಪ್ಪ ಮೊಯ್ಲಿ ಅವರು ಮಾತನಾಡಿ, ಮೂರು ವರ್ಷ ಹಿಂದೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ, ರಾಜ್ಯಕ್ಕೆ ಮೊದಲನೇ ಸ್ಥಾನ ಪಡೆದಿತ್ತು. ಈಗ 14ನೇ ಸ್ಥಾನದಲ್ಲಿದೆ. ಮುಂದಿನ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಜಿಲ್ಲೆಯ 2400 ಮಕ್ಕಳು ಹಾಜರಾಗಲಿದ್ದಾರೆ. ಎಸ್.ಎಸ್.ಎಲ್.ಸಿ ಫಲಿತಾಂಶ ಹೆಚ್ಚಿಸಲು ಮತ್ತು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಕಾರ್ಯಾಗಾರ ನಡೆಸಲಾಗುವುದು ಹಾಗೂ ಪೂರಕ ಪುಸ್ತಕಗಳನ್ನು ನೀಡಲಾಗುವುದು, ಜಿಲ್ಲೆಯ ಶಿಕ್ಷಕರು ಕೂಡ ಆಸಕ್ತಿ ವಹಿಸಿ ಕರ್ತವ್ಯ ನಿರ್ವಹಿಸಬೇಕೆಂದರು.

ಶಿಕ್ಷಣ ಕೊಡುವಷ್ಟು ಸಾಮರ್ಥ್ಯ ಮನುಷ್ಯನಿಗೆ ಯಾವುದೂ ಕೊಡುವುದಿಲ್ಲ. ಓದು ಬರಹ ತಿಳಿದು ಅಂತರಂಗದ ಅರಿವನ್ನು ತಿಳಿದವರು ಸುಜ್ಞಾನಿಯಾಗಿರುತ್ತಾನೆ. ಶಿಕ್ಷಕರಲ್ಲಿ ಪರಿಶ್ರಮ, ಶ್ರದ್ಧೆ, ಆದರ್ಶ ಇದ್ದರೆ ಅದು ಮಕ್ಕಳ ಮೇಲೆ ಉತ್ತಮ ಪರಿಣಾಮ ಬೀರುತ್ತದೆ. ಅಂಕಗಳಿಸುವುದೇ ಗುರಿಯಲ್ಲ. ಮಕ್ಕಳಲ್ಲಿ ಅನ್ವೇಷಣಾ ಮನೋಭಾವ, ಉತ್ತಮ ಪ್ರಜ್ಞೆ ಬೆಳೆಸಿ, ಶಿಕ್ಷಕರು ಅವರ ಪ್ರತಿಭೆಯನ್ನು ಹೊರ ತೆಗೆಯಬೇಕೆಂದು ಸಂಸದರು ಹೇಳಿದರು. ■

ವರದಿ




**ಜಿ. ಗೋವಿಂದಸ್ವಾಮಿ**


ಉಪ ಕಾರ್ಯದರ್ಶಿ,
ಜಿಲ್ಲಾ ಪಂಚಾಯತ್, ಹಾವೇರಿ.


**ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಉತ್ತಮ ಆಡಳಿತದ ವಿಷಯವಾದ ಹೊಸ ಮಾದರಿಯ ಉದ್ಯೋಗ ಚೀಟಿಯನ್ನು ಮುದ್ರಿಸಿ ಸರಬರಾಜು ಮಾಡಲು ಹಾವೇರಿ ಜಿಲ್ಲೆಯಲ್ಲಿ ಟೆಂಡರ ಮೂಲಕ ಮುದ್ರಣ ಸಂಸ್ಥೆಯನ್ನು ಆಯ್ಕೆಗೊಳಿಸಿದ್ದು, ಸದರಿ ಸಂಸ್ಥೆಯವರು ಜಿಲ್ಲೆಯಿಂದ ನೀಡಿದ 1.55 ಲಕ್ಷ ಚೀಟಿಗಳನ್ನು ಮುದ್ರಿಸಿ ಸರಬರಾಜು ಮಾಡಿದ್ದಾರೆ.**

# ಏಕಿಕೃತ ಉದ್ಯೋಗ ಚೀಟಿ

ಯಾಲಕ್ಕಿ ಹಾರದ ನಾಡು ಹಾವೇರಿ ಜಿಲ್ಲೆ ಸಂತ ಶಿಶುನಾಳ ಶರೀಫರು, ಭಕ್ತಶ್ರೇಷ್ಠ ಕನಕದಾಸರು, ವರಕವಿ ಸರ್ವಜ್ಞ, ಹಾನಗಲ್ಲ ಕುಮಾರ ಶಿವಯೋಗಿಗಳು, ವಾಗೀಶ ಪಂಡಿತಾರಾಧ್ಯರು, ಕಾದಂಬರಿ ಪಿತಾಮಹ ಗಳಗನಾಥರು, ಗಾನಯೋಗಿ ಪಂಚಾಕ್ಷರಿ ಗವಾಯಿಗಳು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ:ವಿನಾಯಕ ಕೃಷ್ಣ ಗೋಕಾಕರು ಮುಂತಾದ ಮಹನೀಯರ ತವರು. ಬ್ರಿಟಿಷರ ವಿರುದ್ಧ ಹೋರಾಡಿ ವೀರ ಮರಣವನ್ನಪ್ಪಿದ ಹುಹಾತ್ಮ ಮೈಲಾರ ಮಹದೇವಪ್ಪನವರು ಹಾವೇರಿ ಜಿಲ್ಲೆಯ ಮೋಟೆಬೆನ್ನೂರಿನವರು ಮತ್ತೊಬ್ಬ ಸ್ವಾತಂತ್ರ ಹೋರಾಟಗಾರರಾಗಿದ್ದ ದಿವಂಗತ ಹಳ್ಳಿಕೇರಿ ಗುದ್ಲೆಪ್ಪನವರು ಹಾವೇರಿ ಜಿಲ್ಲೆಯ ಹೊಸರಿತ್ತಿಯವರು, ಅವರು ಅಲ್ಲಿಯೇ ಗುರುಕುಲ ಮಾದರಿಯಲ್ಲಿ ಗಾಂಧಿ ಗ್ರಾಮೀಣ ಗುರುಕುಲ ಎಂಬ ಹೆಸರಿನ ಶಾಲೆಯನ್ನು ಆರಂಬಿಸಿದ್ದಾರೆ.

ಹಾವೇರಿ ಜಿಲ್ಲೆಯು ಭೌಗೋಳಿಕವಾಗಿ ಅರೇ ನೀರಾವರಿ ಹೊಂದಿದ್ದು, ಶಿಗ್ಗಾಂ ಮತ್ತು ಸವಣೂರು ತಾಲ್ಲೂಕುಗಳಲ್ಲಿ ತುಂಗಾ ಏತ ನೀರು ಲಭ್ಯವಿದ್ದರೆ ಉಳಿದ ತಾಲ್ಲೂಕುಗಳಲ್ಲಿ ಮಳೆಯಾಶ್ರಿತ ಬೆಳೆಯನ್ನು ಬೆಳೆಯುತ್ತಾರೆ. ಕಪ್ಪು ಭೂಮಿಯನ್ನು ಹೊಂದಿರುವ ಜಿಲ್ಲೆಯಲ್ಲಿ ಹೆಚ್ಚಾಗಿ ಬ್ಯಾಡಗಿ ಮೆಣಸಿನ ಕಾಯಿಯನ್ನು ರಾಣಿಬೆನ್ನೂರು ತಾಲ್ಲೂಕು ತೋಟಗಾರಿಕೆ ವೀಳ್ಯದೆಲೆ ಹೆಚ್ಚು ಹೆಸರು ವಾಸಿ. ಕೃಷಿಯೇ ಜಿಲ್ಲೆಯ ಬಹುತೇಕ ಕುಟುಂಬಗಳ ಜೀವನಾಧಾರ. ಹೀಗಾಗಿ ಅರೆ ಉದ್ಯೋಗ ಸಿಗುವ ಕೃಷಿಯಿಂದ ಕುಟುಂಬದ ಯುವಕರು ಹುಬ್ಬಳ್ಳಿಗೆ ವಲಸೆ ಹೋಗುತ್ತಿದ್ದು, ಈ ವಲಸೆ ಹೋಗುವ ಮಂದಿಯನ್ನು ಗುರುತಿಸಿ ಕೇಂದ್ರ ಪುರಸ್ಕೃತ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೆಲಸ ಒದಗಿಸಲು ಹಾವೇರಿ ಜಿಲ್ಲಾ ಪಂಚಾಯಿತಿಯಿಂದ ವರ್ಷದಿಂದ ವರ್ಷಕ್ಕೆ ವಿಭಿನ್ನ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಮೂಲಕ ಹೆಚ್ಚು ಜಾಗೃತಿ ಮೂಡಿಸಲಾಗುತ್ತಿದೆ.



2017–18 ನೇ ಸಾಲಿನಲ್ಲಿ ಕೂಲಿಕಾರರು ಭಾಗವಹಿಸುವ ಕಾಮಗಾರಿ ಸ್ಥಳದಲ್ಲಿ ಆರೋಗ್ಯ ಶಿಬಿರ, ಕಲಾಜಾಥ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಹಮ್ಮಿಕೊಳ್ಳುವ ಮೂಲಕ ಯೋಜನೆಯಡಿ ಹೆಚ್ಚು ಕೂಲಿಕಾರರು ಭಾಗವಹಿಸುವಂತೆ ಮಾಡಲಾಗುತ್ತಿದೆ.

**ಯೋಜನೆಯಡಿ ಪಾರದರ್ಶಕತೆ ಜಾರಿ:** ಗ್ರಾಮೀಣ ಪ್ರದೇಶದ ಗ್ರಾಮದ ಪ್ರತಿ ಕುಟುಂಬದವರು ಉದ್ಯೋಗವನ್ನು ಕೋರಬೇಕಾದರೆ ಉದ್ಯೋಗ ಚೀಟಿಯನ್ನು ಹೊಂದಿರಬೇಕಾಗುತ್ತದೆ. ಉದ್ಯೋಗ ಚೀಟಿಯನ್ನು ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ನೋಂದಾಯಿತ ಕೂಲಿಕಾರರ ಕುಟುಂಬಗಳಿಗೆ ವಿತರಿಸಲಾಗಿದೆ. ವಿತರಣೆಯ ಉದ್ಯೋಗ ಚೀಟಿಗಳು ತಾಲ್ಲೂಕು ಮಟ್ಟದಲ್ಲಿ ಮುದ್ರಿಸಿರುವುದರಿಂದ ತಾಲ್ಲೂಕಿನಿಂದ ತಾಲ್ಲೂಕಿಗೆ ವಿಭಿನ್ನವಾಗಿ ಚಾಲ್ತಿಯಲ್ಲಿರುತ್ತದೆ. 2017–18 ನೇ ಸಾಲಿನಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಹೊಸದಾಗಿ ಜಾರಿಗೊಳಿಸಿರುವ ಏಕಿಕೃತ ಉದ್ಯೋಗ ಚೀಟಿಯನ್ನು ಜಿಲ್ಲಾ ಮಟ್ಟದಲ್ಲೇ ಮುದ್ರಿಸಿ ವಿತರಿಸುವುದು ಹಾಗೂ ಸದರಿ ಉದ್ಯೋಗ ಚೀಟಿಯಲ್ಲಿ ಕೂಲಿಕಾರರು ನಿರ್ವಹಿಸಿದ ಕೂಲಿ ವಿವರವನ್ನು ದಾಖಲಿಸುವ ಮೂಲಕ ಹೆಚ್ಚು ಪಾರದರ್ಶಕತೆಗೊಳಿಸಲಾಗುತ್ತಿದೆ.

## ಉದ್ಯೋಗ ಚೀಟಿಯ ಅವಶ್ಯಕತೆಗಳು :-

1) ಕೂಲಿಕಾರರ ಕುಟುಂಬಗಳು ತಮ್ಮ ಹಕ್ಕು ಬಾಧ್ಯತೆಗಳನ್ನು ಚಲಾಯಿಸಲು.
2) ಕೂಲಿಕಾರರ ಕುಟುಂಬಗಳು ಆಯಾ ಸಾಲಿನಲ್ಲಿ ನಿರ್ವಹಿಸಿದ ಕೂಲಿ ಮಾಹಿತಿಯನ್ನು ಪಡೆಯಲು.
3) ಸಾಮಾಜಿಕ ಪರಿಶೋಧನೆ ವೇಳೆ ಕುಟುಂಬಗಳು ನಿರ್ವಹಿಸಿದ ಕೂಲಿ ವಿವರವನ್ನು ತಾಳೆ ನೋಡಲು.
4) ಕಾಮಗಾರಿ ಅನುಷ್ಠಾನದಲ್ಲಿ ಅವ್ಯವಹಾರಗಳನ್ನು (ಮಿಷನರಿ ಬಳಕೆ, ವಯಸ್ಕರಲ್ಲದವರನ್ನು ಬಳಸಿರುವ ಬಗ್ಗೆ) ತಡೆಯಲು.
5) ಮೇಲಿನ ಅಧಿಕಾರಿಗಳು ಕುಟುಂಬಗಳು ಕೆಲಸ ನಿರ್ವಹಿಸಿದ ಮಾಹಿತಿ ಪರಿಶೀಲನೆಗೆ.
6) ಕುಟುಂಬದ ಗುರುತಿನ ಚೀಟಿಯಾಗಿ ಬಳಸಲು.
7) ಯೋಜನೆಯಡಿ ವ್ಯಕ್ತಿಗತ ಕಾಮಗಾರಿ ಅನುಷ್ಠಾನಿಸಿಕೊಳ್ಳಲು.
8) ಯೋಜನೆಯಡಿ ಇತರೆ ಸೌಲಭ್ಯಗಳನ್ನು ಪಡೆಯಲು.
9) ಪ್ಯಾರಾ-5 ರ ಕುಟುಂಬಗಳು ವಿಶೇಷ ಸೌಲಭ್ಯ ಪಡೆಯಲು.

## ಎಲ್ಲಿ ಮಾಹಿತಿ ಲಭ್ಯ:

1) ಕಾಯ್ದೆಯ ಪ್ರಕರಣ 5 ರಲ್ಲಿ ಅವಕಾಶ
2) ಅನುಸೂಚಿ 2
3) ಕಾರ್ಯಾಚರಣೆ ಮಾರ್ಗಸೂಚಿ ಅಧ್ಯಾಯ 3
4) ಪ್ರಧಾನ ಸುತ್ತೋಲೆ 2018-19

ಹಾವೇರಿ ಜಿಲ್ಲೆಯಲ್ಲಿ ಈಗಾಗಲೇ ಎಲ್ಲ ನೋಂದಾಯಿತ ಕುಟುಂಬಗಳಿಗೆ ಉದ್ಯೋಗ ಚೀಟಿಯನ್ನು ನೀಡಲಾಗಿದ್ದು, ಉದ್ಯೋಗ ಚೀಟಿಗೆ ಅರ್ಜಿ ನಮೂನೆ-1 ನ್ನು ಸಲ್ಲಿಸಿದ 15 ದಿವಸದೊಳಗೆ ಅಗತ್ಯ ದಾಖಲೆಗಳನ್ನು ಪರಿಶೀಲಿಸಿ ಗ್ರಾಮಪಂಚಾಯಿತಿ ಮಟ್ಟದಲ್ಲಿ ವಿತರಣೆ ಮಾಡಲಾಗುತ್ತಿದೆ.

## ಹೊಸ ಉದ್ಯೋಗ ಚೀಟಿಗಳ ಅನುಷ್ಠಾನ:

ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಉತ್ತಮ ಆಡಳಿತದ ವಿಷಯವಾದ ಹೊಸ ಮಾದರಿಯ ಉದ್ಯೋಗ ಚೀಟಿಯನ್ನು ಮುದ್ರಿಸಿ ಸರಬರಾಜು ಮಾಡಲು ಹಾವೇರಿ ಜಿಲ್ಲೆಯಲ್ಲಿ ಟೆಂಡರ ಮೂಲಕ ಮುದ್ರಣ ಸಂಸ್ಥೆಯನ್ನು ಆಯ್ಕೆಗೊಳಿಸಿದ್ದು, ಸದರಿ ಸಂಸ್ಥೆಯವರು ಜಿಲ್ಲೆಯಿಂದ ನೀಡಿದ 1.55 ಲಕ್ಷ ಚೀಟಿಗಳನ್ನು ಮುದ್ರಿಸಿ ಸರಬರಾಜು ಮಾಡಿದ್ದಾರೆ. ಈ ಹೊಸ ಮಾದರಿಯ ಉದ್ಯೋಗ ಚೀಟಿಯಲ್ಲಿ ಸಾಮಾನ್ಯ ವರ್ಗ ಮತ್ತು ವಿಶೇಷ ವರ್ಗದ ಚೀಟಿಗಳನ್ನು ಪ್ರಸಕ್ತ ಸಾಲಿನಲ್ಲಿ



ನೋಂದಾಯಿತಿ ಕೂಲಿಕಾರರ ಕುಟುಂಬಗಳಿಗೆ ವಿತರಿಸಲು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಕ್ರಮವಹಿಸಲಾಗುತ್ತಿದೆ.

ಉತ್ತಮ ಆಡಳಿತದ ಅನುಷ್ಠಾನದಲ್ಲಿ ಹಾವೇರಿ ಜಿಲೆಯಲ್ಲಿ ಉದ್ಯೋಗ ಚೀಟಿಯನ್ನು ಈಗಾಗಲೇ ಜಿಲ್ಲೆಯ ಎಲ್ಲ ಗ್ರಾಮ ಪಂಚಾಯತಿಯಲ್ಲಿ ಹಂಚಿಕೆ ಮಾಡಿ ಯಶಸ್ವಿಗೊಳಿಸಲಾಗಿದೆ. ಅಲ್ಲದೇ 2018-19ನೇ ಸಾಲಿಗೆ ಅನುಷ್ಠಾನಗೊಂಡಿದ್ದು, ಕೂಲಿಕಾರರಿಗೆ ಸದರಿ ಉದ್ಯೋಗ ಚೀಟಿಗಳಲ್ಲಿ ಕೂಲಿಕಾರರ ಕೆಲಸ ನಿರ್ವಹಿಸಿದ ಮತ್ತು ಕೂಲಿ ಒದಗಿಸಿದ ವಿವರಗಳನ್ನು ಸಹ ಇಂದೀಕರಿಸಲಾಗಿದೆ.

## ಹೊಸ ಮಾದರಿಯ ವಾಟ್ಸಪ್ ಗ್ರೂಪ್:

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಮತಿ ಶಿಲ್ಪಾನಾಗ್, ಭಾ.ಆ.ಸೇ, ರವರು ಹೊಸ ಮಾದರಿಯ ಉದ್ಯೋಗ ಚೀಟಿ ವಿತರಣೆಯನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವಿತರಿಸಿರುವ ಬಗ್ಗೆ ಜಿಲ್ಲಾ ಮಟ್ಟದ ವಾಟ್ಸಪ್‌ಗ್ರೂಪ್‌ಗೆ ಛಾಯಾಚಿತ್ರಗಳನ್ನು ಆಯಾ ದಿನದಂದೆ ಕಳುಹಿಸಲು ಸೂಚಿಸಿರುತ್ತಾರೆ. ಅದರಂತೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಉದ್ಯೋಗ ಚೀಟಿ ವಿತರಣೆ ಭರದಿಂದ ಸಾಗಿದ್ದು, ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿ/ಸಿಬ್ಬಂದಿಗಳು ಕೂಲಿಕಾರರ ಕುಟುಂಬಗಳ ಬಳಿ ಹೋಗಿ ಹೊಸ ಮಾದರಿಯ ಉದ್ಯೋಗ ಚೀಟಿಯನ್ನು ವಿತರಿಸಲಾಗುತ್ತಿದೆ.

## ಜಿಲ್ಲಾ / ತಾಲ್ಲೂಕು ಮಟ್ಟದ ಉಸ್ತುವಾರಿ ಸಮಿತಿ ಪರಿಶೀಲನೆ:

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಉತ್ತಮ ಆಡಳಿತ ಅನುಷ್ಠಾನಕ್ಕೆ ರಚಿಸಲಾಗಿರುವ ಜಿಲ್ಲಾ / ತಾಲ್ಲೂಕು ಮಟ್ಟದ ಉಸ್ತುವಾರಿ ಸಮಿತಿಗಳು ಹೊಸ ಮಾದರಿಯ ಉದ್ಯೋಗ ಚೀಟಿ ವಿತರಣೆಯನ್ನು

| ವಿಭಿನ್ನತೆ | |
|---|---|
| **ಹಳೆ ಪದ್ಧತಿಯ ಉದ್ಯೋಗ ಚೀಟಿ** | **ಹೊಸ ಮಾದರಿಯ ಉದ್ಯೋಗ ಚೀಟಿ** |
| ಯೋಜನೆಯಡಿ ವಿತರಿಸಲಾಗಿದ್ದ ಹಳೆ ಮಾದರಿಯ ಉದ್ಯೋಗ ಚೀಟಿಗಳಲ್ಲಿ ಕುಟುಂಬಗಳ ವೈಯಕ್ತಿಕ ವಿವರಗಳು, ಕೂಲಿ ವಿವರಗಳನ್ನು ಐದು ವರ್ಷಗಳವರೆಗೆ ದಾಖಲಿಸಲು ಮತ್ತು ಪ್ರತಿ ವರ್ಷ ಕುಟುಂಬ ನಿರ್ವಹಿಸಿದ ಕೂಲಿ ದಿನಗಳ ಮಾಹಿತಿಯ ಘೋಷ್ವಾರೆ ಒಳಗೊಂಡಿರುವುದಿಲ್ಲ. ಇದಲ್ಲದೆ ಉದ್ಯೋಗ ಚೀಟಿಯಲ್ಲಿ ಅಗತ್ಯ ಕ್ಕಿಂತ ಹೆಚ್ಚಿನ ಮಾಹಿತಿಯನ್ನು ಅಳವಡಿಸಿಕೊಂಡಿದ್ದರಿಂದ ಪ್ರತಿ ಅಪ್‌ಡೇಟ್ ಸಮಯದಲ್ಲಿ ಹೆಚ್ಚು ಸಮಯಾವಕಾಶ ತೆಗೆದುಕೊಳ್ಳುತ್ತಿತ್ತು. | ಹೊಸ ಮಾದರಿಯ ಉದ್ಯೋಗ ಚೀಟಿಯಲ್ಲಿ ಕುಟುಂಬದ ಸಂಕ್ಷಿಪ್ತ ಮಾಹಿತಿ, ಮತ್ತು ಕೂಲಿ ವಿವರಗಳನ್ನು ಐದು ವರ್ಷಗಳವರೆಗೆ ದಾಖಲಿಸಲು ಮತ್ತು ಪ್ರತಿ ವರ್ಷ ಕುಟುಂಬ ನಿರ್ವಹಿಸಿದ ಕೂಲಿ ದಿನಗಳ ಮಾಹಿತಿಯ ಘೋಷ್ವಾರೆಗಳನ್ನು ಒಳಗೊಂಡಿದ್ದು ಇದನ್ನು ಪರಿಶೀಲನೆ ವೇಳೆ ಸುಲಭವಾಗಿ ಮಾಹಿತಿಯನ್ನು ಪಡೆಯಲು ಅನುಕೂಲ. |
| ಹಳೆ ಮಾದರಿಯ ಉದ್ಯೋಗ ಚೀಟಿಯಲ್ಲಿ ಕೂಲಿಕಾರರ ಹಕ್ಕು ಬಾಧ್ಯತೆಗಳ ಬಗ್ಗೆ ಮಾಹಿತಿ ಒಳಗೊಂಡಿರುವುದಿಲ್ಲ. | ಉದ್ಯೋಗ ಚೀಟಿಯನ್ನು ಐಇಸಿ ಸಾಧನವನ್ನಾಗಿ ಬಳಸಿ ಕೊಂಡಿದ್ದು, ಕೂಲಿಕಾರರ ಹಕ್ಕು ಬಾಧ್ಯತೆಗಳು, ಯೋಜನೆಯಡಿ ಅನುಮತಿಸಿದ ವ್ಯಕ್ತಿಗತ ಕಾಮಗಾರಿಗಳು, ಯಂತ್ರಗಳ ಬಳಕೆ ನಿಷೇಧ, ದೂರುಗಳನ್ನು ಸಲ್ಲಿಸಲು ಉಚಿತ ಸಹಾಯವಾಣಿ, ಕಚೇರಿ ವಿಳಾಸವನ್ನು ನೀಡಿರುವುದರಿಂದ ಕೂಲಿಕಾರರಿಗೆ ಪೂರ್ಣ ಮಾಹಿತಿ ಒದಗಿಸಲು ಸಹಕಾರಿಯಾಗಿದೆ. |
| ತಾಲ್ಲೂಕು ಮಟ್ಟದಲ್ಲಿ ವಿಭಿನ್ನ ಉದ್ಯೋಗ ಚೀಟಿ ಬಳಕೆಯಲ್ಲಿತ್ತು. | ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಏಕಿಕೃತ ಉದ್ಯೋಗ ಚೀಟಿ |
| ವಿಶೇಷ ವರ್ಗ (ಪ್ಯಾರಾ-5ರ ಕುಟುಂಬಗಳು) ಕುಟುಂಬಗಳನ್ನು ಗುರುತಿಸಲು ಸಾಧ್ಯವಾಗುತ್ತಿರಲಿಲ್ಲ. | ವಿಶೇಷ ವರ್ಗದ ಕುಟುಂಬಗಳಿಗೆ ಪ್ರತ್ಯೇಕ ಬಣ್ಣದ (ಹಸಿರು) ಉದ್ಯೋಗ ಚೀಟಿಯನ್ನು ನೀಡುತ್ತಿರುವುದರಿಂದ ಸುಲಭವಾಗಿ ಗುರುತಿಸಿ ಸೌಲಭ್ಯವನ್ನು ಒದಗಿಸಲು ಅನುಕೂಲವಾಗಿದೆ. |

ಪರಿಶೀಲನೆ ಮಾಡಲಾಗುತ್ತಿದೆ. ಇದರಿಂದ ಉದ್ಯೋಗ ಚೀಟಿ ವಿತರಣೆಯಲ್ಲಿ ಲೋಪಗಳು ಕಂಡುಬಂದ ಸಮಯದಲ್ಲಿ ಸಂಬಂಧ ಪಟ್ಟ ಅಧಿಕಾರಿ/ಸಿಬ್ಬಂದಿಗಳಿಗೆ ಸೂಕ್ತ ನಿರ್ದೇಶನ ನೀಡುತ್ತಿರುವುದರಿಂದ ನ್ಯೂನ್ಯತೆಗಳು ಕಡಿಮೆಯಾಗುತ್ತಿವೆ.

## ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ತಂಡ ಭೇಟಿ:

ಮೇ 2018 ರ ಮಾಹೆಯಲ್ಲಿ ಹಾವೇರಿ ಜಿಲ್ಲೆಗೆ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ತಂಡವು ಭೇಟಿ ಸಂದರ್ಭದಲ್ಲಿ ಹೊಸ ಮಾದರಿಯ ಉದ್ಯೋಗ ಚೀಟಿ ವಿತರಣೆಯ ಅನುಷ್ಠಾನವನ್ನು ಪರಿಶೀಲನೆ ನಡೆಸಿತು. ರಾಣೆಬೆನ್ನೂರು ಮತ್ತು ಹಿರೇಕೆರೂರು ತಾಲೂಕಿನ ಕೆಲವು ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿದ ತಂಡವು ಕೂಲಿಕಾರರ ಕುಟುಂಬದ ಮಾಹಿತಿ, ಕೆಲಸ ನಿರ್ವಹಿಸಿದ ಮಾಹಿತಿ ಇಂದೀಕರಣ ದಾಖಲಿಸಿರುವುದನ್ನು ಪ್ರಶಂಸೆ ವ್ಯಕ್ತಪಡಿಸಿರುತ್ತದೆ.

ಹೊಸ ಮಾದರಿಯ ಉದ್ಯೋಗ ಚೀಟಿ ವಿತರಣೆ ಮತ್ತು ಬಳಸುತ್ತಿರುವ ಬಗ್ಗೆ ಕೇಂದ್ರ ಮತ್ತು ರಾಜ್ಯ ಮಟ್ಟದ



ಅಧಿಕಾರಿಗಳ ತಂಡ ಪ್ರಶಂಸಿರುವುದು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಇನ್ನಷ್ಟು ಹುರಿದುಂಬಿಸಿದೆ. ವಿತರಣೆಯಾದ ಉದ್ಯೋಗ ಚೀಟಿಯಲ್ಲಿ ಕೂಲಿ ಮಾಹಿತಿಯನ್ನು ಪ್ರತಿ 15 ದಿವಸಕ್ಕೊಮ್ಮೆ ಅಪ್‌ಡೇಟ್ ಮಾಡಿರುವುದನ್ನು ಪರಿಶೀಲಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳುವ ಮೂಲಕ ಇನ್ನೂ ಹೆಚ್ಚು ಪಾರದರ್ಶಕತೆಗೊಳಿಸಲಾಗುವುದು. ■

ವರದಿ



ಡಾ॥ ಸುರೇಶ ನಾಡಗೌಡರ್

ಕುಲಸಚಿವರು
ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್ ರಾಜ್
ವಿಶ್ವಾವಿದ್ಯಾಲಯ, ಗದಗ

# 72ನೇ ಸ್ವಾತಂತ್ರ್ಯೋತ್ಸವ ಸದ್ಭಾವನಾ ದಿನಾಚರಣೆ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ 2018–19 ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳು ಆಗಸ್ಟ್ ಮಾಹೆಯಲ್ಲಿ ಪ್ರಾರಂಭಗೊಂಡಿದ್ದು, ನಿಯಮಿತವಾಗಿ ನಡೆಯುತ್ತಿರುವ ತರಗತಿಗಳೊಂದಿಗೆ ಇತರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ದಿನಾಂಕ 15.08.2018 ರಂದು 72ನೇ ಸ್ವಾತಂತ್ರೋತ್ಸವ ದಿನಾಚರಣೆಯನ್ನು ವಿಜ್ರಂಭಣೆಯಿಂದ ಆಚರಿಸಲಾಯಿತು.

ಭಾರತ ದೇಶದ ಮಾಜಿ ಪ್ರಧಾನಿ ದಿವಂಗತ ರಾಜೀವ ಗಾಂಧಿಯವರ ಜನ್ಮ ದಿನಾಚರಣೆಯ ಪ್ರಯುಕ್ತ ದಿನಾಂಕ: 20.08.2018 ರಂದು ಸದ್ಭಾವನಾ ದಿನಾಚರಣೆಯನ್ನು ಮಾನ್ಯ ಕುಲಪತಿಗಳು, ಕುಲಸಚಿವರು ಹಾಗೂ ಇತರರ ಉಪಸ್ಥಿತಿಯಲ್ಲಿ ಆಚರಿಸಲಾಯಿತು. ದೇಶ ಕಂಡ ಮಹಾನ್ ಪ್ರಧಾನಿ ದಿ. ರಾಜೀವ್ ಗಾಂಧಿಯಾಗಿದ್ದರು, ನಂತರ ದೇಶದ ರಾಜಕೀಯದಲ್ಲಿ ತಮ್ಮದೆ ಆದ ಪಾತ್ರ ನಿರ್ವಹಿಸಿ ಕೆಲವು ಮಹತ್ವದ ನಿರ್ಧಾರಗಳನ್ನು ಕೈಗೊಂಡರು. ಪ್ರಮುಖವಾಗಿ, ತಾಂತ್ರಿಕ ಉದ್ಯಮದ ಮೇಲಿನ ತೆರಿಗೆಯನ್ನು ಕಡಿತಗೊಳಿಸಿದರು, ಮತ್ತು ತಮ್ಮ ಅಧಿಕಾರದ ಅವಧಿಯಲ್ಲಿ ದೂರ ಸಂವಹನ, ರಕ್ಷಣೆ, ಮತ್ತು ವಾಣಿಜ್ಯ ವಿಮಾನಯಾನಕ್ಕೆ ಹೆಚ್ಚಿನ ಒತ್ತು ನೀಡಿದ್ದಲ್ಲದೆ, ಹೆಚ್ಚಿನ ವಿದೇಶಿ ಬಂಡವಾಳವನ್ನು ಆಕರ್ಷಿಸಲು ಕೈಗಾರಿಕೆಗಳನ್ನು ಆಧುನೀಕರಣಗೊಳಿಸಿ ದೇಶದ ಅಭಿವೃದ್ಧಿಯನ್ನು ಸಾಧಿಸಿ ಇಡಿ ವಿಶ್ವವೇ ಭಾರತದತ್ತ ಮುಖ ಮಾಡಿ ನೋಡುವಂತೆ ಶ್ರಮಿಸಿದರು. ತಮ್ಮ ಅಧಿಕಾರ ಅವಧಿಯಲ್ಲಿದ್ದಾಗಲೇ ದುರದೃಷ್ಟಕರವಾಗಿ ಸಾವನ್ನಪ್ಪಿ ದೇಶಕ್ಕಾಗಿ ತಮ್ಮ ಜೀವವನ್ನೆ ಮುಡುಪಾಗಿಟ್ಟವರು ದಿ, ರಾಜೀವ್ ಗಾಂಧಿ ಎಂದರು.

**ಭಾರತ ದೇಶದ ಮಾಜಿ ಪ್ರಧಾನಿ ದಿವಂಗತ ರಾಜೀವ ಗಾಂಧಿಯವರ ಜನ್ಮ ದಿನಾಚರಣೆಯ ಪ್ರಯುಕ್ತ ದಿನಾಂಕ: 20.08.2018 ರಂದು ಸದ್ಭಾವನಾ ದಿನಾಚರಣೆಯನ್ನು ಮಾನ್ಯ ಕುಲಪತಿಗಳು, ಕುಲಸಚಿವರು ಹಾಗೂ ಇತರರ ಉಪಸ್ಥಿತಿಯಲ್ಲಿ ಆಚರಿಸಲಾಯಿತು.**



ದಿವಂಗತ ರಾಜೀವ ಗಾಂಧಿಯವರ 1984 ರಿಂದ 1989ರ ಅವಧಿಯಲ್ಲಿ ಭಾರತದ ಏಳನೇಯ ಪ್ರಧಾನ ಮಂತ್ರಿಯಾಗಿ ಕೈಗೊಂಡಂತಹ ದಿಟ್ಟ ನಿರ್ಣಯಗಳು ದೇಶದ ಅಭಿವೃದ್ಧಿಯಲ್ಲಿ ವಹಿಸಿದ ಪಾತ್ರವನ್ನು ವಿವರಿಸಿದರು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ದ ಪರಿಕಲ್ಪನೆಯನ್ನು ಇಡೀ ದೇಶಕ್ಕೆ ಪರಿಚಯಿಸುವುದರೊಂದಿಗೆ, ಹಳ್ಳಿಗಳ ಅಭಿವೃದ್ದಿಯಾಗದೆ, ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎನ್ನುವ ವಿಷಯವನ್ನು ಅರಿತು, ಪಂಚಾಯತ್ ರಾಜ್ ವ್ಯವಸ್ಥೆ ಹಾಗೂ ಸ್ಥಳೀಯ ಸಂಸ್ಥೆಗಳಾದ ನಗರ



ಸದ್ಭಾವನಾ ದಿನಾಚರಣೆಯಂದು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳಿಂದ ಪ್ರತಿಜ್ಞೆ

ಸಭೆ, ಮುನ್ಸಿಪಾಲ್ಟಿಗಳಿಗೆ ಸಂವಿಧಾನಿಕ ಸ್ಥಾನಮಾನ ನೀಡಲು ಚಾಲನೆ ಒದಗಿಸಿ ಅದರ ಮೂಲಕ ತಳಮಟ್ಟದ ಅಭಿವೃದ್ಧಿಯಿಂದ ಮಾತ್ರ ದೇಶದ ಬೆಳವಣಿಗೆ ಸಾಧ್ಯ ಎಂಬ ಧ್ಯೇಯವನ್ನು ಹೊಂದಿದ ವ್ಯಕ್ತಿ ಅವರಾಗಿದ್ದರೆಂದು ತಿಳಿಸಿ, ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ನಾವೂ ಸಹಿತ ಅಳವಡಿಸಿಕೊಂಡು ನಡೆದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ತಿಳಿಸಿದರು. ನಂತರ ಸದ್ಭಾವನಾ ದಿನಾಚರಣೆಯ ಪ್ರತಿಜ್ಞೆಯನ್ನು ಕೈಗೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಎಲ್ಲಾ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಮಾಜಿ ಪ್ರಧಾನಿ ಅಟಲ ಬಿಹಾರಿ ವಾಜಪೇಯಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿದರು.

2018–19 ನೇ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆದುಕೊಂಡಿರುವ ವಿದ್ಯಾರ್ಥಿಗಳಿಗೆ ಪ್ರಾಂತೀಯ ಆಂಗ್ಲ ಭಾಷಾ ಸಂಸ್ಥೆ (Regional Institute of English), ದಕ್ಷಿಣ ಭಾರತ, ಬೆಂಗಳೂರು ಇವರ ಸಹಯೋಗದಲ್ಲಿ 6 ದಿನಗಳ ಇಂಗ್ಲೀಷ್ ಸಂಹವನ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಈ ಕಾರ್ಯಕ್ರಮದ ಉದ್ಘಾಟನೆಯನ್ನು ದಿನಾಂಕ: 23.08.2018 ರಂದು ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಪ್ರೊ. ಡಾ॥ ಬಿ. ತಿಮ್ಮೇಗೌಡ ಇವರು ನೆರವೇರಿಸಿದರು. ಪ್ರೊ. ಡಾ॥ ಸುರೇಶ. ಫ್ಹಿ. ನಾಡಗೌಡರ, ಕುಲಸಚಿವರು, ಸಂಪನ್ಮೂಲ ವ್ಯಕ್ತಿಗಳಾದ ಪ್ರೊ.. ಸಿ. ರವಿನಾರಾಯಣ, ಸಂಯೋಜಕರು, ಪ್ರೊ. ಹಿತೇಶ ಭರತ್, ಸಿಬ್ಬಂದಿ, ಪ್ರಾಂತೀಯ ಆಂಗ್ಲ ಭಾಷಾ ಸಂಸ್ಥೆ, ದಕ್ಷಿಣ ಭಾರತ, ಬೆಂಗಳೂರು ಇವರು ಕಾರ್ಯಕ್ರಮದಲ್ಲಿದ್ದರು.

ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಪ್ರೊ. ಡಾ॥ ಬಿ. ತಿಮ್ಮೇಗೌಡ ಅವರು ವಿದ್ಯಾರ್ಥಿಗಳಲ್ಲಿ ಆಂಗ್ಲ ಭಾಷೆ ಬರುವುದಿಲ್ಲವೆಂಬ ಕೀಳರಿಮೆ ಇರಬಾರದು, ಶಬ್ದ ಭಂಡಾರ ಹೆಚ್ಚಿಸಿಕೊಂಡು ಇಂಗ್ಲೀಷ ಸಂವಹನ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು, ಇದು ವಿದ್ಯಾರ್ಥಿಗಳಲ್ಲಿ ವಿಶ್ವಾಸವನ್ನು ಮೂಡಿಸುತ್ತದೆಯಲ್ಲದೆ ಅಂತರರಾಜ್ಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಉದ್ಯೋಗವಕಾಶಗಳನ್ನು ಹೆಚ್ಚಿಸುವುದರೊಂದಿಗೆ, ಸ್ವ–ಉದ್ಯೋಗ ಕೈಗೊಳ್ಳಲು ಅವಕಾಶ ನೀಡುತ್ತದೆಂದು ತಿಳಿಸಿದರು. ಜಾಗತೀಕರಣ ಯುಗದಲ್ಲಿ ಇಂಗ್ಲೀಷ ಭಾಷೆ ಅತ್ಯಂತ ಅವಶ್ಯಕವಾಗಿದ್ದು, ಈ ತರಬೇತಿ ಮೂಲಕ ವಿದ್ಯಾರ್ಥಿಗಳು ಇಂಗ್ಲೀಷ ಭಾಷೆಯಲ್ಲಿ ಉತ್ತಮವಾಗಿ ಸಂವಾದಿಸಲು ಕಲಿತು, ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ತಯಾರಾಗಿ ತಮ್ಮ ಜೀವನ ನಿರೂಪಿಸಿಕೊಂಡು, ದೇಶದ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬೇಕೆಂದರು..

ಗ್ರಾಮೀಣ ಭಾಗಗಳಲ್ಲಿ ಸೌಕರ್ಯಗಳ ಕೊರತೆಯಿಂದ ವಿದ್ಯಾರ್ಥಿಗಳು ಆಂಗ್ಲ ಭಾಷೆಯನ್ನು ಸಮರ್ಪಕವಾಗಿ ಕಲಿಯಲು ಸಾಧ್ಯವಾಗುವುದಿಲ್ಲ, ಈ ಕಾರ್ಯಕ್ರಮವು ಅಂತಹ ವಿದ್ಯಾರ್ಥಿಗಳಿಗೆ ದೊರೆತ ಸುವರ್ಣವಕಾಶವಾಗಿದ್ದು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದರು.



**ಇಂಗ್ಲೀಷ್ ಸಂಹವನ ಕೌಶಲ್ಯ ತರಬೇತಿ ಕಾರ್ಯಕ್ರಮದ ಉದ್ಘಾಟನೆ.**

ಪ್ರಸ್ತುತ ಜಗತ್ತಿನಲ್ಲಿ ಆಂಗ್ಲ ಭಾಷೆಯು ಅತೀ ಅವಶ್ಯಕವಾಗಿದ್ದು, ದಿನನಿತ್ಯ ಇಂಗ್ಲೀಷ ಮತ್ತು ಕನ್ನಡ ದಿನಪತ್ರಿಕೆಗಳನ್ನು ಹಾಗೂ ಉತ್ತಮ ಪುಸ್ತಕಗಳನ್ನು ಓದುವುದರಿಂದ ಶಬ್ದ ಭಂಡಾರ ಹೆಚ್ಚಿಸಿಕೊಳ್ಳಬಹುದು, ಆಂಗ್ಲ ಭಾಷೆಯಲ್ಲಿನ ಪರಿಣಿತಿಯು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವುದರೊಂದಿಗೆ ಉದ್ಯೋಗ ಸಂದರ್ಶನಗಳನ್ನು ಯಶಸ್ವಿಯಾಗಿ ಎದುರಿಸುವಲ್ಲಿ ಹಾಗೂ ಜಾಗತಿಕ ಮಟ್ಟದಲ್ಲಿ ವ್ಯಾಪಾರ-ವ್ಯವಹಾರ ನಿರ್ವಹಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ, ಕಠಿಣ ಪರಿಶ್ರಮದಿಂದ ಮಾತ್ರ ವಿದ್ಯಾರ್ಥಿಗಳು ತಮ್ಮ ಜೀವನವನ್ನು ಯಶಸ್ವಿಯಾಗಿ ರೂಪಿಸಿಕೊಳ್ಳಬಹುದು.

ಸಂಪನ್ಮೂಲ ವ್ಯಕ್ತಿಗಳಾದ ಪ್ರೊ. ರವಿ ನಾರಾಯಣ, ಕಾರ್ಯಾಗಾರದ ಪ್ರಯೋಜನವನ್ನು ಆಂಗ್ಲ ಭಾಷೆಯು ಜೀವನ ಕೌಶಲ್ಯಗಳಲ್ಲೊಂದಾಗಿದ್ದು ಇದು ಉತ್ತಮ ಅವಕಾಶಗಳನ್ನು ಪಡೆಯಲು ನೆರವಾಗುತ್ತದೆ. ಬೇರೆ ಯಾವ ವಿಶ್ವವಿದ್ಯಾಲಯದಲ್ಲೂ ಈ ರೀತಿಯ ಪ್ರಯತ್ನಗಳು ನಡೆದಿಲ್ಲ, ಇಂತಹ ವಿಶಿಷ್ಠ ಪ್ರಯತ್ನದ ರೂವಾರಿಗಳಾದ ಕುಲಪತಿಗಳು ಹಾಗೂ ಕುಲಸಚಿವರು ಇವರ ಪ್ರಯತ್ನವನ್ನು ಶ್ಲಾಘಿಸಿದರು. ಈ ವಿಶ್ವವಿದ್ಯಾಲಯವು ಸುಸಜ್ಜಿತ ಗ್ರಂಥಾಲಯವನ್ನು ಹೊಂದಿದ್ದು ಅದರಲ್ಲಿ ಸಂವಹನ ಕೌಶಲ್ಯಕ್ಕೆ ಸಂಬಂಧಿಸಿದ ಹಲವಾರು ಪುಸ್ತಕಗಳಿದ್ದು ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದರು. ಮತ್ತೋರ್ವ ಸಂಪನ್ಮೂಲ ವ್ಯಕ್ತಿಗಳಾದ ಪ್ರೊ. ಹಿತೇಶ ಭಗತ್, ಆಂಗ್ಲ ಭಾಷೆಯು ಸರಳವಾದ ಭಾಷೆಯಾಗಿದ್ದು, ಸತತ ಪ್ರಯತ್ನದಿಂದ ಇದರ ಮೇಲೆ ಪ್ರಭುತ್ವವನ್ನು ಸಾಧಿಸಬಹುದು, ಪಠ್ಯ ಪುಸ್ತಕಗಳೊಂದಿಗೆ, ಇತರ ಸಾಹಿತ್ಯವನ್ನು ಓದುವುದರಿಂದ ಜ್ಞಾನಾರ್ಜನೆಯೊಂದಿಗೆ ಭಾಷಾ ಪ್ರಾವೀಣ್ಯತೆಯನ್ನು ಹೊಂದಬಹುದೆಂದು ತಿಳಿಸಿದರು. ವಿದ್ಯಾರ್ಥಿಗಳು ವಾಟ್ಸ್‌ಅಪ್, ಫೇಸ್ ಬುಕ್‌ಗಳಲ್ಲಿ ತೊಡಗಿ ಕಾಲಹರಣ ಮಾಡುವುದರ ಬದಲಾಗಿ ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳುವುದಕ್ಕೆ ಹೆಚ್ಚು ಸಮಯವನ್ನು ವಿನಿಯೋಗಿಸಬೇಕೆಂದರು. ■



**ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿರುವ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು.**

ವರದಿ



ನಾಗೇಂದ್ರ

ರಾಜ್ಯ ಐಇಸಿ ಕೋಆರ್ಡಿನೇಟರ್, ಬೆಂಗಳೂರು

**ಮಹಾತ್ಮಗಾಂಧಿ ನರೇಗಾ ಯೋಜನೆ ಯಶಸ್ವಿ ಅನುಷ್ಠಾನಿಸಿದ ಗ್ರಾಮ ಪಂಚಾಯಿತಿಗಳನ್ನು ಗುರುತಿಸಿ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಸದರಿ ರಾಷ್ಟ್ರೀಯ ಪ್ರಶಸ್ತಿಯನ್ನು ಪಂಚಾಯತ್‌ರಾಜ್ ಇಲಾಖೆಯು ಪ್ರಶ್ನಾವಳಿ ಮುಖೇನ ಆಯ್ಕೆ ಮಾಡಲಾಗುತ್ತದೆ.**

# ರಾಜ್ಯಕ್ಕೆ ರಾಷ್ಟ್ರೀಯ ಪ್ರಶಸ್ತಿ ಗರಿ

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ 2017–18ನೇ ಸಾಲಿನಲ್ಲಿ ರಾಜ್ಯದಲ್ಲಿ ಉತ್ತಮ ಆಡಳಿತ ನಿರ್ವಹಣೆಗೆ (Good Governance) ರಾಜ್ಯವು ಪ್ರಥಮ ರಾಷ್ಟ್ರೀಯ ಪ್ರಶಸ್ತಿಗೆ ಪಾತ್ರವಾಗಿದೆ. ದಿನಾಂಕ: 11.09.2018 ರಂದು ನವದೆಹಲಿಯ ವಿಗ್ಯಾನ್ ಭವನ, ಪ್ಲೆನರಿ ಸಭಾಂಗಣದಲ್ಲಿ ಸನ್ಮಾನ್ಯ ಶ್ರೀ ನರೇಂದ್ರ ಸಿಂಗ್ ತೋಮರ್, ಗ್ರಾಮೀಣಾಭಿವೃದ್ಧಿ ಮತ್ತು ಖನಿಜ ಸಚಿವರು ಮತ್ತು ಸನ್ಮಾನ್ಯ ಶ್ರೀ ರಾಮ್‌ಕೃಪಾಲ್ ಯಾದವ್, ರಾಜ್ಯ ಸಚಿವರು, ಗ್ರಾಮೀಣಾಭಿವೃದ್ಧಿ ರವರು ಉತ್ತಮ ಆಡಳಿತವನ್ನು (ಹೊಸ ವಿನ್ಯಾಸದ ಉದ್ಯೋಗ ಚೀಟಿ, ಕಾಮಗಾರಿ ಕಡತ, ನಾಗರೀಕ ಮಾಹಿತಿ ನಾಮಫಲಕ ಮತ್ತು 7 ರಿಜಿಸ್ಟರ್ಸ್) ಯಶಸ್ವಿಯಾಗಿ ಅನುಷ್ಠಾನಿಸಿದ್ದನ್ನು ಪರಿಗಣಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಹಾಗೂ ಆಯುಕ್ತಾಲಯಕ್ಕೆ ರಾಷ್ಟ್ರೀಯ ಪ್ರಥಮ ಬಹುಮಾನ ನೀಡಿದರು. ಕಳೆದ ಹನ್ನೊಂದು ವರ್ಷದಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ರಾಜ್ಯಕ್ಕೆ ಸಂಧ ಎರಡನೇ ಪ್ರಶಸ್ತಿಯಾಗಿರುತ್ತದೆ.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳ ಅನುಷ್ಠಾನ, ಜಲ ಸಂರಕ್ಷಣೆ ಮತ್ತು ಗ್ರಾಮೀಣಾಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಿಸಲಾಗುತ್ತಿದೆ. ಈ ಕಾಮಗಾರಿ ಅನುಷ್ಠಾನದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಅನುಷ್ಠಾನ ಪ್ರಕ್ರಿಯೆಯ ದಾಖಲೆ, ಮಾಹಿತಿಯನ್ನು ಹಲವು ವರ್ಷಗಳವರೆಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನಿರ್ವಹಿಸಲು ಉತ್ತಮ ಆಡಳಿತ (Good Governance) ಕಲ್ಪನೆಯನ್ನು ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು 2017–18 ನೇ ಸಾಲಿನಲ್ಲಿ ಜಾರಿಗೆ ತಂದಿದೆ. ಈ ಉತ್ತಮ ಆಡಳಿತದಡಿ ಕೂಲಿಕಾರರು ಕೂಲಿ ಪಡೆಯಲು ಗ್ರಾಮ ಪಂಚಾಯಿತಿಯಿಂದ ಅಧಿಕೃತವಾಗಿ ಹೊಸ ಮಾದರಿಯ ಉದ್ಯೋಗ ಚೀಟಿ, ಕಾಮಗಾರಿ ಅನುಷ್ಠಾನ ಪ್ರಕ್ರಿಯೆಯ ಮಾಹಿತಿಯ 7 ರಿಜಿಸ್ಟರ್ಸ್ ಮತ್ತು 21 ಅಂಶಗಳ ಚೆಕ್‌ಲಿಸ್ಟ್‌ನ ಕಾಮಗಾರಿ ಕಡತ ಹಾಗೂ ಕಾಮಗಾರಿ ಸ್ಥಳದಲ್ಲಿ ನಾಗರೀಕ ಮಾಹಿತಿ ನಾಮಫಲಕ ಅನುಷ್ಠಾನವನ್ನು ಕಡ್ಡಾಯಗೊಳಿಸಿರುತ್ತದೆ. ಈ ಉತ್ತಮ ಆಡಳಿತವನ್ನು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಶೇ.100ರಷ್ಟು ಅನುಷ್ಠಾನಗೊಳಿಸಲು ಮತ್ತು ಉಸ್ತುವಾರಿ ಮಾಡಲು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ತಂಡಗಳನ್ನು ರಚಿಸಲಾಗಿರುತ್ತದೆ. ಸದರಿ ಪ್ರಶಸ್ತಿಯನ್ನು ಉತ್ತಮ ಆಡಳಿತ ಅನುಷ್ಠಾನದಿಂದ ಪಡೆಯುವ ಸಲುವಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಆಯುಕ್ತರು ಗ್ರಾಮೀಣಾಭಿವೃದ್ಧಿರವರ ನೇತೃತ್ವದಲ್ಲಿ ಕಾರ್ಯತಂತ್ರಗಳನ್ನು ರೂಪಿಸಲಾಗಿತ್ತು.

## ರಾಷ್ಟ್ರೀಯ ಪ್ರಶಸ್ತಿಗೆ ಮಾನದಂಡಗಳು:

1) **ಉತ್ತಮ ಆಡಳಿತ ಅನುಷ್ಠಾನ ಪರಿಶೀಲನೆಗೆ ರಾಜ್ಯಕ್ಕೆ 4 ಭಾರಿ ಕೇಂದ್ರ ತಂಡ ಭೇಟಿ:** ಉತ್ತಮ ಆಡಳಿತ ಅನುಷ್ಠಾನವನ್ನು ಪರಿಶೀಲಿಸಲು ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ತಾಂತ್ರಿಕ ತಂಡವು ರಾಜ್ಯಕ್ಕೆ 4 ಭಾರಿ ಭೇಟಿ ನೀಡಿ ಪರಿಶೀಲನೆ ಮಾಡಿದೆ. ಪ್ರಥಮವಾಗಿ ರಾಮನಗರ, ತುಮಕೂರು ಜಿಲ್ಲೆಗಳು, ಎರಡನೇ ಭಾರಿ ಬೆಳಗಾವಿ, ಧಾರವಾಡ ಜಿಲ್ಲೆಗಳು, ಮೂರನೇ ಭಾರಿ ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಬೆಳಗಾವಿ ಜಿಲ್ಲೆಗಳು, ನಾಲ್ಕನೆ ಭಾರಿ ದಾವಣಗೆರೆ, ಹಾವೇರಿ ಮತ್ತು ಶಿವಮೊಗ್ಗ ಜಿಲ್ಲೆಗಳ ಗ್ರಾಮಪಂಚಾಯಿತಿಗಳಿಗೆ ಭೇಟಿ ನೀಡಿ ಉತ್ತಮ ಆಡಳಿತವನ್ನು ಪರಿಶೀಲಿಸಿರುತ್ತದೆ. ರಾಜ್ಯಕ್ಕೆ ಭೇಟಿ ನೀಡಿ ಪರಿಶೀಲಿಸಿದ ಅಂಶಗಳನ್ನು




ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಪ್ರಶಸ್ತಿಗೆ ಮಾನದಂಡವಾಗಿ ಪರಿಗಣಿಸಿದೆ.

2) **ಪಸ್ತಾವನೆ ಸಲ್ಲಿಕೆ:** ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಜ್ಯಗಳಿಂದ ಉತ್ತಮ ಆಡಳಿತ ಅನುಷ್ಠಾನ ಪ್ರಸ್ತಾವನೆಯನ್ನು ಸಲ್ಲಿಸುವಂತೆ 14 ಮೇ 2018 ರಂದು ಸೂಚಿಸಿತ್ತು. ಅದರಂತೆ ರಾಜ್ಯದಿಂದ ಉತ್ತಮ ಆಡಳಿತ ಅನುಷ್ಠಾನಿಸಿದ ಪ್ರಸ್ತಾವನೆಯನ್ನು ಸಿದ್ಧಪಡಿಸಿ ವಿವಿಧ ಜಿಲ್ಲೆಗಳಲ್ಲಿ ಯಶಸ್ವಿ ಅನುಷ್ಠಾನಿಸಿರುವ ಛಾಯಾಚಿತ್ರಗಳು, ಜಿಲ್ಲೆಗಳ ಶ್ರೇಣಿ, ತರಬೇತಿ ಕಾರ್ಯಗಾರ ವಿವರ ಮತ್ತು ಉಸ್ತುವಾರಿ ಸಮಿತಿಗಳ ವಿವರಗಳುಳ್ಳ ಪ್ರಸ್ತಾವನೆಯನ್ನು 28 ಮೇ 2018 ರಂದು ಕಳುಹಿಸಲಾಗಿತ್ತು.

3). **ಪಿಪಿಟಿ ಪ್ರಸೆಂಟೇಷನ್ಸ್:** ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಿಸಿರುವ ಕಾಮಗಾರಿಗಳ ಛಾಯಾಚಿತ್ರಗಳ ಪ್ರತಿಬಿಂಬ ಪ್ರದರ್ಶನ ಪಿಪಿಟಿ ಪ್ರದರ್ಶನವನ್ನು ದಿನಾಂಕ: 23 ಮೇ 2018 ರಂದು ಆಯೋಜಿಸಿತ್ತು. ಸದರಿ ಪಿಪಿಟಿ ಪ್ರದರ್ಶನದಲ್ಲಿ ಉತ್ತಮ ಆಡಳಿತ ಅನುಷ್ಠಾನದ ನಾಲ್ಕು ವಿಷಯದ ಛಾಯಾಚಿತ್ರ ಪ್ರದರ್ಶನವನ್ನು ಜಂಟಿ ನಿರ್ದೇಶಕರು(ತೋಟಗಾರಿಕೆ) ಮತ್ತು ರಾಜ್ಯ ಐಇಸಿ ಸಂಯೋಜಕರು ರವರು ಮಾಡಿದ್ದರು. ಸದರಿ ಪ್ರೆಸೆಂಟೇಷನ್ ಬಗ್ಗೆ ಜಂಟಿ ಕಾರ್ಯದರ್ಶಿಯವರು, ಎಮ್‌ಜಿಎನ್‌ಆರ್‌ಜಿಎ, ಎಮ್‌ಓಆರ್‌ಡಿ ರವರು ಪ್ರಶಂಸೆಯನ್ನು ವ್ಯಕ್ತಪಡಿಸಿದ್ದರು.

ಈ ಮೇಲಿನ ಅಂಶಗಳ ಮೇಲೆ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ತಾಂತ್ರಿಕ ತಂಡವು ರಾಷ್ಟ್ರೀಯ ಪ್ರಶಸ್ತಿಯ ಪ್ರಥಮ ಬಹುಮಾನಕ್ಕೆ ರಾಜ್ಯವನ್ನು ಪರಿಗಣಿಸಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು 7 ಸೆಪ್ಟೆಂಬರ್ 2018 ರಂದು ಘೋಷಿಸಿತು.

**ಪ್ರಶಸ್ತಿ ಪ್ರದಾನ:** ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಇಲಾಖೆಯಡಿ ಬರುವ ವಿವಿಧ ಯೋಜನೆಯಗಳಡಿ ಯಶಸ್ವಿಯಾಗಿ ಅನುಷ್ಠಾನಸಿರುವ ರಾಜ್ಯಗಳಿಗೆ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲು ತೀರ್ಮಾನಿಸಿ ರಾಜ್ಯಗಳಿಂದ ಪ್ರಶಸ್ತಿ ಸ್ವೀಕರಿಸಲು ನಾಮ ನಿರ್ದೇಶನವನ್ನು ಸಲ್ಲಿಸಲು ಸೂಚಿಸಿತ್ತು. ರಾಜ್ಯದಿಂದ ಉತ್ತಮ ಆಡಳಿತ ಅನುಷ್ಠಾನದ ಪ್ರಶಸ್ತಿ ಸ್ವೀಕರಿಸಲು ನಾಮ ನಿರ್ದೇಶನವನ್ನು ಕಳುಹಿಸಲಾಗಿತ್ತು. ದಿನಾಂಕ:11.09.2018 ರಂದು ನವದೆಹಲಿಯ ವಿಗ್ಯಾನ್ ಭವನದ ಪ್ಲೆನರಿ ಸಭಾಂಗಣದಲ್ಲಿ ಸನ್ಮಾನ್ಯ ಶ್ರೀ ನರೇಂದ್ರ ಸಿಂಗ್ ತೋಮರ್, ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಖನಿಜ ಸಚಿವರು ಮತ್ತು ಸನ್ಮಾನ್ಯ ಶ್ರೀ ರಾಮ್‌ಕೃಪಾಲ್ ಯಾದವ್, ರಾಜ್ಯ ಸಚಿವರು, ಗ್ರಾಮೀಣಾಭಿವೃದ್ಧಿ ರವರಿಂದ ಉತ್ತಮ ಆಡಳಿತವನ್ನು (ಹೊಸ ವಿನ್ಯಾಸದ ಉದ್ಯೋಗ ಚೀಟಿ, ಕಾಮಗಾರಿ ಕಡತ, ನಾಗರೀಕ ಮಾಹಿತಿ ನಾಮಫಲಕ ಮತ್ತು 7 ರಿಜಿಸ್ಟರ್ಸ್)ಯಶಸ್ವಿಯಾಗಿ ಅನುಷ್ಠಾನ ವಿಭಾಗದಡಿ ಪ್ರಥಮ ಬಹುಮಾನವನ್ನು ಶ್ರೀಮತಿ ಎಮ್.ವಿ. ಸಾವಿತ್ರಿ, ಕಾರ್ಯದರ್ಶಿಗಳು, ಪಂಚಾಯತ್‌ರಾಜ್ ಇಲಾಖೆ, ಶ್ರೀಮತಿ ಎಮ್.ಕನಗವಲ್ಲಿ, ಆಯುಕ್ತರು ಗ್ರಾಮೀಣಾಭಿವೃದ್ಧಿ, ಶ್ರೀ ವಿ.ಎಮ್, ಮಹೇಶ್, ಜಂಟಿ ನಿರ್ದೇಕರು(ತಾಂತ್ರಿಕ) ಮತ್ತು ಶ್ರೀ ನಾಗೇಂದ್ರ ಕುಮಾರ ಜೆ.ಟಿ, ರಾಜ್ಯ ಐಇಸಿ ಸಂಯೋಜಕರು ರವರು ಪ್ರಶಸ್ತಿಯನ್ನು ಸ್ವೀಕರಿಸಿದರು.

## ಯಶಸ್ವಿ ಅನುಷ್ಠಾನಿಸಿದ ರಾಮನಗರ, ಮಂಡ್ಯ ಮತ್ತು ಬನ್ನಿಕುಪ್ಪೆ-ಬಿ ಗ್ರಾಮಪಂಚಾಯಿತಿಗೆ ರಾಷ್ಟ್ರೀಯ ಪ್ರಶಸ್ತಿ:

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅಂತರ್ಜಲ ವೃದ್ಧಿಗಾಗಿ ಜಲ ಸಂರಕ್ಷಣೆಯ ಕಾಮಗಾರಿಯಾದ ಬಹುಕಮಾನು ತಡೆ ಗೋಡೆ ನಿರ್ಮಾಣವನ್ನು ರಾಮನಗರ ಜಿಲ್ಲೆಯು ಹೆಚ್ಚಿನ ಒತ್ತು ನೀಡಿದೆ. 2016-17 ನೇ ಸಾಲಿನಿಂದ

ಸುಮಾರು 1650 ಬಹುಕಮಾನು ತಡೆಗೋಡೆಗಳನ್ನು ನಿರ್ಮಿಸಿ ಅಂತರ್ಜಲ ವೃದ್ಧಿಗೆ ಆದ್ಯತೆ ನೀಡಿರುವ ಬಗ್ಗೆ ರಾಷ್ಟ್ರೀಯ ಪ್ರಶಸ್ತಿಗೆ ರಾಮನಗರ ಜಿಲ್ಲೆಯಿಂದ ಪ್ರಸ್ತಾವನೆಯನ್ನು ಸಲ್ಲಿಸಿತ್ತು. ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ತಂಡವು ಸದರಿ ಪ್ರಸ್ತಾವನೆಗೆ ಪೂರಕವಾಗಿ ಅಳವಡಿಸಿಕೊಂಡಿರುವ ಮಾನದಂಡಗಳು ಮತ್ತು ಅನುಷ್ಠಾನೋತ್ತರ ಫಲಶೃತಿಗಳ ಬಗ್ಗೆ ಪಿಪಿಟಿ ಪ್ರಸೆಂಟೇಷನ್ ಮಾಡಲು ಸೂಚಿಸಿತ್ತು. ಅದೇ ರೀತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಮನಗರ ಜಿಲ್ಲಾ ಪಂಚಾಯಿತಿ ರವರು ಪಿಪಿಟಿ ಸಾದರಪಡಿಸಿ ಬಂದಿದ್ದರು. ಸದರಿ ಪಿಪಿಟಿ ಸಾದರಪಡಿಸಿದ ಅಂಕಿ ಅಂಶಗಳ ಮೇಲೆ ಪರಿಶೀಲನೆಗೆ ಕೇಂದ್ರ ತಂಡವನ್ನು ಕಳುಹಿಸಿತ್ತು. 7 ಜುಲೈ 2018 ರಂದು ತಂಡದ ಶ್ರೀ ಅಗ್ನಿಪುರೋಹಿತ್ ರವರು ಬಹು ಕಮಾನು ತಡೆಗೋಡೆ ನಿರ್ಮಾಣ ಕಾಮಗಾರಿಯಿಂದ ಆಗಿರುವ ಅಂತರ್ಜಲ ಮಟ್ಟ ಏರಿಕೆ, ಕೃಷಿ ಚಟುವಟಿಕೆ ವಿಸ್ತರಣೆಯನ್ನು ವೀಕ್ಷಿಸಿ ಸಂಬಂಧಿಸಿದ ಅಧಿಕಾರಿ/ಗ್ರಾಮಸ್ಥರೊಂದಿಗೆ ಸಂವಾದ ನಡೆಸಿ ಹೋಗಿದ್ದರು. ಸದರಿ ತಂಡವು ಕಾಮಗಾರಿ ಅನುಷ್ಠಾನದ ಸಕರಾತ್ಮಕ ವರದಿಯನ್ನು ನೀಡಿರುವುದರಿಂದ ಜಿಲ್ಲೆಗಳಲ್ಲಿ ಯಶಸ್ವಿ ಅನುಷ್ಠಾನ ವಿಭಾಗದಡಿ ರಾಮನಗರ ಜಿಲ್ಲೆಯನ್ನು ಆಯ್ಕೆ ಮಾಡಿದ್ದು, 11 ಸೆಪ್ಟೆಂಬರ್ 2018 ರಂದು ರಾಷ್ಟ್ರೀಯ ಪ್ರಶಸ್ತಿಯನ್ನು ಶ್ರೀ ಮುಲೈ ಮಹಿಲನ್, ಎಂ.ಪಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಹಿಂದಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾಗಿದ್ದ ಶ್ರೀಮತಿ ಲತಾ. ಆರ್ ರವರು ಪ್ರಶಸ್ತಿಯನ್ನು ಸ್ವೀಕರಿಸಿದರು.

ಮಹಾತ್ಮಗಾಂಧಿ ನರೇಗಾ ಯೋಜನೆ ಒಗ್ಗೂಡಿಸು ವಿಕೆಯಡಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ತೋಟಗಾರಿಕೆಯ ಈರುಳ್ಳಿ ಗೋದಾಮು ನಿರ್ಮಾಣವನ್ನು ಯಶಸ್ವಿಯಾಗಿ ಅನುಷ್ಠಾನಿಸಿರುತ್ತಾರೆ. ಈರುಳ್ಳಿಗೆ ಉತ್ತಮ ಗುಣಮಟ್ಟ ಬರಲು ಒಂದು ತಿಂಗಳಿಗಿಂತ ಹೆಚ್ಚು ದಿನ ಈರುಳ್ಳಿಯನ್ನು ಶೇಖರಣೆ ಮಾಡಬೇಕಾಗಿರುತ್ತದೆ. ಹೀಗೆ ಸುಮಾರು ಮೂರು ತಿಂಗಳವರೆಗೆ ಶೇಖರಣೆ ಮಾಡುವು ದರಿಂದ ಈರುಳ್ಳಿ ಕೇವಲ ಗುಣಮಟ್ಟ ಮಾತ್ರ ಹೊಂದದೆ ಹೆಚ್ಚು ಬೆಲೆಯು ಕೂಡ ಸಿಗುವುದರಿಂದ ರೈತರು ಬೆಳೆದ ಈರುಳ್ಳಿ ಯನ್ನು ಹೆಚ್ಚು ಕಾಲ ಶೇಖರಣೆ ಮಾಡಲು ಇಷ್ಟಪಡುತ್ತಾರೆ.

ರೈತರು ಒಂದು ಹೆಕ್ಟೇರ್ ಈರುಳ್ಳಿ ಬೆಳೆಯುತ್ತಾರೋ ಅವರಿಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ (ಎನ್‌ಹೆಚ್‌ಎಮ್) ಅಡಿಯಲ್ಲಿ ತೋಟಗಾರಿಕೆ ಇಲಾಖೆ ಮುಖಾಂತರ 25 ಮೆ. ಟನ್ನು ಸಾಮರ್ಥ್ಯದ ಈರುಳ್ಳಿ ಗೋದಾಮನ್ನು ನಿರ್ಮಿಸಿಕೊಳ್ಳಲು ಎನ್‌ಹೆಚ್‌ಎಮ್ ಶೇ.50ರಷ್ಟು ಸಬ್ಸಿಡಿ ಹಣ ನೀಡುತ್ತದೆ ಅಂದರೆ ರೂ.87500/-ಗಳಿಗೆ ಸಬ್ಸಿಡಿ ಮೊತ್ತವನ್ನು ಮಿತಿಗೊಳಿಸಿದೆ. ಆದರೆ ಜಿಲ್ಲೆಯಲ್ಲಿ ಕೃಷಿ ಎನ್‌ಹೆಚ್‌ಎಮ್ ಅಡಿಯಲ್ಲಿ ಈರುಳ್ಳಿ ಗೋದಾಮನ್ನು ನಿರ್ಮಾಣ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ತೋಟಗಾರಿಕೆ ಇಲಾಖೆ, ನಾಗಮಂಗಲ ತಾಲ್ಲೂಕು ಹಾಗೂ ಮಂಡ್ಯ ಜಿಲ್ಲಾ ಪಂಚಾಯಿತಿಯಿಂದ ಸಣ್ಣ ರೈತರು ಈರುಳ್ಳಿ ಗೋದಾಮು ನಿರ್ಮಾಣ ಮಾಡಿಕೊಳ್ಳಲು ಈರುಳ್ಳಿ ಶೇಖರಣ ಗೋದಾಮು ವಿನ್ಯಾಸವು 8 ಮೀ x 3.6 ಮೀ ಅಗಲ ಮತ್ತು ಕೇಂದ್ರ ಛಾವಣಿ 2.1 ಮೀ. ಒಳಗೊಂಡಿರುತ್ತದೆ. ಮೇಲ್ಚಾವಣಿಯ ಇಳಿಜಾರು 1.8 ಮೀ ಎತ್ತರವಿದ್ದು, ಅದರಲ್ಲಿ ನೆಲಮಟ್ಟದಿಂದ 1.1 ಮೀ ಎತ್ತರಕ್ಕೆ ಗೋಡೆಯನ್ನು ನಿರ್ಮಿಸಲಾಗುತ್ತದೆ.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಈರುಳ್ಳಿ ಗೋದಾಮು ನಿರ್ಮಾಣದ ಪ್ರಸ್ತಾವನೆಯನ್ನು ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯಕ್ಕೆ ಕಳುಹಿಸಲಾಗಿತ್ತು. ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ ಪಿಪಿಟಿ ಸಾದರಪಡಿಸಲು ಜಿಲ್ಲೆಗೆ ಸೂಚಿಸಲಾಗಿತ್ತು. ಅದರಂತೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತೋಟಗಾರಿಕೆಯ ಹಿರಿಯ ಸಹಾಯಕ ನಿರ್ದೇಶಕರು ಪಿಪಿಟಿ ಸಾದರಪಡಿಸಿದ್ದರ ಮೇಲೆ ಆಯ್ಕೆ ಸಮಿತಿ ಕಾಮಗಾರಿ ಪರಿಶೀಲನೆಗೆ ತಂಡವನ್ನು ಕಳುಹಿಸಿತ್ತು. ಸದರಿ ತಂಡ ಪರಿಶೀಲಿಸಿ ಈರುಳ್ಳಿ ಬೆಳೆಯುವ ರೈತರಿಗೆ ಅನುಕೂಲವಾಗಿರುವ ಬಗ್ಗೆ ಸಕರಾತ್ಮಕ ವರದಿ ನೀಡಿರುವುದರಿಂದ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಮಾಡಿರುವುದು ತಿಳಿದುಬಂದಿರುತ್ತದೆ. ಸದರಿ ಪ್ರಶಸ್ತಿಯನ್ನು ಶ್ರೀ ಶರತ್ ಬಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು(ಹಿಂದಿನ), ಡಾ.ಕೃಷ್ಣರಾಜು, ಎಮ್, ಉಪ ಕಾರ್ಯದರ್ಶಿಗಳು ಮತ್ತು ಶ್ರೀಮತಿ ಶಾಂತ ಎಮ್, ಹಿರಿಯ ಸಹಾಯಕ ನಿರ್ದೇಶಕರು(ತೋಟಗಾರಿಕೆ) ರವರು ಪ್ರಶಸ್ತಿಯನ್ನು ಸ್ವೀಕರಿಸಿದರು.

ಮಹಾತ್ಮಗಾಂಧಿ ನರೇಗಾ ಯೋಜನೆ ಯಶಸ್ವಿ ಅನುಷ್ಠಾನಿಸಿದ ಗ್ರಾಮ ಪಂಚಾಯಿತಿಗಳನ್ನು ಗುರುತಿಸಿ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಸದರಿ ರಾಷ್ಟ್ರೀಯ ಪ್ರಶಸ್ತಿಯನ್ನು ಪಂಚಾಯತ್‌ರಾಜ್ ಇಲಾಖೆಯು ಪ್ರಶ್ನಾವಳಿ ಮುಖೇನ ಆಯ್ಕೆ ಮಾಡಲಾಗುತ್ತದೆ. ಸದರಿ ಪ್ರಶ್ನಾವಳಿಯನ್ನು ಅತಿಹೆಚ್ಚು ಅಂಕ ಪಡೆದಿರುವ ಒಟ್ಟು 10 ಗ್ರಾಮ ಪಂಚಾಯಿತಿಗಳನ್ನು ಕೇಂದ್ರ ಸರ್ಕಾರ ಆಯ್ಕೆ ಮಾಡಲಾಗುತ್ತಿದ್ದು, ಅದರಲ್ಲಿ ರಾಮನಗರ ಜಿಲ್ಲೆಯ ಬನ್ನಿಕುಪ್ಪೆ-ಬಿ ಗ್ರಾಮ ಪಂಚಾಯಿತಿಯು ಈ ಸಾಲಿನಲ್ಲಿ ಆಯ್ಕೆಯಾಗಿದ್ದು, ಸದರಿ ಪ್ರಶಸ್ತಿಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ.ನೇತ್ರಾವತಿ ಮತ್ತು ಶ್ರೀ.ಮಹೇಶ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಪ್ರಶಸ್ತಿಯನ್ನು ಸ್ವೀಕರಿಸಿದರು. ▪

ವರದಿ



ರಾಚಯ್ಯ ಚೌಕಿಮಠ

(ಪಂಚಾಯತ್ ರಾಜ್–2)

**2018–19ನೇ ಸಾಲಿನಿಂದಲೇ 14ನೇ ಹಣಕಾಸು ಆಯೋಗ ಅನುದಾನವನ್ನು ಪಿ.ಎಫ್. ಎಂ.ಎಸ್. ತಂತ್ರಾಂಶದ ಮೂಲಕ ಗ್ರಾಮ ಪಂಚಾಯತಿಗಳಿಗೆ ವರ್ಗಾಯಿಸಬೇಕಾಗಿದ್ದು ಹಾಗೂ PRIAsoft ಮೂಲಕ ವೆಚ್ಚ ಭರಿಸಬೇಕಾಗಿದೆ. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು 2017–18ನೇ ಸಾಲಿನ 14ನೇ ಹಣಕಾಸು ಆಯೋಗ ಅನುದಾನಕ್ಕೆ ಸಂಬಂಧಿಸಿದಂತೆ ನಗದು ವಹಿಯನ್ನು ಮುಕ್ತಾಯಗೊಳಿಸುವಂತೆ ಹಾಗೂ PRIAsoft ಮೂಲಕ ವೆಚ್ಚ ಭರಿಸಲು ತಿಳಿಸಿರುತ್ತಾರೆ.**

# ಆಡಳಿತದಲ್ಲಿ ಆಧುನಿಕತೆ

ಬದಲಾವಣೆಯೇ ಈ ಜಗದ ನಿಯಮ; ಪ್ರಕೃತಿಯೇ ವರ್ಷದಲ್ಲಿ ಋತುಗಳಿಗನುಸಾರವಾಗಿ ತನ್ನನ್ನು ತಾನು ಬದಲಾಯಿಸಿಕೊಳ್ಳುತ್ತದೆ. ಅದರಂತೆ ವ್ಯವಸ್ಥೆಯಲ್ಲಿ ಕೆಲವು ಮಾರ್ಪಾಟುಗಳೊಂದಿಗೆ ಆಧುನಿಕತೆಯ ಆಲಿಂಗನ (Digital India)ಕ್ಕೆ ಒಳಪಟ್ಟು ಕೇಂದ್ರದಿಂದ ಬಿಡುಗಡೆಯಾಗುವ ಅನುದಾನವು ನೇರವಾಗಿ ಫಲಾನುಭವಿಗಳಿಗೆ ತಲುಪುವ ವ್ಯವಸ್ಥೆ (DBT), ಅನುದಾನದ ಸಮರ್ಪಕವಾದ ಬಳಕೆ & ವೆಚ್ಚದ ಕುರಿತು ವ್ಯವಸ್ಥಿತವಾದ ನಿರ್ವಹಣೆ (PRIAsoft ತಂತ್ರಾಂಶ) ಮಾಡುವ ಸಲುವಾಗಿ ಭಾರತ ಸರ್ಕಾರವು ಹೊಸ ತಂತ್ರಾಂಶವನ್ನು ಜಾರಿಗೆ ತಂದಿರುತ್ತದೆ. ಅದರ ಪರಿಣಾಮವಾಗಿ ಭಾರತ ಸರ್ಕಾರವು ಎಲ್ಲಾ ಕೇಂದ್ರ ಯೋಜನೆಗಳು(CS) ಹಾಗೂ ಕೇಂದ್ರ ಪ್ರಾಯೋಜಿತ ಯೋಜನೆ(CSS)ಗಳನ್ನು ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆ (PFMS)ಯಡಿ ತಳಮಟ್ಟದವರೆಗೆ ಆಧ್ಯತೆಯ ಮೇರೆಗೆ ಆನ್‌ಬೋರ್ಡಿಂಗ್ ಮಾಡಲು ತೀರ್ಮಾನಿಸಿರುತ್ತಾರೆ. ರಾಜ್ಯದಲ್ಲಿ ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆಯಡಿ ಆನ್‌ಬೋರ್ಡ್ ಮಾಡುವ ಮತ್ತು ರೋಲ್‌ಔಟ್ ಪ್ರಕ್ರಿಯೆ ಹರಿವು ಜಾರಿಯಲ್ಲಿದೆ. ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆ (PFMS)ಯಡಿ ಕೇಂದ್ರ ಯೋಜನೆಗಳು(CS) ಹಾಗೂ ಕೇಂದ್ರ ಪ್ರಾಯೋಜಿತ (CSS) ಯೋಜನೆಗಳ ಆನ್‌ಬೋರ್ಡಿಂಗ್ ಮಾಡಲು ಮೇಲ್ವಿಚಾರಣೆಗಾಗಿ ಸರ್ಕಾರದ ಅಪರ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವಿತ್ತೀಯ ಸುಧಾರಣೆ) ಇವರು ಈಗಾಗಲೇ ಒಂದು ಹಂತದ ಎಲ್ಲ ಇಲಾಖೆಗಳ ಮುಖ್ಯಸ್ಥರೊಂದಿಗೆ ಸಭೆಯನ್ನು ನಡೆಸಿರುತ್ತಾರೆ. ಈ ಪ್ರಕ್ರಿಯೆಯು ಸುಲಭವಾಗಿ ಕಾರ್ಯರೂಪಕ್ಕೆ ತರಲು ಬೆಂಗಳೂರಿನ ಕಾಳಿಂಗರಾವ್ ರಸ್ತೆ (ಮಿಷನ್ ರಸ್ತೆ)ಯ ಅನೆಕ್ಸ್.ಪಿ.ಯ 4ನೇ ಮಹಡಿಯ ಯೂನಿಟಿ ಬಿಲ್ಡಿಂಗ್‌ನಲ್ಲಿ ಸಹಾಯಕ ರಾಜ್ಯಮಟ್ಟದ ನೋಡಲ್ ಅಧಿಕಾರಿ, ಹಿರಿಯ ಲೆಕ್ಕಾಧಿಕಾರಿಗಳು ಹಾಗೂ ಅವರ ತಾಂತ್ರಿಕ ತಂಡವು ಅವಿರತವಾಗಿ ಶ್ರಮಿಸುತ್ತಿದೆ. ರಾಜ್ಯಕ್ಕೆ ಕೇಂದ್ರದಿಂದ ಬರುವ ಪ್ರಮುಖ ಅನುದಾನಗಳಾದ 14ನೇ ಹಣಕಾಸು ಆಯೋಗ ಅನುದಾನ, ಪಿ.ಎಂ.ಜಿ.ಎಸ್.ವೈ, ಆರ್.ಜಿ.ಎಸ್.ವೈ, ಸರ್ವಶಿಕ್ಷಣ ಅಭಿಯಾನ ಹಾಗೂ ಕೃಷಿ ಸಿಂಚಾಯಿಯಂತಹ ಇತ್ಯಾದಿ ಯೋಜನೆಗಳು 2018–19ನೇ ಸಾಲಿನಿಂದಲೇ ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆ (PFMS)ಯಡಿ ಜಾರಿಗೆ ತರಲು ನಿರ್ಧರಿಸಿರುತ್ತಾರೆ.

ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆ (PFMS)ಯನ್ನು ರಾಜ್ಯದಲ್ಲಿ ವ್ಯವಸ್ಥಿತವಾಗಿ ಜಾರಿಯಲ್ಲಿ ತರಲು ಈಗಾಗಲೇ ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಸಂಸ್ಥೆ ಇಲ್ಲಿಯ ಅಧಿಕಾರಿಗಳು ತಮಿಳುನಾಡಿನ ಚೆನ್ನೈ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಇ–ಪಂಚಾಯತ್‌ನ ರಾಜ್ಯ ಯೋಜನಾ ವ್ಯವಸ್ಥಾಪಕರು ನವದೆಹಲಿಯ ಜೆ.ಎನ್.ಯು. ಓಲ್ಡ್ ಕ್ಯಾಂಪಸ್‌ನಲ್ಲಿನ INGAF ನಲ್ಲಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಶಾಖೆಯ ಎಫ್.ಓ ಹಾಗೂ ಜಿಲ್ಲಾ ಪಂಚಾಯತಿ ಶಾಖೆಯ ವಿಷಯ ನಿರ್ವಾಹಕರು ತರಬೇತಿಯನ್ನು ಪಡೆದುಕೊಂಡಿರುತ್ತಾರೆ. ಈ ಬಗ್ಗೆ ತರಬೇತಿ ಪಡೆದುಕೊಂಡಿರುವವರು ರಾಜ್ಯ ಮಟ್ಟದ ತರಬೇತುದಾರರಾಗಿ ರಾಜ್ಯದ ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳಿಗೆ / ಇಲಾಖೆಯ ಸಿಬ್ಬಂದಿಗಳಿಗೆ ಅಲ್ಲದೇ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಪಿ.ಎಫ್.ಎಂ.ಎಸ್. ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡಬೇಕಾಗಿದೆ. ಈಗಾಗಲೇ ರಾಜ್ಯದ PFMSನ PMUನ ತಂಡದ ಸಹಾಯದಿಂದ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಜಿಲ್ಲಾ ಯೋಜನಾ




ವ್ಯವಸ್ಥಾಪಕರುಗಳಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ನೀಡಲಾಗಿರುತ್ತದೆ. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳನ್ನು ಎಲ್.ಜಿ.ಡಿ ಕೋಡ್‌ಗಳೊಂದಿಗೆ ಈಗಾಗಲೇ ಮ್ಯಾಪಿಂಗ್ ಮಾಡಲಾಗಿರುತ್ತದೆ. ಇದರೊಂದಿಗೆ 14ನೇ ಹಣಕಾಸು ಆಯೋಗ ಅನುದಾನವನ್ನು ಕಡ್ಡಾಯವಾಗಿ ಪಡೆಯಲು ಹಾಗೂ ಬಳಕೆ ಮಾಡಲು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳನ್ನು ಪಿ.ಎಫ್.ಎಂ.ಎಸ್.ನಲ್ಲಿ ನೋಂದಣಿ/ ಮ್ಯಾಪಿಂಗ್ ಮಾಡುವುದು ಅವಶ್ಯಕವಾಗಿರುತ್ತದೆ.

2018–19ನೇ ಸಾಲಿನಿಂದಲೇ 14ನೇ ಹಣಕಾಸು ಆಯೋಗ ಅನುದಾನವನ್ನು ಪಿ.ಎಫ್.ಎಂ.ಎಸ್. ತಂತ್ರಾಂಶದ ಮೂಲಕ ಗ್ರಾಮ ಪಂಚಾಯತಿಗಳಿಗೆ ವರ್ಗಾಯಿಸಬೇಕಾಗಿದ್ದು ಹಾಗೂ PRIAsoft ಮೂಲಕ ವೆಚ್ಚ ಭರಿಸಬೇಕಾಗಿದೆ. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು 2017–18ನೇ ಸಾಲಿನ 14ನೇ ಹಣಕಾಸು ಆಯೋಗ ಅನುದಾನಕ್ಕೆ ಸಂಬಂಧಿಸಿದಂತೆ ನಗದು ವಹಿಯನ್ನು ಮುಕ್ತಾಯಗೊಳಿಸುವಂತೆ ಹಾಗೂ PRIAsoft ಮೂಲಕ ವೆಚ್ಚ ಭರಿಸಲು ತಿಳಿಸಿರುತ್ತಾರೆ. PRIAsoft ತಂತ್ರಾಂಶವನ್ನು ಪಿ.ಎಫ್.ಎಂ.ಎಸ್ ತಂತ್ರಾಂಶದೊಂದಿಗೆ ಸಂಯೋಜಿಸಲಾಗಿದ್ದು, ಇನ್ನೂ ಮುಂದೆ PRIAsoft ತಂತ್ರಾಂಶವು ಸದರಿ ಯೋಜನೆಯ ನಗದು ಪುಸ್ತಕವಾಗಿ ಕಾರ್ಯನಿರ್ವಹಿಸಲಿದೆ (used for accounting and booking expenditure). ಆದರೆ, ಕರ್ನಾಟಕ ರಾಜ್ಯದಲ್ಲಿ ಗಾಂಧಿ ಸಾಕ್ಷಿ ಕಾಯಕ (work soft) ತಂತ್ರಾಂಶವನ್ನು ಬಳಸಿ ವಿವಿಧ ಯೋಜನೆಗಳ ವೆಚ್ಚವನ್ನು ಭರಿಸಲಾಗುತ್ತಿದೆ. ಗಾಂಧಿ ಸಾಕ್ಷಿ ಕಾಯಕ (work soft) ತಂತ್ರಾಂಶದಲ್ಲಿ ಯಾವ ರೀತಿ ಓಚರ್‌ಗಳನ್ನು ಅಪ್‌ಲೋಡ್ ಮಾಡಲಾಗುತ್ತಿತ್ತೋ ಅದೇ ಮಾದರಿಯಲ್ಲಿ ಈ ತಂತ್ರಾಂಶದಲ್ಲಿಯೂ ಸಹಿತ ಕಾರ್ಯನಿರ್ವಹಿಸಬೇಕಾಗಿದೆ ಹಾಗೂ 14ನೇ ಹಣಕಾಸು ಆಯೋಗ ಅನುದಾನ ವೆಚ್ಚದ ಮಾಹಿತಿಯನ್ನು ಪಿ.ಎಫ್. ಎಂ.ಎಸ್ ತಂತ್ರಾಂಶದಲ್ಲಿ push ಮಾಡುವ ಪ್ರಕ್ರಿಯೆಯು live and real time ಆಧಾರದ ಮೇಲೆ ನಡೆಯುವುದು. ಈಗಾಗಲೇ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಬಳಸಲಾಗುತ್ತಿದ್ದ ಆಯಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಅಧ್ಯಕ್ಷರುಗಳು ಪ್ರತ್ಯೇಕವಾದ ಡಿ.ಎಸ್.ಸಿ (Digital Signature Certificate) ಗಳನ್ನು ಪಿ.ಎಫ್.ಎಂ.ಎಸ್ ತಂತ್ರಾಂಶದಲ್ಲಿ ಮೂಲಕ Login ಆಗಿ ಸಂಯೋಜನೆ ಮಾಡುವುದರೊಂದಿಗೆ, ವೆಂಡರ್‌ಗಳಿಗೆ Payment authorisationನ್ನು ಇದೇ ತಂತ್ರಾಂಶದಲ್ಲಿಯೇ ಮಾಡುವುದು ಅನಿವಾರ್ಯವಾಗಿದೆ. ಗ್ರಾಮ ಪಂಚಾಯತಿಗಳಿಗೆ ಸೇವೆಗಳನ್ನು ಒದಗಿಸುವ ವೆಂಡರ್‌ಗಳ ಮಾಹಿತಿಯನ್ನು ಗ್ರಾಮ ಪಂಚಾಯತಿಯ ಹಂತದಲ್ಲಿಯೇ register ಮಾಡಬೇಕಾಗಿದೆ.

ಈಗಾಗಲೇ ಕೇಂದ್ರ ಯೋಜನೆಯಾದ 14ನೇ ಹಣಕಾಸು ಆಯೋಗ ಅನುದಾನ ಯೋಜನೆಯನ್ನು ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆಯಡಿ ಆನ್‌ಬೋರ್ಡಿಂಗ್ ಮಾಡುವ ಸಲುವಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ರಾಜ್ಯ ಮಟ್ಟದ ಏಜೆನ್ಸಿಯನ್ನು ಪಿ.ಎಫ್.ಎಂ.ಎಸ್ ಪೋರ್ಟಲ್‌ನಲ್ಲಿ ನೊಂದಾಯಿಸಲಾಗಿರುತ್ತದೆ.
- ಈ ಪ್ರಕ್ರಿಯೆ ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಆಯಾ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ಗುರುತಿಸಲಾಗಿದೆ.

ಇವರಿಗೆ ಜಿಲ್ಲಾ ಮಟ್ಟದಲ್ಲಿ ತಾಂತ್ರಿಕವಾಗಿ ಸಹಾಯ ಮಾಡಲು ಅಲ್ಲಿನ ಜಿಲ್ಲಾ ಯೋಜನಾ ವ್ಯವಸ್ಥಾಪಕರುಗಳ ಸೇವೆಯನ್ನು ಪಡೆಯಲು ಸೂಚಿಸಲಾಗಿದೆ.

- ರಾಜ್ಯ ಮಟ್ಟದ ಏಜೆನ್ಸಿಯಡಿಯಲ್ಲಿಯೇ 30 ಜಿಲ್ಲಾ ಪಂಚಾಯತಿಗಳನ್ನು ಉಳಿತಾಯ ಖಾತೆಯ ರಹಿತವಾಗಿ ನೊಂದಾಯಿಸಲಾಗಿರುತ್ತದೆ.
- ಈಗಾಗಲೇ ನೊಂದಾಯಿಸಲಾದ ಜಿಲ್ಲಾ ಪಂಚಾಯತಿಗಳ ಲಾಗಿನ್‌ನಲ್ಲಿಯೇ ತಾಲ್ಲೂಕು ಪಂಚಾಯತಿಗಳನ್ನು ಉಳಿತಾಯ ಖಾತೆ ರಹಿತವಾಗಿ ನೊಂದಾಯಿಸಲಾಗಿರುತ್ತದೆ. ತಾಲ್ಲೂಕು ಮಟ್ಟದಲ್ಲಿ ನೋಡಲ್ ಅಧಿಕಾರಿಗಳಾಗಿ ಆಯಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ನೇಮಿಲಾಗಿದೆ. ಇವರುಗಳಿಗೆ ತಾಂತ್ರಿಕವಾಗಿ ಸಹಾಯ ಮಾಡಲು ಆಯಾ ತಾಲ್ಲೂಕು ಪಂಚಾಯತಿಗಳ ಎಂ.ಐ.ಎಸ್ ಸಮಾಲೋಚಕರು ಕಾರ್ಯನಿರ್ವಹಿಸಬೇಕಾಗಿದೆ.
- ಈಗಾಗಲೇ ನೊಂದಾಯಿಸಲಾದ ತಾಲ್ಲೂಕು ಪಂಚಾಯತಿಗಳ ಲಾಗಿನ್‌ನಲ್ಲಿಯೇ ಗ್ರಾಮ ಪಂಚಾಯತಿಗಳನ್ನು ಉಳಿತಾಯ ಖಾತೆಯೊಂದಿಗೆ ನೊಂದಾಯಿಸಲಾಗಿರುತ್ತದೆ. ಗ್ರಾಮ ಪಂಚಾಯತಿಗಳನ್ನು ನೋಂದಾಯಿಸುವ ಸಂದರ್ಭದಲ್ಲಿ ಈ ಕೆಳಕಂಡ ಕೆಲವು ಕಟ್ಟುನಿಟ್ಟಿನ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗಿದೆ.
  - ಈಗಾಗಲೇ ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿರುವ 14ನೇ ಹಣಕಾಸು ಆಯೋಗ ಅನುದಾನದ ಉಳಿತಾಯ ಖಾತೆಗಳನ್ನೇ ಕಡ್ಡಾಯವಾಗಿ ಅಳವಡಿಸುವುದು. ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿರುವ 14ನೇ ಹಣಕಾಸು ಆಯೋಗ ಅನುದಾನದ ಉಳಿತಾಯ ಖಾತೆಗಳನ್ನೇ ಕಡ್ಡಾಯವಾಗಿ ಅಳವಡಿಸಿದಾಗ ಮಾತ್ರ 2018–19ನೇ ಸಾಲಿನಿಂದ ಅನುದಾನವನ್ನು ಪಡೆಯಲು ಸಫಲರಾಗುವಿರಿ.
  - ಉಳಿತಾಯ ಖಾತೆಗಳನ್ನು ತಪ್ಪಾಗಿ ನಮೂದಿಸಕೂಡದು.
  - ಉಳಿತಾಯ ಖಾತೆಗಳ ಏಜೆನ್ಸಿಯು ಆಯಾ ಗ್ರಾಮ ಪಂಚಾಯತಿಗಳ ಹೆಸರಿನಿಂದ ನೋಂದಾಯಿಸುವುದು ಹಾಗೂ ಅವುಗಳನ್ನು ನಿರ್ವಹಿಸುವವರ ನಾಮಧೇಯವನ್ನು ನಮೂದಿಸುವ ಸಂದರ್ಭದಲ್ಲಿ ಆಯಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಹಾಗೂ ಅಲ್ಲಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ನಮೂದಿಸುವುದು. ಆದರೆ ದಯವಿಟ್ಟು ಹುದ್ದೆಗಳನ್ನು ಮಾತ್ರ ನಮೂದಿಸಕ್ಕದ್ದು. ಅಪ್ಪಿತಪ್ಪಿಯೂ ಹೆಸರುಗಳನ್ನು ನಮೂದಿಸದಂತೆ ಎಚ್ಚರವಹಿಸುವುದು.
  - ಅಂತಿಮವಾಗಿ ಎಲ್ಲಾ ಹಂತದ ನೋಂದಣಿ ಪ್ರಕ್ರಿಯೆಯು ಮುಕ್ತಾಯವಾದ ನಂತರ ಕೇಂದ್ರದಿಂದ validationಗೆ ಒಳಗಾಗುತ್ತವೆ.
- ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಈಗಾಗಲೇ ಅಧ್ಯಕ್ಷರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಬಳಸಲಾಗುತ್ತಿರುವ ಡಿಎಸ್‌ಇ ಗಳನ್ನೇ ಪಿ.ಎಫ್. ಎಂ.ಎಸ್/PRIAsoft ತಂತ್ರಾಂಶಗಳೊಂದಿಗೆ ಮ್ಯಾಪಿಂಗ್ ಮಾಡಬೇಕಾಗಿರುತ್ತದೆ.
- PRIAsoft ತಂತ್ರಾಂಶದಲ್ಲಿ 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಮುಕ್ತಾಯಗೊಳಿಸಬೇಕಾಗಿರುತ್ತದೆ.
- ಪಿ.ಎಫ್.ಎಂ.ಎಸ್ ತಂತ್ರಾಂಶದಲ್ಲಿ ವೆಂಡರ್‌ಗಳ ಹಾಗೂ ಸರ್ವೀಸ್ ಪ್ರೊವೈಡರ್‌ಗಳ ಬ್ಯಾಂಕ್ ಖಾತೆಗಳ ಮಾಹಿತಿಯನ್ನು ನೊಂದಾಯಿಸಬೇಕಾಗಿದೆ.
- PRIAsoft ತಂತ್ರಾಂಶದ ಬಳಕೆಯ ಬಗ್ಗೆ cascade ಮಾದರಿಯಲ್ಲಿ ಪಂಚಾಯತಿಗಳ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಬೇಕಾಗಿದೆ.

**ಚೌಕ್:** ಹೊಸ ವ್ಯವಸ್ಥೆಗೆ ಒಗ್ಗಿಕೊಳ್ಳಬೇಕಾದ ಅನಿವಾರ್ಯ ಒದಗಿ ಬಂದಿದೆ. ಈ ನಿಟ್ಟಿನಲ್ಲಿ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಅವರವರಿಗೆ ನೀಡಿದ ಜವಬ್ದಾರಿಗಳನ್ನು ಸಮರೋಪಾದಿಯಲ್ಲಿ ಮಾಡಿಮುಗಿಸಿದರೆ ಮುಂದಿನ ದಿನಗಳಲ್ಲಿ ರಾಜ್ಯಕ್ಕೆ ದೊರೆಯಬೇಕಾದ ಅನುದಾನವು ಲಭ್ಯವಾಗುವಲ್ಲಿ ಎರಡು ಮಾತಿಲ್ಲ. ಈ ಹಿಂದೆ ರಾಜ್ಯದ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳ ಸಹಕಾರದಿಂದ 2017–18ನೇ ಸಾಲಿನ ಕಾರ್ಯಕ್ಷಮತೆ ಅನುದಾನವನ್ನು ರಾಜ್ಯವು ಪಡೆಯಬೇಕಾದರೆ ತಮ್ಮ ಶ್ರಮವನ್ನು ಈ ಸಂದರ್ಭದ ಮೂಲಕ ಶ್ಲಾಘೀಸತ್ತಿದ್ದೇವೆ. ಸದ್ಯಕ್ಕೆ 14ನೇ ಹಣಕಾಸು ಆಯೋಗ ಅನುದಾನದ ವಿಷಯದಲ್ಲಿ, ಬಹುಕಾಲದಿಂದ ರಾಜ್ಯ ಸರ್ಕಾರವು ಸೃಷ್ಟಿಸಿ, ಪೋಷಿಸಿ ಬೆಳೆಸಿಕೊಂಡು ಬಂದ ಪಂಚತಂತ್ರ ತಂತ್ರಾಂಶ ಹಾಗೂ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶಗಳನ್ನು ಬದಿಗೊತ್ತಿ, ಬದಲಾವಣೆಯ ನಿಯಮದೊಂದಿಗೆ ಆಧುನಿಕತೆಯ ಆಲಿಂಗನ ಮಾಡಿಕೊಂಡು ನಮ್ಮ ರಾಜ್ಯದ ಮಾದರಿಯಲ್ಲಿಯೇ ಸೃಜಿಸಲಾದ ಕೇಂದ್ರದ ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆ (PFMS) ಹಾಗೂ PRIAsoft ತಂತ್ರಾಂಶಗಳನ್ನು ಒಪ್ಪಿಕೊಳ್ಳಬೇಕಾದ ಸಂದರ್ಭ ನಮ್ಮ ಮುಂದೆ ಎದುರಾಗಿದೆ. ಒಪ್ಪಿಕೊಳ್ಳದೇ ವಿಧಿ ಇಲ್ಲಾ. ■

ವರದಿ

**ಜಿಲ್ಲಾ ಪಂಚಾಯಿತಿ ಮೈಸೂರು**

# ರೈಲು ಮಾದರಿಯಲ್ಲಿ ಸರ್ಕಾರಿ ಶಾಲೆ

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹಾರೋಪುರ ಗ್ರಾಮದಲ್ಲಿ ರೈಲು ಮಾದರಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಿರ್ಮಾಣ ಮಾಡಲಾಗಿದ್ದು, ಗ್ರಾಮೀಣ ಭಾಗದಲ್ಲಿ ನಿರ್ಮಾಣಗೊಳ್ಳುವ ಸರ್ಕಾರಿ ಶಾಲೆಗಳ ಕಟ್ಟಡಗಳು ಯಾವುದೇ ವಿನ್ಯಾಸವಿಲ್ಲದೆ ಗೋದಾಮು ರೀತಿಯಲ್ಲಿ ಗೋಚರಿಸುತ್ತಿವೆ. ಆದರೆ ಹಾರೋಪುರದ ಸರ್ಕಾರಿ ಶಾಲೆಯ ಈ ರೈಲು ಮಾದರಿಯ ಕಟ್ಟಡ ನಗರದ ಖಾಸಗಿ ಶಾಲೆಗಳಿಗೆ ಸೆಡ್ಡು ಹೊಡೆಯುವಂತಾಗಿದೆ. ಬಸ್ ಸೌಕರ್ಯಕೂಡ ಇಲ್ಲದ ನಂಜನಗೂಡು ತಾಲ್ಲೂಕಿನ ಹಾರೋಪುರ ಗ್ರಾಮದಲ್ಲಿ ರೈಲು ಬಂದು ನಿಂತಿದೆ. ಹಳಿಯೆ ಇಲ್ಲದ ಇಲ್ಲಿಗೆ ರೈಲು ಹೇಗೆ ಬಂತು ಎಂದು ಅಚ್ಚರಿಗೊಳ್ಳಬೇಡಿ. ಗ್ರಾಮ್ರದ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುವ ದಿಕ್ಕಿಗೆ ಕರೆದೊಯ್ಯಲು ಜ್ಞಾನ ದೇಗುಲಕ್ಕೆ ಮಕ್ಕಳನ್ನು ಆಕರ್ಷಿಸಲು ಶಿಕ್ಷಕರ ಪರಿಕಲ್ಪನೆಯಲ್ಲಿ ಮೂಡಿರುವ ರೈಲಿನ ಚಿತ್ರಣವಿದು.

ನಂಜನಗೂಡು ತಾಲ್ಲೂಕಿನ ಹಾರೋಪುರ ಗ್ರಾಮಕ್ಕೆ ಇಂದಿಗೂ ಸಾರ್ವಜನಿಕ ಸಾರಿಗೆ ಸಂಪರ್ಕ ವ್ಯವಸ್ಥೆ ಇಲ್ಲ. ಈ ಗ್ರಾಮಕ್ಕೆ ಹೋಗಬೇಕಾದರೆ ಬಿಳುಗಲಿ ಗ್ರಾಮದ ಬಸ್ ನಿಲುಗಡೆಯಿಂದ 4 ಕಿ.ಮೀ, ತಾಯೂರು ಗ್ರಾಮ ಬಸ್ ನಿಲುಗಡೆಯಿಂದ 4 ಕಿ.ಮೀ ಸೇರಿದಂತೆ ಯಾವ ಕಡೆಯಿಂದ ಬಂದು ಬಸ್ ಇಳಿದರು ಸುಮಾರು 4 ಕಿ.ಮೀ ದೂರ ಕಾಲ್ನಡಿಗೆಯಲ್ಲೆ ತಲುಪಬೇಕು. ಇಂತಹ ಸಾರಿಗೆ ಸಂಪರ್ಕ ಇಲ್ಲದ ಹಾರೋಪುರ ಗ್ರಾಮದಲ್ಲಿ 1 ರಿಂದ 7ನೇ ತರಗತಿವರೆಗೆ 55 ಮಕ್ಕಳು ಇರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಾಗಿದೆ.

ಈ ರೈಲು ಮಾದರಿಯ ರೂಪವನ್ನು ಶಾಲೆಗೆ ನೀಡಿದವರು ಆ ಶಾಲೆಯ ಶಿಕ್ಷಕರಾದ ಶ್ರೀ ಬಸವನಾಯಕ, ಶ್ರೀ ದೊರೆಸ್ವಾಮಿ ಎಸ್, ಶ್ರೀಮತಿ ನೇತ್ರಾವತಿ, ಶ್ರೀಮತಿ ತರನಂಖಾನಂರವರು. ಈ ಅದ್ಭುತವಾದ ರೂಪವನ್ನು ನೀಡಲು ಉಂಟಾದ ಖರ್ಚನ್ನು ಸ್ವತಃ ಅಲ್ಲಿನ ಶಿಕ್ಷಕ ವರ್ಗದವರೆ ಭರಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಅನುದಾನವು ಬಿಡುಗಡೆ ಆಗಿರುವುದಿಲ್ಲ.

**ಈ ರೈಲು ಮಾದರಿಯ ರೂಪವನ್ನು ಶಾಲೆಗೆ ನೀಡಿದವರು ಆ ಶಾಲೆಯ ಶಿಕ್ಷಕರಾದ ಶ್ರೀ ಬಸವನಾಯಕ, ಶ್ರೀ ದೊರೆಸ್ವಾಮಿ ಎಸ್, ಶ್ರೀಮತಿ ನೇತ್ರಾವತಿ, ಶ್ರೀಮತಿ ತರನಂಖಾನಂರವರು. ಈ ಅದ್ಭುತವಾದ ರೂಪವನ್ನು ನೀಡಲು ಉಂಟಾದ ಖರ್ಚನ್ನು ಸ್ವತಃ ಅಲ್ಲಿನ ಶಿಕ್ಷಕ ವರ್ಗದವರೆ ಭರಿಸಿರುತ್ತಾರೆ.**






3 ಕೊಠಡಿ ಹೊಂದಿರುವ ಈ ಸರ್ಕಾರಿ ಶಾಲೆಯನ್ನು ಚಿತ್ರ ಕಲಾವಿದರಾದ ಶ್ರೀ ನಾರಾಯಣ್ ಮತ್ತು ಶ್ರೀ ಪ್ರಕಾಶ್ ರವರ ಪ್ರಯತ್ನದಲ್ಲಿ ರೈಲು ಬೋಗಿ ಹಾಗೂ ಇಂಜಿನ್ ಮಾದರಿಯಲ್ಲಿ ಆಕರ್ಷಕವಾಗಿ ಚಿತ್ರಿಸಿದ್ದಾರೆ. ಎರಡು ಕೊಠಡಿಯನ್ನು ರೈಲು ಬೋಗಿಯ ಬಾಗಿಲಿನ ರೂಪದಲ್ಲೇ ಬಣ್ಣ ಹಚ್ಚಿದ್ದಾರೆ.

ಈ ಮಾದರಿಯ ಶಾಲೆಯ ಆಕರ್ಷಣೆಯಿಂದ ಅಲ್ಲಿನ ಎಲ್ಲಾ ಮಕ್ಕಳು ಪ್ರತಿದಿನ ಶಾಲೆಗೆ ತಪ್ಪದೇ ಸಂತಸದಿಂದ ಹಾಜರಾಗುತ್ತಿದ್ದಾರೆ. ರೈಲು ಬೋಗಿಗಳನ್ನೇ ನೋಡದ ವಿದ್ಯಾರ್ಥಿಗಳು ಪ್ರತಿ ದಿನ ರೈಲು ಬೋಗಿಯನ್ನು ಹತ್ತಿ ಕಲಿಯುತ್ತಿರುವುದು ಸಂತಸ ಉಂಟುಮಾಡುತ್ತಿದೆ. ಇದರಿಂದ ದಾಖಲಾತಿ ಮತ್ತು ಹಾಜರಾತಿ ಉತ್ತಮವಾಗಿದೆ. ಗ್ರಾಮಸ್ಥರು, ಜನಪ್ರತಿನಿಧಿಗಳು, ಸಾರ್ವಜನಿಕರು, ಇಲಾಖಾ ಅಧಿಕಾರಿಗಳು ಹಾಗೂ ಮಾಧ್ಯಮದವರು ಶಾಲೆಯತ್ತ ಬರುತ್ತಿದ್ದು, ಮೆಚ್ಚುಗೆಯನ್ನು ವ್ಯಕ್ತ ಪಡಿಪಡಿಸಿ, ಶಾಲಾ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಲು ಮುಂದಾಗಿದ್ದಾರೆ.

ಶಾಲೆಯಲ್ಲಿನ ನಲಿಕಲಿ ಕೊಠಡಿಯು ಬಣ್ಣ ಬಣ್ಣದ ಚಿತ್ರಸಹಿತ ಪದಗಳು ಗೋಡೆಯಲ್ಲಿ ರಚಿತವಾಗಿದ್ದು ಮತ್ತು ಮಕ್ಕಳಲ್ಲಿನ ಸಂತಸ ಕಲಿಕೆ ,ಸ್ವವೇಗದ ಕಲಿಕೆ ,ಹಾಗೂ ಸ್ವಕಲಿಕೆ ಗೆ ಆದ್ಯತೆ ನೀಡಲಾಗಿದೆ.

ಹಲವಾರು ಸಂಘ ಸಂಸ್ಥೆಗಳು ಶಾಲೆಯತ್ತ ಬಂದು ಶಾಲೆಯ ರೂಪವನ್ನು ಮೆಚ್ಚುಗೆ ವ್ಯಕ್ತಪಡಿಸಿ ತಮ್ಮದೇ ಆದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಿ ಮಕ್ಕಳ ಮಾನಸಿಕ ಬೆಳವಣಿಗೆಗೆ ಸಹಕರಿಸಿದ್ದಾರೆ. ಈ ರೈಲು ಮಾದರಿಯ ಶಾಲೆಯನ್ನು ಹಲವಾರು ಮಾಧ್ಯಮದವರು ತಮ್ಮದೇ ಆದ ರೀತಿಯಲ್ಲಿ ಶಾಲೆಯನ್ನು ಶ್ಲಾಘಿಸಿದ್ದಾರೆ.

ಹಾರೋಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ರೈಲು ಬೋಗಿಯ ರೀತಿಯಲ್ಲಿ ಬಣ್ಣ ಬಳಿದಿರುವ ಸುದ್ದಿ ದಿಲ್ಲಿಗೂ ತಲುಪಿದೆ. ಮಕ್ಕಳನ್ನು ಆಕರ್ಷಿಸಲು ಸರ್ಕಾರಿ ಶಾಲೆಯೊಂದು ಕೈಗೊಂಡ ಈ ಕ್ರಮವನ್ನು ರೈಲ್ವೆ ಸಚಿವರಾದ ಶ್ರೀ ಪಿಯೂಷ್ ಗೋಯಲ್ ಶ್ಲಾಘಿಸಿದ್ದಾರೆ. ಸರ್ಕಾರಿ ಶಾಲೆಯನ್ನು ರೈಲು ಬೋಗಿಯಂತೆ ಬಿಂಬಿಸುವ ಪೇಂಟಿಂಗ್ ನಡೆಸಿರುವುದು ನಿಜಕ್ಕೂ ಶ್ಲಾಘನೀಯ.

ತರಗತಿಗಳಿಗೆ ಅನಿಯಮಿತವಾಗಿ ಬರುತ್ತಿದ್ದ ಹಾಗೂ ಶಾಲೆ ಬಿಟ್ಟ ವಿದ್ಯಾರ್ಥಿಗಳು ಮತ್ತೆ ಶಾಲೆಗೆ ಬಂದು ಪೂರ್ಣ ಹಾಜರಾತಿ ಕಾಣಲು ಇದು ನೆರವಾಗಿದೆ ಎಂದು ಸಚಿವ ಪಿಯೂಷ್ ಗೋಯಲ್ ಟ್ವೀಟ್ ಮಾಡಿದ್ದಾರೆ. ■



ವರದಿ



ಮುರಳಿ.ಡಿ

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು,
ಹುಸ್ಕೂರು ಗ್ರಾಮ ಪಂಚಾಯತಿ.
ಆನೇಕಲ್ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ

**ಶುದ್ಧ ಕುಡಿಯುವ ನೀರು ಆರೋಗ್ಯವಂತ ಸಮಾಜದ ಮೂಲಭೂತ ಅಗತ್ಯವಾಗಿದ್ದು, ಪ್ರತಿವರ್ಷ ಹಲವಾರು ಮಂದಿ ಶುದ್ಧ ಕುಡಿಯವ ನೀರು, ನೈರ್ಮಲ್ಯದ ಕೊರತೆಯಿಂದ ಖಾಯಿಲೆಗಳಿಗೆ ತುತ್ತಾಗುವುದನ್ನು ಮನಗೊಂಡು ಬಯೋಕಾನ್ ಕಂಪನಿಯವರಿಗೆ ಪಂಚಾಯತಿ ವತಿಯಿಂದ ಮನವಿ ಸಲ್ಲಿಸಿ, ಅವರ ಸಹಕಾರದೊಂದಿಗೆ ಹುಸ್ಕೂರು ಗ್ರಾಮದಲ್ಲಿ ರೂ.8.00 ಲಕ್ಷ ವೆಚ್ಚದಲ್ಲಿ ಶುದ್ಧ ಕುಡಿಯವ ನೀರಿನ ಘಟಕವನ್ನು (ಕಟ್ಟಡ ಮತ್ತು ಯಂತ್ರೋಪಕರಣ) ಪ್ರಾರಂಭಿಸಲಾಗಿದೆ.**

# ಅಭಿವೃದ್ಧಿಯಲ್ಲಿ ಖಾಸಗಿ ಸಹಭಾಗಿತ್ವ

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹುಸ್ಕೂರು ಗ್ರಾಮ ಪಂಚಾಯತಿಯು ಮೂಲತಃ ಹಸಿರು ವಲಯಕ್ಕೆ ಸೇರಿದ ಗ್ರಾಮ ಪಂಚಾಯತಿ ಆಗಿದ್ದು 2016–17ನೇ ಸಾಲಿನಲ್ಲಿ ರೂ.33,16,607/–ಗಳ ತೆರಿಗೆಯನ್ನು ವಸೂಲಿ ಮಾಡಿದ್ದು, 2017–18 ನೇ ಸಾಲಿನಲ್ಲಿ ರೂ.35,15,442/–ಗಳ ತೆರಿಗೆ ವಸೂಲಾತಿ ಆಗಿದ್ದು ಈ ಮೊತ್ತದ ಜೊತೆಗೆ 14ನೇ ಹಣಕಾಸು ಅನುದಾನ ಮತ್ತು ಎಮ್.ಜಿ.ಎನ್.ಆರ್.ಇ.ಜಿ.ಎ ಯೋಜನೆಯ ಹಣವನ್ನು ಹೊಂದಿಸಿಕೊಂಡು ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು ನಿರ್ವಹಣೆ, ಬೀದಿ ದೀಪ ನಿರ್ವಹಣೆ, ಸಮುದಾಯ ಆಸ್ತಿಗಳ ನಿರ್ವಹಣೆ, ಚರಂಡಿ, ರಸ್ತೆ ಮುಂತಾದ ಶಾಶ್ವತ ಆಸ್ತಿಗಳ ನಿರ್ಮಾಣ, ಅಂಚೆ ಕಛೇರಿ ಕಟ್ಟಡ ಮತ್ತು ಗ್ರಾಮ ಪಂಚಾಯತಿ ಸಭಾಂಗಣ ನಿರ್ಮಾಣ, ನೈರ್ಮಲ್ಯ ಸಂಬಂಧಿತ ಚಟುವಟಿಕೆಗಳ ನಿರ್ವಹಣೆ, ಮಾನವ ದಿನಗಳನ್ನು ಸೃಜಿಸಿ ವಸತಿ ಯೋಜನೆಗಳ ಪ್ರಗತಿ ವೃದ್ಧಿಮಾಡಲಾಗಿರುತ್ತದೆ.

ಗ್ರಾಮ ಪಂಚಾಯತಿ ಅನುದಾನಗಳು ಮತ್ತು ಸ್ವಂತ ಸಂಪನ್ಮೂಲದ ಕೊರತೆಯಿಂದ ಉತ್ತಮ ಪ್ರಗತಿ ಸಾಧಿಸಲು ಸಾಧ್ಯವಾಗದೆ ಇದ್ದ ಸಂದರ್ಭದಲ್ಲಿ, ಗ್ರಾಮ ಪಂಚಾಯತಿಯ ಸರ್ವಾಂಗೀಣ ಅಭಿವೃದ್ಧಿಗೆ ಪಣತೊಟ್ಟ ಪಂಚಾಯತಿಯು, ಸರ್ವ ಸದಸ್ಯರ ಸಹಕಾರದೊಂದಿಗೆ ಖಾಸಗಿ ಸಹಭಾಗಿತ್ವವನ್ನು ಅಪೇಕ್ಷಿಸಿ ನೆರವನ್ನು ಕೋರಲಾಯಿತು. ನಂತರ ನಡೆದ ಬೆಳವಣಿಗೆಗಳು ಅತ್ಯುತ್ತಮ ಫಲಿತಾಂಶಗಳನ್ನು ನೀಡಿದೆ.

## ಖಾಸಗಿ ಸಹಭಾಗಿತ್ವ:

ಹುಸ್ಕೂರು ಗ್ರಾಮ ಪಂಚಾಯಿತಿ ಕೈಗೊಳ್ಳುವ ಅಭಿವೃದ್ದಿಯ ಜೊತೆಯಲ್ಲಿ ಹುಸ್ಕೂರು ಸಮೀಪದಲ್ಲೇ ಇರುವ ಎರಡು ಕಂಪನಿಗಳಾದ "ಬಯೋಕಾನ್" ಮತ್ತು "ಬಾಷ್" ಕಂಪನಿಗಳ ಸಹಭಾಗಿತ್ವ ಮತ್ತು ಸಹಕಾರವನ್ನು ಕೋರಲಾಗಿದ್ದು, ಬಯೋಕಾನ್ ಕಂಪನಿಯನ್ನು ಮೂಲಭೂತ ಸೌಕರ್ಯಗಳ ವೃದ್ದಿಗೆ ಮತ್ತು ಬಾಷ್ ಕಂಪನಿಯನ್ನು ಮಾನವ ಸಂಪನ್ಮೂಲ ಅಭಿವೃದ್ದಿಗೆ ಬಳಸಿಕೊಳ್ಳಲು ತೀರ್ಮಾನಿಸಲಾಯಿತು.

## ಕಲ್ಯಾಣಿ ನಿರ್ಮಾಣ:

ಹುಸ್ಕೂರು ಮದ್ದೂರಮ್ಮ ದೇವಾಲಯ ಇತಿಹಾಸ ಪ್ರಸಿದ್ದ ದೇವಾಲಯವಾಗಿದ್ದು, ನಿತ್ಯ ನೂರಾರು ಭಕ್ತಾಧಿಗಳು ಈ ಕ್ಷೇತ್ರಕ್ಕೆ ಭೇಟಿ ನೀಡುತ್ತಿದ್ದು, ದೇವಾಲಯದ ಹಿಂಭಾಗದಲ್ಲಿದ್ದ ಕಲ್ಯಾಣಿಯನ್ನು ಬಯೋಕಾನ್ ಕಂಪನಿ ವತಿಯಿಂದ ಸುಮಾರು ರೂ.20.00 ಲಕ್ಷಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗಿದ್ದು, ಇದರಿಂದ ದೇವಾಲಯದ ಅಂದ ಮತ್ತು ಪಾವಿತ್ರ್ಯತೆ ಹೆಚ್ಚಿದ್ದಲ್ಲದೆ, ಮಳೆ ನೀರನ್ನು ಹಿಡಿದಿಡುವ ಅತ್ಯುತ್ತಮ ಜಲ ಮೂಲವಾಗಿದೆ.

## ಸಾರ್ವಜನಿಕ ಆಸ್ಪತ್ರೆ:

ಹುಸ್ಕೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಿಗೆ 8 ರಿಂದ 15 ಕಿಮೀ ದೂರದಲ್ಲಿ ಹೆಬ್ಬಗೋಡಿ ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದು, ಅನಾರೋಗ್ಯಕ್ಕೆ ಒಳಗಾದ ಗ್ರಾಮಸ್ಥರು ಆರೋಗ್ಯ ಕೇಂದ್ರಕ್ಕೆ ಹೋಗಲು ತುಂಬಾ ಕಷ್ಟವಾಗುತ್ತಿತ್ತು. ಪಂಚಾಯತಿಯ ಮನವಿಗೆ ಸ್ಪಂಧಿಸಿದ ಬಯೋಕಾನ್ ಕಂಪನಿ ಯವರು ಹುಸ್ಕೂರು ಸರ್ಕಲ್‌ನಲ್ಲಿ ಅತ್ಯುತ್ತಮ ಸಾರ್ವಜನಿಕ ಆಸ್ಪತ್ರೆಯನ್ನು 20 ಲಕ್ಷ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಿ, ಬಯೋಕಾನ್ ಸಂಸ್ಥೆಯವರೇ ನಿರ್ವಹಣೆಯನ್ನು ಸಹ ಮಾಡುತ್ತಿದ್ದು,

ಔಷದಿ ಸಹಿತ ಉಚಿತ ಚಿಕಿತ್ಸೆಯನ್ನು ನೀಡುತ್ತಿದ್ದು, ಪ್ರತಿ ದಿನ ಸರಾಸರಿ 25–30 ರೋಗಿಗಳಂತೆ ವಾರ್ಷಿಕ 4000 ಜನರು ಚಿಕಿತ್ಸೆ ಪಡೆದು ಗುಣಮುಖರಾಗಿದ್ದು, ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಗ್ರಾಮಸ್ಥರ ಆರೋಗ್ಯ ಸ್ಥಿತಿ ಉತ್ತಮಗೊಂಡಿದೆ.

## ಶುದ್ಧ ಕುಡಿಯುವ ನೀರಿನ ಘಟಕ:

ಶುದ್ಧ ಕುಡಿಯುವ ನೀರು ಆರೋಗ್ಯವಂತ ಸಮಾಜದ ಮೂಲಭೂತ ಅಗತ್ಯವಾಗಿದ್ದು, ಪ್ರತಿವರ್ಷ ಹಲವಾರು ಮಂದಿ ಶುದ್ಧ ಕುಡಿಯವ ನೀರು, ನೈರ್ಮಲ್ಯದ ಕೊರತೆ-ಯಿಂದ ಖಾಯಿಲೆಗಳಿಗೆ ತುತ್ತಾಗುವುದನ್ನು ಮನಗೊಂಡು ಬಯೋಕಾನ್ ಕಂಪನಿಯವರಿಗೆ ಪಂಚಾಯತಿ ವತಿಯಿಂದ ಮನವಿ ಸಲ್ಲಿಸಿ, ಅವರ ಸಹಕಾರದೊಂದಿಗೆ ಹುಸ್ಕೂರು ಗ್ರಾಮದಲ್ಲಿ ರೂ.8.00 ಲಕ್ಷ ವೆಚ್ಚದಲ್ಲಿ ಶುದ್ಧ ಕುಡಿಯವ ನೀರಿನ ಘಟಕವನ್ನು (ಕಟ್ಟಡ ಮತ್ತು ಯಂತ್ರೋಪಕರಣ) ಪ್ರಾರಂಭಿಸಲಾಗಿದೆ. ಶುದ್ಧ ಕುಡಿಯುವ ನೀರು ಜನರಿ-ಗೆಲ್ಲ ಲಭ್ಯಗೊಳಿಸಿ ಆರೋಗ್ಯವಂತ ಸಮಾಜ ಕಟ್ಟಲು ಪೂರಕವಾಗಿದೆ. ಒಟ್ಟಾರೆ ರೂ.48.00 ಲಕ್ಷಗಳ ಮೊತ್ತದ ಮೂಲಭೂತ ಸೌಕರ್ಯ ಅಭಿವೃದ್ಧಿಯಿಂದಾಗಿ ಸಾರ್ವಜನಿಕರ ಆರೋಗ್ಯ ಸಮಾಜ ಮತ್ತು ಪರಿಸರ ಉತ್ತಮಗೊಂಡಿದೆ.

## ಯುವ ಸಬಲೀಕರಣ / ಕಂಪ್ಯೂಟರ್ ತರಬೇತಿ ಮತ್ತು ಉದ್ಯೋಗ

ಯುವ ಜನತೆ ಬಡತನ, ನಿರುದ್ಯೋಗದಿಂದ ತಮ್ಮ ಜೀವನ ಮಟ್ಟ ಕುಸಿದಿದ್ದು, ಯುವ ಜನತೆಯ ಆಶಯಗಳಿಗೆ ಒತ್ತು ನೀಡಿ ಸ್ವಾವಲಂಬನೆಯ ಬದುಕು ಕಾಣುವಂತಾಗಲು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು "ಬಾಷ್" ಕಂಪನಿಯ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಲಾಯಿತು.

ಗ್ರಾಮ ಪಂಚಾಯತಿಯಲ್ಲಿದ್ದ ಡಾ॥ಬಿ.ಆರ್. ಅಂಬೇಡ್ಕರ್ ಭವನವನ್ನು ಬಾಷ್ ಕಂಪನಿಯ ಪರಿಣಿತ ಸಿಬ್ಬಂದಿಯಿಂದ ಕಂಪ್ಯೂಟರ್ ತರಬೇತಿ ನೀಡಲು ಅನುವು ಮಾಡಿಕೊಡಲಾಯಿತು. ಡಿಸೆಂಬರ್ 2, 2017 ರಂದು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು ಇವರೆಗೆ 68 ಯುವಕ / ಯುವತಿಯರು ತರಬೇತಿ ಪೂರೈಸಿದ್ದು ಈ ಪೈಕಿ 40 ಯುವಕ / ಯುವತಿಯರು ವಿವಿಧ ಖಾಸಗಿ ಕಂಪನಿಗಳಲ್ಲಿ ಉದ್ಯೋಗವನ್ನು ಸಹ ಪಡೆದಿರುತ್ತಾರೆ. ಈ ಮೂಲಕ ಆರ್ಥಿಕ ಸ್ವಾವಲಂಭನೆ ಸಾಧಿಸಿ ಡಾ॥ಬಿ.ಆರ್. ಅಂಬೇಡ್ಕರ್‌ರವರ ನಿಜವಾದ ಆಶಯವಾದ ಸಾಮಾಜಿಕ ನ್ಯಾಯದ ಆದರ್ಶವನ್ನು ಸಾಕಾರಗೊಳಿಸಿರುತ್ತಾರೆ. ಈ ತರಬೇತಿ ಮುಂದುವರೆಯುತ್ತಿದ್ದು, ಇನ್ನಷ್ಟು ಕುಟುಂಬಗಳು ಆರ್ಥಿಕ ಸ್ವಾವಲಂಭಿಗಳಾಗುವತ್ತ ದಾಪುಗಾಲು ಇರಿಸಿದ್ದಾರೆ.

## ಚಾಲನಾ ತರಬೇತಿ ಮತ್ತು ಉದ್ಯೋಗ

ಚಾಲನಾ ತರಗತಿಗಳನ್ನು ಮಾರ್ಚ್ 16, 2018 ರಂದು ಪ್ರಾರಂಭಮಾಡಿ ಇವರೆಗೆ 32 ಯುವಕರಿಗೆ ಚಾಲನಾ ತರಬೇತಿ ನೀಡಿ, ಚಾಲನಾ ಪರವಾನಗಿಯನ್ನು ಕೊಡಿಸಿ, ಈ ಮೂಲಕ ಪಂಚಾಯತಿ ವ್ಯಾಪ್ತಿಯ ನಿರುದ್ಯೋಗಿ ಯುವಕರು ಸ್ವಯಂ ಉದ್ಯೋಗ ಪಡೆಯಲು ನೆರವಾಗಿದ್ದಾರೆ, ಈ ಮೂಲಕ 32 ಕುಟುಂಬಗಳು ಸ್ವಾವಲಂಭಿಯಾಗಿವೆ.

## ಹೊಲಿಗೆ ತರಬೇತಿ ಮತ್ತು ಉದ್ಯೋಗ

ಗ್ರಾಮ ಪಂಚಾಯತಿಯವರು ಮನವಿ ಮೇರೆಗೆ ಬಾಷ್ ಕಂಪನಿಯವರು 25 ಯುವತಿಯರಿಗೆ ಹೊಲಿಗೆ ತರಬೇತಿ ನೀಡಿ ವಿವಿಧ ಗಾರ್ಮೆಂಟ್ಸ್‌ನಲ್ಲಿ ಉದ್ಯೋಗವನ್ನೂ ಸಹ ಕೊಡಿಸಿರುತ್ತಾರೆ. ಈ ಮೂಲಕ 25 ಕುಟುಂಬಗಳು ಸ್ವಾವಲಂಭಿಗಳಾಗುವುದರ ಜೊತೆಗೆ, ಪಂಚಾಯತಿ ಮಹಿಳೆಯರ ಸ್ತ್ರೀ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಸಾಕಾರಗೊಳಿಸಲಾಗಿದೆ.

## ಸ್ತ್ರೀ ಶಕ್ತಿ ಮತ್ತು ಸ್ವ-ಸಹಾಯ ಗುಂಪುಗಳ ಮಹಿಳೆಯರಿಗೆ ಸಿಹಿ ತಿನಿಸುಗಳ ತಯಾರಿಕಾ ತರಭೇತಿ

ಗ್ರಾಮ ಪಂಚಾಯತಿಯವರ ಮನವಿ ಮೇರೆಗೆ ಬಾಷ್ ಕಂಪನಿಯವರು 10 ಸ್ತ್ರೀ ಶಕ್ತಿ ಮತ್ತು ಸ್ವ-ಸಹಾಯ ಗುಂಪುಗಳ ಮಹಿಳೆಯರಿಗೆ ಸಿಹಿ ತಿನಿಸುಗಳ ತಯಾರಿಕಾ ತರಭೇತಿಯನ್ನು ಕೊಡಿಸಿರುತ್ತಾರೆ. ಈ ಮೂಲಕ ಸ್ತ್ರೀಶಕ್ತಿ ಸಂಘಗಳ ಸ್ವಯಂ ಉದ್ಯೋಗ ಮತ್ತು ಗಳಿಕೆಯ ಪರಿಕಲ್ಪನೆಯನ್ನು ಉತ್ತೇಜನಗೊಳಿಸಲಾಗಿದೆ.

## ಪರಿಸರ ಸಂರಕ್ಷಣೆ:

ಗ್ರಾಮ ಪಂಚಾಯತಿ ಮನವಿ ಮೇರೆಗೆ ಜೂನ್ 5 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಆಯೋಜಿಸಲಾಗಿದ್ದು, ಪರಿಸರ ದಿನಾಚರಣೆಯಂದು ನಾವು ನಮ್ಮ ಹುಸ್ಕೂರು ಗ್ರಾಮ ಪಂಚಾಯಿತಿ ಹಂತದಲ್ಲಿ ಭೂ ಪ್ರದೇಶವನ್ನು ಸ್ವಚ್ಛ ಮತ್ತು ಹಸಿರನ್ನಾಗಿಸಲು "ಒಂದು ಮಗು – ಒಂದು ಗಿಡ" ಎಂಬ ಕಲ್ಪನೆಯೊಂದಿಗೆ ಶಾಲೆಯ ಪ್ರತಿ ಮಗುವಿಗೆ ಒಂದು ಹಣ್ಣಿನ ಗಿಡ ವಿತರಿಸಿ ಅದನ್ನು ಬೆಳಸಿ ಪೋಷಿಸುವ ಜವಾಬ್ದಾರಿಯನ್ನು ಅವರ ಪೋಷಕರಿಗೆ ನೀಡಲಾಯಿತು, ಅಲ್ಲದೇ ರೈತರ ಆಸಕ್ತಿಗೆ ಅನುಗುಣವಾದ ಗಿಡಗಳನ್ನು ವಿತರಿಸಿ ಬೆಳಸಿ ಸಂರಕ್ಷಿಸಲು ಪ್ರೋತ್ಸಾಹಿಸಲಾಯಿತು. ಈ ಮೂಲಕ ವರ್ಷವೊಂದಕ್ಕೆ 500 ಗಿಡಗಳನ್ನು ಬೆಳೆಸುವ ಸಂಕಲ್ಪವನ್ನು ಈಡೇರಿಸಲಾಯಿತು.

## ನಿಯಮಿತ ಆರೋಗ್ಯ ಶಿಬಿರಗಳು

ಗ್ರಾಮ ಪಂಚಾಯತಿ ಮನವಿ ಮೇರೆಗೆ ಬಾಷ್

“ಖಾಸಗಿ ಸಹಭಾಗಿತ್ವದೊಂದಿಗೆ ಪಂಚಾಯತಿ ಅಭಿವೃದ್ಧಿ ಸಾಧ್ಯ ಎಂಬುದನ್ನು ಹುಸ್ಕೂರು ಗ್ರಾಮ ಪಂಚಾಯತಿಯವರು ತೋರಿಸಿಕೊಟ್ಟಿದ್ದಾರೆ, ಇದು ಇತರರಿಗೂ ಮಾದರಿಯಾಗಲಿ”

– ಶ್ರೀ ಟಿ.ಕೆ ರಮೇಶ್, ಕಾರ್ಯನಿರ್ವಾಹಕ ಅಧಿಕಾರಿಗಳು, ಆನೇಕಲ್ ತಾಲ್ಲೂಕು ಪಂಚಾಯತಿ

“ಹುಸ್ಕೂರು ಹಸಿರು ವಲಯದ ಪಂಚಾಯತಿಯಾಗಿದ್ದು, ಖಾಸಗಿಯವರು ಕೈ ಜೋಡಿಸಿದ್ದರಿಂದ ಗ್ರಾಮ ಪಂಚಾಯತಿಯ ಅಭಿವೃದ್ಧಿ ಸಾಕಾರವಾಗಿದೆ”.

– ಶ್ರೀ ಎಂ.ರವಿ ಅಧ್ಯಕ್ಷರು, ಹುಸ್ಕೂರು ಗ್ರಾಮ ಪಂಚಾಯತಿ.

“ಉದ್ದೇಶ ಒಳ್ಳೆಯದಿದ್ದಲ್ಲಿ, ಹಲವರು ಕೈ ಜೋಡಿಸುತ್ತಾರೆ ಎಂಬುದಕ್ಕೆ ಬಯೋಕಾನ್ ಮತ್ತು ಬಾಷ್ ಕಂಪನಿಯವರು ಹುಸ್ಕೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಲ್ಲಿ ಮಾಡಿರುವ ಕಾರ್ಯಗಳು ಸಾಕ್ಷಿಯಾಗಿವೆ. ಇನ್ನು ಮುಂದೆಯೂ ಅವರ ಅಭಿವೃದ್ಧಿ ಕೆಲಸಗಳಿಗೆ ಕೈ ಜೋಡಿಸುತ್ತಾರೆ ಎಂಬ ವಿಶ್ವಾಸವಿದೆ.

– ಶ್ರೀ ಮುರಳಿ.ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಹುಸ್ಕೂರು ಗ್ರಾಮ ಪಂಚಾಯತಿ.

“ಬಯೋಕಾನ್ ಮತ್ತು ಬಾಷ್ ಕಂಪನಿಯವರಿಂದ ಹಲವಾರು ಮಹಿಳೆಯರು, ಸ್ವಾವಲಂಭಿಗಳಾಗಿದ್ದು, ಅವರನ್ನು ನೋಡಲು ಹೆಮ್ಮೆ ಎನಿಸುತ್ತದೆ.

– ಶ್ರೀಮತಿ ಶಿಲ್ಪಬಾಯಿ.ಜಿ, ಕಾರ್ಯದರ್ಶಿ, ಹುಸ್ಕೂರು ಗ್ರಾಮ ಪಂಚಾಯತಿ.

“ನನ್ನ ಕಾಲ ಮೇಲೆ ನಾನು ನಿಲ್ಲುವಂತೆ ಮಾಡಿ, ನಾನು ಸ್ವಾವಲಂಭಿಯಾಗುವಂತೆ ಮಾಡಿದ ಬಾಷ್ ಕಂಪನಿ ಮತ್ತು ಹುಸ್ಕೂರು ಗ್ರಾಮ ಪಂಚಾಯತಿಗೆ ಧನ್ಯವಾದಗಳು”

– ಗೀತಾ.ಎ, ಕಂಪ್ಯೂಟರ್ ತರಬೇತಿ ಫಲಾನುಭವಿ ಮತ್ತು ಉದ್ಯೋಗಸ್ಥೆ

ಕಂಪನಿಯವರು ಫೆಬ್ರುವರಿ 24, 2018 ಪಂಚಾಯತಿ ಕೇಂದ್ರ ಸ್ಥಾನ / ಗ್ರಾಮಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಸಾಮಾನ್ಯ ಆರೋಗ್ಯ ಶಿಬಿರವನ್ನು ಏರ್ಪಡಿಸಿದ್ದು, 613 ಗ್ರಾಮಸ್ಥರು ಮತ್ತು ಮಕ್ಕಳು ತಪಾಸಣೆಗೆ ಒಳಗಾಗಿ, ಈ ಪೈಕಿ 05 ಫಲಾನುಭವಿಗಳು ನೇತ್ರ ಶಸ್ತ್ರ ಚಿಕಿತ್ಸೆ ಸೌಲಭ್ಯವನ್ನು, 49 ಜನರಿಗೆ ಉಚಿತ ಕನ್ನಡಕದ ಸೌಲಭ್ಯವನ್ನು ಉಚಿತವಾಗಿ ಕಂಪನಿಯ ಮುಖಾಂತರ ಪಡೆದಿರುತ್ತಾರೆ.

ಈ ಮೂಲಕ ಗ್ರಾಮ ಪಂಚಾಯತಿ ವ್ಯಾಪ್ತಿಯ ಜನರ ಆರೋಗ್ಯ ಮಟ್ಟವನ್ನು, ಕಡಿಮೆ ಖರ್ಚಿನಿಂದ ಸುಧಾರಿಸಲಾಗಿದೆ. ಈ ಬಾರಿ ಆಕ್ಸ್ ಫರ್ಡ್ ವೈದ್ಯಕೀಯ ಕಾಲೇಜು ರವರು ಪಂಚಾಯತಿ ವ್ಯಾಪ್ತಿಯ ಚಿಂತಲಮಡಿವಾಳ ಗ್ರಾಮವನ್ನು ಸ್ವಚ್ಛ ಭಾರತ್ ಮಿಷನ್ ಯಡಿಯಲ್ಲಿ ದತ್ತು ಪಡೆದಿದ್ದು ಸದರಿ ಗ್ರಾಮದ ಜನ ಜೀವನ ಮಟ್ಟ ಮತ್ತು ಸ್ವಚ್ಛತೆಯನ್ನು ಸುಧಾರಿಸುವ ಪ್ರಕ್ರಿಯೆಯಲ್ಲಿದೆ.

## ಎಲ್.ಕೆ.ಜಿ / ಯು.ಕೆ.ಜಿ ತರಗತಿಗಳ ಪ್ರಾರಂಭ

ಶಿಕ್ಷಣವು ನಿಂತ ನೀರಾಗಿರದೆ, ಬದಲಾಗುತಿರುವ ಸನ್ನಿವೇಶಗಳಿಗೆ ಅನುಗುಣವಾಗಿ ಮಾರ್ಪಾಡನ್ನು ಹೊಂದುತ್ತಿರುವುದು ಪ್ರಗತಿಯ ದ್ಯೋತಕವಾಗಿದೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿ ಸಾಧನೆಯಲ್ಲಿ 6–14 ವರ್ಷ ವಯೋಮಾನದ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವಲ್ಲಿ ಇಲಾಖೆಯು ಶ್ರಮಿಸುತ್ತಿದೆ. ಇದಕ್ಕೆ ಪೂರಕವಾಗಿ 3–6 ವಯೋಮಾನದ ಮಕ್ಕಳು ಪೂರ್ವ ಪ್ರಾಥಮಿಕ (ಎಲ್‌ಕೆಜಿ, ಯುಕೆಜಿ) ತರಗತಿಗಳ ಅವಶ್ಯಕತೆಯನ್ನು ಮನಗೊಂಡು ಮತ್ತು ಸರ್ಕಾರಿ ಶಾಲೆಗಳಿಗೆ ದಾಖಲಾತಿ ಹೆಚ್ಚಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿಯು ಬಾಷ್ ಕಂಪನಿಯ ಸಹಭಾಗಿತ್ವದಲ್ಲಿ 2018–19ನೇ ಸಾಲಿನಿಂದ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಪ್ರಾಂಭಿಸಲಾಗಿದೆ.

ಶಿಕ್ಷಣ, ಆರೋಗ್ಯ, ಶುದ್ಧ ಕುಡಿಯುವ ನೀರು, ಸ್ವಚ್ಛತೆ, ಪರಿಸರ ಸಂರಕ್ಷಣೆ, ಯುವ ಸಬಲೀಕರಣ, ಸ್ವಾವಲಂಬನೆಯ ಬದುಕು, ಮೂಲಭೂತ ಸೌಲಭ್ಯಗಳನ್ನು ಜನರ ಆಶೋತ್ತರಕ್ಕೆ ತಕ್ಕಂತೆ ಒದಗಿಸಲು ಬಾಷ್ ಮತ್ತು ಬಯೋಕಾನ್ ಖಾಸಗಿ ಕಂಪನಿಗಳ ಸಹಭಾಗಿತ್ವ ಪೂರಕವಾಗಲಿವೆ. ■

ಕವಿಯ(ಕ್ಷ) ಪ್ರಶ್ನೆ



# ಸರ್ಕಾರದ ಯೋಜನೆಗಳ ಸಮರ್ಪಕ ಉಪಯೋಗ

ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ ಮಾನವ ಅಭಿವೃದ್ಧಿಗೆ ಒತ್ತು ನೀಡಿ ಪ್ರಾರಂಭಿಸಿದ ವಿವಿಧ ಉದ್ಯೋಗ ಸೃಷ್ಟಿಸುವ ಕಾರ್ಯಕ್ರಮಗಳನ್ನು ಅಧ್ಯಯನ ಮಾಡಿ ಅವುಗಳಲ್ಲಿನ ಸಾಂಧರ್ಬಿಕ ವೈಫಲ್ಯಗಳು/ ಅಡಚಣೆಗಳನ್ನು ಅವಲೋಕಿಸಿ ಅವುಗಳು ಪುನಾರವರ್ತನೆಯಾಗಬಾರದೆಂದು ಮೊದಲ ಬಾರಿಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005ನ್ನು ದಿನಾಂಕ:02.02.2006 ರಿಂದ ಜಾರಿಗೆ ತರಲಾಗಿರುತ್ತದೆ. ಇದೊಂದು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು ಕೂಲಿ ಬಯಸುವ ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸುವ ಭರವಸೆಯನ್ನು ಮತ್ತು ಉದ್ಯೋಗದ ಹಕ್ಕನ್ನು ನೀಡುತ್ತದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶದ ಅರ್ಹ ಕುಟುಂಬದ ಸದಸ್ಯರಿಗೆ ಕನಿಷ್ಠ 100 ದಿನಗಳ ಉದ್ಯೋಗ ನೀಡುವ ಮೂಲಕ ವಿವಿಧ ಕಾಮಗಾರಿಗಳನ್ನು ಕೈಗೆತ್ತುಕೊಳ್ಳಬಹುದಾಗಿದೆ. ಈ ಮೂಲಕ ಗ್ರಾಮೀಣ ಜನರ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರಬಹುದಾಗಿದೆ. ಕೃಷಿ, ತೋಟಗಾರಿಕೆ, ಅರಣ್ಯ, ರೇಷ್ಮೆ ಕ್ಷೇತ್ರಗಳಲ್ಲಿಯೂ ಸಹ ಕಾಮಗಾರಿಗಳನ್ನು ಕೈಗೊಂಡು ಉದ್ಯೋಗ ಸೃಜಿಸಬಹುದಾಗಿದೆ. ಒಟ್ಟಾರೆ ಮಾನವನ ಸಮಗ್ರ ಬದಲಾವಣೆಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಒಂದು ಆಶಾದಾಯಕ ಯೋಜನೆಯೆಂದರೆ ತಪ್ಪಾಗಲಾರದು.

## ಅವಲೋಕನಕ್ಕಾಗಿ ಹಲವು ಪ್ರಶ್ನಾರ್ಥಕ ವಿಚಾರಗಳು

1. ವೈಯಕ್ತಿಕ ಕಾಮಗಾರಿಗಳನ್ನು ಕೈಗೊಂಡು ಮಾನವ ಅಭಿವೃದ್ಧಿ ಜೊತೆಗೆ ಮಾನವನ ಅಭಿವೃದ್ಧಿಗೆ ಪೂರಕವಾದ ಸಾರ್ವಜನಿಕ ಭೂಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡರೆ ಮಾತ್ರ ಸಮಗ್ರ ಅಭಿವೃದ್ಧಿಯಾಗುತ್ತದೆ ಎಂಬುದನ್ನು ಪರಿಗಣಿಸಬೇಕಲ್ಲವೆ?

2. ಹೆಚ್ಚುತ್ತಿರುವ ಜನ ಸಂಖ್ಯೆ ಹಾಗೂ ಕಡಿಮೆಯಾಗುತ್ತಿರುವ ವ್ಯವಸಾಯ ಯೋಗ್ಯ ಜಮೀನಿನ ಅಂತರ ಹೆಚ್ಚಾಗುತ್ತಿರುವ ಈ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಕೃಷಿ ಅಭಿವೃದ್ಧಿ ಪೂರಕ ಕಾಮಗಾರಿಗಳನ್ನು ಯೋಜಿಸಿ ಅವುಗಳಲ್ಲಿ ಮಾನವ ದಿನಗಳನ್ನು ಹೆಚ್ಚಿಸುವುದು ಸೂಕ್ತವಲ್ಲವೆ?

3. ರಸ್ತೆ, ಮನೆ, ಕುರಿದೊಡ್ಡಿ ಇತ್ಯಾದಿ ಕಾಮಗಾರಿಗಳನ್ನು ಯೋಜನೆಯಡಿಯಲ್ಲಿ ತೆಗೆದುಕೊಳ್ಳಿತ್ತಿರುವುದು ಸರಿ. ಆದರೆ ನೀರೆ ಇಲ್ಲವಾದಾಗ ಮೇಲಿನ ಯಾವುದೇ ಯೋಜನೆ ಉಪಯೋಗಕ್ಕೆ ಬರುವುದಿಲ್ಲ. ಆದುದರಿಂದ ಜಲಮೂಲಗಳಾದ ಕೆರೆ ಹೂಳು ತೆಗೆಯುವುದು, ಕಲ್ಯಾಣಿಗಳ ನಿರ್ಮಾಣ, ಕೃಷಿ ಹೊಂಡಗಳ ನಿರ್ಮಾಣ ಬತ್ತಿದ ಬಾವಿಗಳ ಪುನಶ್ಚೇತನ ಇತ್ಯಾದಿ ಜಲ ಮೂಲಗಳ ನವೀಕರಣ ಅಗತ್ಯವಲ್ಲವೆ?

4. ಕಾಮಗಾರಿಗಳ ನಿರ್ಮಾಣವೇನೋ ಸರಿ. ಆದರೆ ನಿರ್ವಹಣೆ ಇಲ್ಲದಿದ್ದಲ್ಲಿ ಕಾಮಗಾರಿಯು ಪೂರ್ಣ ಉಪಯೋಗ ದೊರೆಯದು. ಆದುದರಿಂದ ನಿರ್ವಹಣೆ ನಮ್ಮ ಸಾಮಾಜಿಕ ಹೊಣೆಯಲ್ಲವೆ.

5. ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ವೈಯಕ್ತಿಕ ಕಾಮಗಾರಿಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದರೂ ಸಹ ಸಾಮೂಹಿಕ ಕಾಮಗಾರಿಗಳನ್ನು ನಿರ್ಲಕ್ಷಿಸುವುದು ಸಮಗ್ರ ಅಭಿವೃದ್ಧಿಗೆ ಮಾರಕವಲ್ಲವೆ?


**ಡಾ|| ಶ್ರೀರಾಮಯ್ಯ, ಎಂ.ಎಸ್‌ಸಿ(ಕೃಷಿ) ಪಿಹೆಚ್.ಡಿ.,**

ಒಂಬುಡ್ಸ್‌ಮನ್ (MGNREGA)

ಜಿಲ್ಲಾ ಪಂಚಾಯತಿ, ಕೋಲಾರ–563101

**ಕರ್ನಾಟಕ ಸರ್ಕಾರ**

**ಸಂಖ್ಯೆ: ಗ್ರಾಅಪ 85 ಸ್ವೀಮರ 2018**

**ಕರ್ನಾಟಕ ಸರ್ಕಾರದ ಸಚಿವಾಲಯ**
**ಬಹುಮಹಡಿ ಕಟ್ಟಡ**
**ಬೆಂಗಳೂರು, ದಿನಾಂಕ: 27–08–2018**

# ಸುತ್ತೋಲೆ

ದಿನಾಂಕ: 30.07.2018 & 31.07.2018 ರಂದು ನಡೆದ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿದ ಹಲವಾರು ಅಂಶಗಳ ಪೈಕಿ ಈ ಕೆಳಕಂಡ ಅಂಶಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿದೆ:–

1. ಪ್ರತಿ ತಿಂಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಪ್ರತಿ ತಾಲ್ಲೂಕಿನಲ್ಲಿ ಒಂದು ಸಮೀಕ್ಷಾ ಸಭೆಯನ್ನು ಹಾಗೂ ಸಾರ್ವಜನಿಕ ಸಭೆಯನ್ನು ನಡೆಸುವುದು.
2. ಪ್ರತಿ ತಿಂಗಳಲ್ಲಿ ಒಂದು ವಾರ ಎಲ್ಲಾ ತಾಲ್ಲೂಕುಗಳ ಪ್ರವಾಸ ಕೈಗೊಳ್ಳುವುದು.
3. ಪ್ರತಿ ತಿಂಗಳಲ್ಲಿ ಒಂದು ದಿನ ಹೋಬಳಿ ವಾಸ್ತವ್ಯ ಮಾಡುವುದು.
4. ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಇಲಾಖೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವಸತಿ ಶಾಲೆಗಳಿಗೆ ಹಾಗೂ ಹಾಸ್ಟಲ್‌ಗಳಿಗೆ ತಿಂಗಳಿಗೆ ಒಂದು ದಿನ ಆಕಸ್ಮಿಕ ಭೇಟಿ ನೀಡಿ ಮೂಲಭೂತ ಸೌಕರ್ಯಗಳನ್ನು ಕುರಿತು ಪರಾಮರ್ಶಿಸುವುದು.
5. ಶಾಲಾ–ಕಾಲೇಜುಗಳ ಕಟ್ಟಡ ಮತ್ತು ಶಿಕ್ಷಕರ ಕೊರತೆ ಕುರಿತು ಪರಾಮರ್ಶಿಸುವುದು.
6. ಮಳೆ ಅನಾಹುತದಿಂದ ಹಾನಿಗೀಡಾದ ಮನೆಗಳಿಗೆ ತುರ್ತಾಗಿ ಪರಿಹಾರ ನೀಡುವುದು.
7. ಸರ್ಕಾರಿ ಶಾಲೆಗಳ ಪ್ರದೇಶಗಳಲ್ಲಿ ಎರಡು ಅಥವಾ ಹೆಚ್ಚಿನ ಮಹಡಿಯ ಹಾಸ್ಟೆಲ್‌ಗಳನ್ನು ನಿರ್ಮಿಸಲು ನಿವೇಶನ ಒದಗಿಸಬೇಕು.
8. ತಮ್ಮ ಕಛೇರಿಗಳಲ್ಲಿನ ಅತಿ ಅಗತ್ಯವಿರುವ ಖಾಲಿ ಹುದ್ದೆಗಳ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸುವುದು.
9. ಎಸ್.ಡಿ.ಆರ್.ಎಫ್ ರಡಿ ಕಾಲುಸುಂಕಗಳ ರಿಪೇರಿಯನ್ನು ಕೈಗೆತ್ತಿಕೊಳ್ಳುವುದು.
10. ಅಂಗಣವಾಡಿ ಕೇಂದ್ರಗಳಿಗೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡುವುದು.

ಮೇಲೆ ನಮೂದಿಸಿರುವ ಅಂಶಗಳ ಕುರಿತು ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಬಗ್ಗೆ ಮತ್ತು ಅವುಗಳ ಪ್ರಗತಿಯ ಕುರಿತು ಪ್ರತಿ ತಿಂಗಳು ಸಮೀಕ್ಷಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಸಹಿ/–
**(ಎಲ್.ಕೆ.ಅತೀಕ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

**ಸಂಖ್ಯೆ: ಗ್ರಾಅಪ 740 ಗ್ರಾಪಂಅ 2018**

**ಕರ್ನಾಟಕ ಸರ್ಕಾರದ ಸಚಿವಾಲಯ**
**ಬಹುಮಹಡಿ ಕಟ್ಟಡ**
**ಬೆಂಗಳೂರು, ದಿನಾಂಕ: 21-07-2018**

**ಇವರಿಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬಹುಮಹಡಿ ಕಟ್ಟಡ, ಬೆಂಗಳೂರು.

**ಇವರಿಗೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳು.

**ಮಾನ್ಯರೇ,**

**ವಿಷಯ :** ಗ್ರಾಮ ಪಂಚಾಯತಿಗಳ ತೆರಿಗೆ ನಿರ್ಧರಣೆ, ಪರಿಷ್ಕರಣೆ ಮತ್ತು ವಸೂಲಾತಿ ಪ್ರಕ್ರಿಯೆ ತ್ವರಿತಗೊಳಿಸುವ ಬಗ್ಗೆ.

**ಉಲ್ಲೇಖ :**
1) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, 1993 ರ ಪ್ರಕರಣ 199, 199ಎ ಮತ್ತು 200.
2) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ತೆರಿಗೆಗಳು ಮತ್ತು ಫೀಜುಗಳು) ನಿಯಮಗಳು, 1994.
3) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 939 ಗ್ರಾಪಂಅ 2016 (ಭಾಗ-1), ದಿನಾಂಕ 19.11.2016.
4) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 481 ಗ್ರಾಪಂಅ 2016, ದಿನಾಂಕ 27.02.2018
5) ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 341 ಗ್ರಾಪಂಅ 2017, ದಿನಾಂಕ 13.04.2017
6) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 513 ಗ್ರಾಪಂಅ 2017, ದಿನಾಂಕ 22.07.2017

*****

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, 1993 ರನ್ವಯ ಗ್ರಾಮ ಪಂಚಾಯತಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಕೃಷಿಯೇತರ ಆಸ್ತಿಗಳ ಮೇಲೆ ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಅನುಸೂಚಿ-4 ರಲ್ಲಿ ಗ್ರಾಮ ಪಂಚಾಯತಿಗಳು ವಿಧಿಸಬಹುದಾದ ತೆರಿಗೆಗಳ ಬಗ್ಗೆ ವಿವರಗಳನ್ನು ನೀಡಲಾಗಿದೆ. ತೆರಿಗೆ ನಿರ್ಧರಣೆ, ಪರಿಷ್ಕರಣೆ ಹಾಗೂ ವಸೂಲಾತಿ ಬಗ್ಗೆ ಉಲ್ಲೇಖಿತ ನಿಯಮಗಳು/ಸುತ್ತೋಲೆಗಳಲ್ಲಿ ವಿಸ್ತೃತವಾದ ಮಾರ್ಗಸೂಚಿಗಳನ್ನು ನೀಡಲಾಗಿದೆ.

ಗ್ರಾಮ ಪಂಚಾಯತಿಗಳು ತಮ್ಮ ಸ್ವಂತ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಹೆಚ್ಚಿನ ಪ್ರಮಾಣದಲ್ಲಿ ಜನರಿಗೆ ಅವಶ್ಯವಿರುವ ಸೇವೆಗಳನ್ನು ಒದಗಿಸಬೇಕೆಂಬುದು ಸರ್ಕಾರದ ಆಶಯವಾಗಿದೆ. ಆದರೆ, ಹೆಚ್ಚಿನ ಗ್ರಾಮ ಪಂಚಾಯತಿಗಳು ತಮಗೆ ನೀಡಲಾದ ಅಧಿಕಾರವನ್ನು ಸಮರ್ಪಕವಾಗಿ ಬಳಸಿಕೊಳ್ಳದೆ ತೆರಿಗೆ ನಿರ್ಧರಣೆ, ಪರಿಷ್ಕರಣೆ ಹಾಗೂ ವಸೂಲಾತಿಯಲ್ಲಿ ನಿರ್ಲಕ್ಷ್ಯ ವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕಾಯ್ದೆ ಮೂಲಕ ಸರ್ಕಾರವು ಗ್ರಾಮ ಪಂಚಾಯತಿಗಳಿಗೆ ಪ್ರತ್ಯಾಯೋಜಿಸಿದ ಅಧಿಕಾರವನ್ನು ಸಮರ್ಪಕವಾಗಿ ಬಳಸಿಕೊಂಡು ಆರ್ಥಿಕ ಸ್ವಾಯತ್ತತೆ ಪಡೆಯದೆ

ಕೇವಲ ಸರ್ಕಾರದ ವತಿಯಿಂದ ನೀಡಲಾಗುವ ಅನುದಾನವನ್ನು ಬಳಸಿಕೊಳ್ಳುವುದಕ್ಕೆ ಸೀಮಿತವಾಗಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ.

ಗ್ರಾಮ ಪಂಚಾಯತಿಗಳ ತೆರಿಗೆ ನಿರ್ಧರಣೆ, ಪರಿಷ್ಕರಣೆ ಹಾಗೂ ವಸೂಲಾತಿ ಪ್ರಕ್ರಿಯೆ ಸಮರ್ಪಕವಾಗಿ ಕೈಗೊಳ್ಳುವ ಬಗ್ಗೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಪಾತ್ರವನ್ನು ನಿರ್ದಿಷ್ಟಪಡಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ತೆರಿಗೆ ನಿರ್ಧರಣೆ/ಪರಿಷ್ಕರಣೆ ಬಗ್ಗೆ ಗ್ರಾಮ ಪಂಚಾಯತಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಉಲ್ಲೇಖ (3) ರಂತೆ ರಚಿಸಲಾಗಿದೆ. ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯತಿಗಳ ತೆರಿಗೆ ವಸೂಲಾತಿ ಪ್ರಕ್ರಿಯೆಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲು ತಿಳಿಸಲಾಗಿದೆ. ಆದಾಗ್ಯೂ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ ಕಾರ್ಯನಿರ್ವಾಹಕ ಅಧಿಕಾರಿಗಳು ತಮಗೆ ವಹಿಸಲಾದ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸದಿರುವುದು ಗ್ರಾಮ ಪಂಚಾಯತಿಗಳ ತೆರಿಗೆ ವಸೂಲಾತಿಯಲ್ಲಿನ ಹಿನ್ನಡೆಗೆ ಕಾರಣರೆಂದು ಸರ್ಕಾರವು ಭಾವಿಸಿದೆ.

ದಿನಾಂಕ 23.06.2018 ರಂದು ನಡೆದ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ರಾಜ್ಯ ಮಟ್ಟದ ಸಭೆಯಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ತೆರಿಗೆ ಸಂಗ್ರಹದ ಮಹತ್ವದ ಬಗ್ಗೆ ಮನವರಿಕೆ ಮಾಡಿರುತ್ತಾರೆ. ಇತ್ತೀಚೆಗೆ ನಡೆದ ಕರ್ನಾಟಕ ವಿಧಾನ ಮಂಡಲದ ಅಧಿವೇಶನದಲ್ಲಿಯೂ ಗ್ರಾಮ ಪಂಚಾಯಿತಿಗಳು ಸಮರ್ಪಕವಾಗಿ ತೆರಿಗೆ ವಸೂಲಾತಿ ಮಾಡದಿರುವ ಬಗ್ಗೆ ಆಕ್ಷೇಪ ವ್ಯಕ್ತವಾಗಿದೆ.

ಈ ಹಿನ್ನೆಲೆಯಲ್ಲಿ, ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳ ತೆರಿಗೆ ನಿರ್ಧರಣೆ, ಪರಿಷ್ಕರಣೆ ಹಾಗೂ ವಸೂಲಾತಿಗೆ ಸಂಬಂಧಿಸಿದಂತೆ ವೈಯಕ್ತಿಕ ಗಮನಹರಿಸಿ ಎಲ್ಲಾ ಗ್ರಾಮ ಪಂಚಾಯಿತಿಗಳು ಕಾಯ್ದೆ ಅನುಸಾರ ತೆರಿಗೆ ನಿರ್ಧರಣೆ, ಪರಿಷ್ಕರಣೆ ಮತ್ತು ವಸೂಲಾತಿ ಮಾಡಲು ಅವಶ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿ ತಿಳಿಸಿದೆ. ಈ ಸಂಬಂಧ ಪ್ರತಿ ಮಾಹೆ ಕಡ್ಡಾಯವಾಗಿ ಪ್ರಗತಿ ಪರಿಶೀಲನೆ ನಡೆಸಿ ಸರ್ಕಾರಕ್ಕೆ ವರದಿ ಮಾಡಲು ತಿಳಿಸಿದೆ.

ತಮ್ಮ ವಿಶ್ವಾಸಿ,

ಸಹಿ/-

**(ಎಲ್.ಕೆ.ಅತೀಕ್)**

ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರ

**ಸಂಖ್ಯೆ: ಗ್ರಾಅಪ 823 ಗ್ರಾಪಂಅ 2018**

**ಕರ್ನಾಟಕ ಸರ್ಕಾರದ ಸಚಿವಾಲಯ**
**ಬಹುಮಹಡಿ ಕಟ್ಟಡ**
**ಬೆಂಗಳೂರು, ದಿನಾಂಕ: 23-08-2018**

**ಇವರಿಂದ:**

ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್),
ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬೆಂಗಳೂರು.

**ಇವರಿಗೆ:**

ಎಲ್ಲಾ ಜಿಲ್ಲಾ ಪಂಚಾಯತಿಯ,
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

**ಮಾನ್ಯರೇ,**

**ವಿಷಯ :** ಕೊಡಗು ಜಿಲ್ಲೆಯ ಪ್ರವಾಹ ಸಂತ್ರಸ್ಥರಿಗೆ ಗ್ರಾಮ ಪಂಚಾಯತಿಗಳು ನೆರವು ನೀಡುವ ಬಗ್ಗೆ.

**ಉಲ್ಲೇಖ :** 1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮಂಡ್ಯ ರವರ ಪತ್ರ ದಿನಾಂಕ: 21-08-2018.

2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ರವರ ಪತ್ರ ದಿನಾಂಕ: 21-08-2018.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೊಡಗು ಜಿಲ್ಲೆಯಲ್ಲಿ ಇತ್ತೀಚಿಗೆ ಬಿದ್ದ ಭಾರಿ ಮಳೆಯಿಂದಾಗಿ ಪ್ರವಾಹ ಉಂಟಾಗಿ ಅಪಾರ ಪ್ರಮಾಣದ ಆಸ್ತಿಪಾಸ್ತಿಗಳಿಗೆ ನಷ್ಟ ಸಂಭವಿಸಿದ್ದು ಜನತೆ ಸಂಕಷ್ಟಕ್ಕೆ ಸಿಲುಕಿರುತ್ತಾರೆ. ಈ ಪ್ರವಾಹದಿಂದ ಸಂಕಷ್ಟಕ್ಕೆ ಸಿಲುಕಿರುವ ಜನರ ರಕ್ಷಣೆಗಾಗಿ ಸರ್ಕಾರ ಕೈಗೊಂಡಿರುವ ಪರಿಹಾರ ಕಾರ್ಯಕ್ಕೆ ಸಾರ್ವಜನಿಕರು ಮತ್ತು ಸಂಘ ಸಂಸ್ಥೆಗಳು ನೆರವು ನೀಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯದ ಗ್ರಾಮ ಪಂಚಾಯಿತಿಗಳು ತಮ್ಮ ವತಿಯಿಂದ ನೆರವು ನೀಡಲು ಮುಂದೆ ಬಂದಿರುತ್ತವೆ. ಈ ಸಂಬಂಧ ಉಲ್ಲೇಖಿತ ಪತ್ರಗಳಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮಂಡ್ಯ ಮತ್ತು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ರವರು ಕೋರಿಕೆ ಸಲ್ಲಿಸಿ ಸರ್ಕಾರದ ಅನುಮತಿಯನ್ನು ಕೋರಿರುತ್ತಾರೆ.

ಪ್ರಸ್ತಾವನೆ ಪರಿಶೀಲಿಸಿದ್ದು ಇದೊಂದು ಉತ್ತಮವಾದ ಪ್ರಸ್ತಾವನೆಯಾಗಿರುತ್ತದೆ. ಅಪಾರ ಪ್ರಮಾಣದ ಮಳೆಯಿಂದಾಗಿ ಸಂಭವಿಸಿರುವ ಹಾನಿಗೆ ಒಳಗಾಗಿರುವ ಸಂತ್ರಸ್ಥರಿಗೆ ನೆರವಾಗಲು ಗ್ರಾಮ ಪಂಚಾಯಿತಿಗಳು ಸ್ವಂತ ಸಂಪನ್ಮೂಲದಿಂದ ತಮ್ಮ ಸಾಮರ್ಥ್ಯಾನುಸಾರ ಆರ್ಥಿಕ ನೆರವು ನೀಡಲು ಅನುಮತಿ ನೀಡಿದೆ. ಗ್ರಾಮ ಪಂಚಾಯಿತಿಗಳು ನೀಡುವ ನೆರವಿನ ಹಣವನ್ನು ಡಿ.ಡಿ. ಮೂಲಕ ಈ ಉದ್ದೇಶಕ್ಕಾಗಿ ತೆರೆದಿರುವ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಜಮಾ ಮಾಡಲು ತಿಳಿಸಿದೆ. (ಖಾತೆ ಹೆಸರು: ಮುಖ್ಯ ಮಂತ್ರಿಗಳ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ-2018, ಖಾತೆ ನಂಬರ್:37887098605, IFSC: SBIN0040277, ಬ್ಯಾಂಕ್ ಶಾಖೆ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಧಾನ ಸೌಧ, ಬೆಂಗಳೂರು.)

ತಮ್ಮ ನಂಬುಗೆಯ,
ಸಹಿ/-
**(ಎಂ.ಕೆ. ಕೆಂಪೇಗೌಡ)**
ನಿರ್ದೇಶಕರು (ಪಂ.ರಾಜ್-1) ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರಾಮ ಪಂಚಾಯತಿಗಳಲ್ಲಿ ಉಪಗ್ರಹ ಸ್ವೀಕೃತಿ ಕೇಂದ್ರಗಳನ್ನು ಸ್ಥಾಪಿಸುವ ಕುರಿತು.

**ಓದಲಾಗಿದೆ:**

1. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ರವರ ಪತ್ರ ಸಂಖ್ಯೆ:ರಾಗ್ರಾಸಂ/ಜಿ.ಪಿ.ಆರ್.ಒ.ಟಿ/01-2018-19, ದಿನಾಂಕ: 04-04-2018.
2. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ;ಆಇ 216 ವೆಚ್ಚ-6/2018, ದಿನಾಂಕ: 02-04-2018.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:01-08-2018ರ ಸಭೆಯ ನಡವಳಿ.

*****

## ಪ್ರಸ್ತಾವನೆ

ರಾಜ್ಯದ ಎಲ್ಲಾ 6024 ಗ್ರಾಮ ಪಂಚಾಯತಿಗಳಿಗೆ ಆಯ್ಕೆಯಾಗಿರುವ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಪಂಚಾಯತ್ ರಾಜ್ ವ್ಯವಸ್ಥೆಯ ನಿಯಮಗಳು ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸಾಮರ್ಥ್ಯಾಭಿವೃದ್ಧಿಗೊಳಿಸಲು ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಮೂಲಕ ಉಪಗ್ರಹ ಆಧಾರಿತ ತರಬೇತಿಯನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಈ ತರಬೇತಿಯನ್ನು ತಾಲ್ಲೂಕು ಕೇಂದ್ರದಲ್ಲಿರುವ ಸಾಮರ್ಥ್ಯ ಸೌಧದಲ್ಲಿ ನೀಡಲಾಗುತ್ತಿದೆ. ಆದರೆ ತಾಲ್ಲೂಕು ಕೇಂದ್ರದಿಂದ ದೂರವಿರುವ ಗ್ರಾಮ ಪಂಚಾಯತಿಗಳ ಸದಸ್ಯರು ಹಲವಾರು ಕಾರಣಗಳಿಂದ ಸೂಕ್ತ ಸಮಯಕ್ಕೆ ತರಬೇತಿ ತಾಲ್ಲೂಕು ಪಂಚಾಯತ್ ಕೇಂದ್ರಗಳಲ್ಲಿರುವ ಸಾಮರ್ಥ್ಯಸೌಧದಲ್ಲಿ ಹಾಜರಾಗಲು ಸಾಧ್ಯವಾಗದೇ ಇರುವುದನ್ನು ಮನಗಂಡು ಗ್ರಾಮ ಪಂಚಾಯತಿ ಸದಸ್ಯರಿಗೆ ಹೆಚ್ಚಿನ ತಿಳುವಳಿಕೆ ಮೂಡಿಸುವ ಹಿನ್ನೆಲೆಯಲ್ಲಿ ಸ್ಥಳೀಯ ಗ್ರಾಮ ಪಂಚಾಯತಿ ಹಂತದಲ್ಲಿಯೇ ತರಬೇತಿ ನೀಡಲು ಉಪಗ್ರಹ ಸ್ವೀಕೃತಿ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ನಿರ್ಧರಿಸಿದೆ.

ಸದರಿ ಉಪಗ್ರಹ ಸ್ವೀಕೃತಿ ಕೇಂದ್ರ(ಸ್ಯಾಟ್‌ಕಾಂ) ಗಳನ್ನು ಸ್ಥಾಪಿಸುವ ಬಗ್ಗೆ ಮೇಲೆ ಓದಲಾದ (1)ರ ಪತ್ರದಲ್ಲಿ ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ಇವರು ರೂ.15.06ಕೋಟಿಗಳ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರ ಅನಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು 2018-19ನೇ ಸಾಲಿನ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಗಣಕೀಕರಣದ ಲೆಕ್ಕ ಶೀರ್ಷಿಕೆ:2515-00-101-0-24-059ರಡಿ ಒದಗಿಸಿರುವ ರೂ.21.23ಕೋಟಿಗಳಲ್ಲಿ ರೂ.7.00ಕೋಟಿಗಳನ್ನು ಗ್ರಾಮ ಪಂಚಾಯತಿಗಳಲ್ಲಿ ಉಪಗ್ರಹ ಸ್ವೀಕೃತಿ ಕೇಂದ್ರಗಳನ್ನು ಸ್ಥಾಪಿಸಲು ರೂ.7.00ಕೋಟಿಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, 2018-19ನೇ ಸಾಲಿಗೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಉಪಗ್ರಹ ಸ್ವೀಕೃತಿ ಕೇಂದ್ರ(ಸ್ಯಾಟ್‌ಕಾಂ)ಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಸದರಿ ಉದ್ದೇಶಕ್ಕಾಗಿ ಲೆಕ್ಕ ಶೀರ್ಷಿಕೆ:2515-00-101-0-24-059 ರಡಿ ಒದಗಿಸಿರುವ ರೂ.21.23ಕೋಟಿಗಳಲ್ಲಿ ರೂ.7.00ಕೋಟಿಗಳನ್ನು ಮೇಲೆ ಓದಲಾದ (3) ರಲ್ಲಿನ ಸಭೆಯ ನಡವಳಿಯಲ್ಲಿ ಬಿಡುಗಡೆಗೊಳಿಸಲು ನಿರ್ದೇಶಿಸಿದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 145 ಜಿಪಸ 2018, ಬೆಂಗಳೂರು, ದಿನಾಂಕ: 13-08-2018.**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ ಎಲ್ಲಾ ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಸ್ಯಾಟ್‌ಕಾಂ ಕೇಂದ್ರಗಳನ್ನು ಸ್ಥಾಪಿಸಲು ಲೆಕ್ಕ ಶೀರ್ಷಿಕೆ:2515-00-101-0-24-059 ರಡಿ ರೂ.7.00ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಎಲ್ಲಾ ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಉಪಗ್ರಹ ಸ್ವೀಕೃತಿ ಕೇಂದ್ರ(ಸ್ಯಾಟ್‌ಕಾಂ)ಗಳನ್ನು ಸ್ಥಾಪಿಸಲು ಹಾಗೂ ಸದರಿ ಕೇಂದ್ರಗಳ ನಿರ್ವಹಣೆಯ ಜವಾಬ್ದಾರಿಯನ್ನು ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ರವರಿಗೆ ವಹಿಸಲಾಗಿದ್ದು, ಅದರಂತೆ 2018-19ನೇ ಸಾಲಿಗೆ ಲೆಕ್ಕ ಶೀರ್ಷಿಕೆ:2515-00-101-0-24-059 ರಡಿ ಒದಗಿಸಿರುವ ಅನುದಾನದಲ್ಲಿ ರೂ.7.00ಕೋಟಿಗಳ ಅನುದಾನವನ್ನು ಸದರಿ ಸಂಸ್ಥೆಗೆ ನಿರ್ದೇಶಕರು, ಇ-ಆಡಳಿತ ರವರು ಅನುದಾನವನ್ನು ನಿಯಮಾನುಸಾರ ಬಿಡುಗಡೆಗೊಳಿಸಲು ಆದೇಶಿಸಿದೆ.

ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿಯೇ ಕೆ.ಟಿ.ಪಿ.ಪಿ ನಿಯಮಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಅಗತ್ಯ ಕ್ರಮವಹಿಸಲು ತಿಳಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 239 ವೆಚ್ಚ-6/2018, ದಿನಾಂಕ: 19-07-2018ರ ಸಹಮತಿಯ ಮೇರೆಗೆ ಹಾಗೂ ಆರ್ಥಿಕ ಇಲಾಖೆಯ ಅದೇಶ ಸಂಖ್ಯೆ:ಎಫ್‌ಡಿ 04 ಟಿಎಫ್‌ಪಿ 2018, ದಿನಾಂಕ: 24-07-2018ರಲ್ಲಿ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ/-
**(ವಿ.ವೆಂಕಟೇಶ್)**
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಆಯ್ದ ಗ್ರಾಮ ಪಂಚಾಯತ್‌ಗಳಲ್ಲಿ ಗ್ರಾಮ ಪಂಚಾಯಿತಿಗಳ ದಾಖಲೆ ಮತ್ತು ದಾಖಲಾತಿಗಳನ್ನು ಗಣಕೀಕರಣಗೊಳಿಸುವ ಬಗ್ಗೆ.

**ಓದಲಾಗಿದೆ:**

1. 2018-19 ನೇ ಸಾಲಿನ ಫೆಬ್ರವರಿ-2018 ನೇ ಸಾಲಿನಲ್ಲಿ ಘೋಷಿಸಿದ ಆಯವ್ಯಯ ಕಂಡಿಕೆ ಸಂಖ್ಯೆ:277.
2. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ/216/ವೆಚ್ಚ-6/2018, ದಿನಾಂಕ:02.04.2018.
3. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/237/ವೆಚ್ಚ-6/2018, ದಿನಾಂಕ:18.07.2018
4. ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಯೋಇ/28/ಜಿಯೋವಿ/2018, ದಿನಾಂಕ:03.09.2018
5. ದಿನಾಂಕ:01.08.2018 ಹಾಗೂ ದಿನಾಂಕ:30.08.2018 ರಂದು ಜರುಗಿದ ಸಭೆಯ ನಡವಳಿ.

*****

## ಪ್ರಸ್ತಾವನೆ

2018-19 ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಗಣಕೀಕರಣ ಲೆಕ್ಕಶೀರ್ಷಿಕೆ: 2515-00-101-0-24-059 ರಡಿ ₹.2123.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ಸದರಿ ಅನುದಾನದಲ್ಲಿ ಮುಂದುವರೆದ ಕಾರ್ಯಕ್ರಮಗಳಿಗೆ ಹಾಗೂ ಹೊಸ ಯೋಜನೆಗಳಿಗೆ ಅನುದಾನವು ಸೇರ್ಪಡೆಗೊಳಿಸಲಾಗಿದೆ ಎಂದು ಓದಲಾದ (2) ರ ಅನಧಿಕೃತ ಟಿಪ್ಪಣಿಯಲ್ಲಿ ತಿಳಿಸಲಾಗಿದೆ.

2018-19ನೇ ಸಾಲಿನ ಫೆಬ್ರವರಿ 2018ರ ಆಯವ್ಯಯ ಭಾಷಣ ಕಂಡಿಕೆ ಸಂಖ್ಯೆ(277) ರಲ್ಲಿ "ಗ್ರಾಮ ಪಂಚಾಯಿತಿಗಳ ದಾಖಲೆ ಮತ್ತು ದಾಖಲಾತಿಗಳನ್ನು ಗಣಕೀಕರಣಗೊಳಿಸಲು ಉದ್ದೇಶಿಸಿದ್ದು, ಇದನ್ನು ಆಯ್ದ ಗ್ರಾಮ ಪಂಚಾಯತ್‌ಗಳಲ್ಲಿ ಜಾರಿಗೊಳಿಸಲಾಗುವುದು" ಎಂದು ಘೋಷಿಸಲಾಗಿದೆ. 2018-19ನೇ ಸಾಲಿನ ಬಜೆಟ್‌ನಲ್ಲಿ ಒದಗಿಸಲಾದ ₹.2123.00 ಲಕ್ಷಗಳ ಅನುದಾನದಲ್ಲಿ ಸದರಿ ಹೊಸ ಯೋಜನೆಗೆ ₹.5.00 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿದೆ.

ದಿನಾಂಕ:01.08.2018 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಅಧ್ಯಕ್ಷತೆಯಲ್ಲಿ ಜರುಗಿದ ಹಾಗೂ ದಿನಾಂಕ:30.08.2018 ರಂದು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್) ರವರ ಸಮ್ಮುಖದಲ್ಲಿ ಮತ್ತು ನಿರ್ದೇಶಕರು, (ಪಂ.ರಾಜ್-1) ಹಾಗೂ ಸಮಿತಿಯ ಅಧ್ಯಕ್ಷರು, ಗ್ರಾಅಪ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ತೀರ್ಮಾನಿಸಿದಂತೆ, ಗ್ರಾಮ ಪಂಚಾಯತಿಗಳ ದಾಖಲೆ ಮತ್ತು ದಾಖಲಾತಿಗಳನ್ನು ಗಣಕೀಕರಣಗೊಳಿಸಲು 10 ಜಿಲ್ಲಾ ಪಂಚಾಯತ್‌ಗಳನ್ನು ಆಯ್ಕೆ ಮಾಡಿ ಅದರಲ್ಲಿ ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಅನುದಾನದ ಲಭ್ಯತೆಗನುಗುಣವಾಗಿ ಜಾರಿಗೊಳಿಸಲು ನಿರ್ಧರಿಸಲಾಯಿತು.

ಸದರಿ ಸಭೆಗಳ ನಿರ್ಣಯದಂತೆ ಅತೀ ಹೆಚ್ಚು ಸಂಪನ್ಮೂಲ ಹೊಂದಿರುವ ಗ್ರಾಮ ಪಂಚಾಯತ್‌ಗಳು ದಾಖಲೀಕರಣಕ್ಕಾಗಿ ತಗಲುವ ವೆಚ್ಚವನ್ನು ತಮ್ಮ ಸ್ವಂತ ನಿಧಿಯಿಂದ ಭರಿಸಲು ಕ್ರಮವಹಿಸಬೇಕಾಗಿದ್ದು, ಅದರಂತೆ ಬೆಂಗಳೂರು (ನಗರ) ಮತ್ತು ಬೆಂಗಳೂರು (ಗ್ರಾಮಾಂತರ) ಜಿಲ್ಲಾ ಪಂಚಾಯತ್‌ಗಳನ್ನು ಹೊರತುಪಡಿಸಿ, 2018-19ನೇ ಸಾಲಿನಲ್ಲಿ ಉಳಿದ 28 ಜಿಲ್ಲಾ

ಪಂಚಾಯತ್‌ಗಳಲ್ಲಿ 10 ಜಿಲ್ಲಾ ಪಂಚಾಯತಿಗಳನ್ನು ಆಯ್ಕೆ ಮಾಡಿ ಅದರಲ್ಲಿ ಆಯ್ದ ಗ್ರಾಮ ಪಂಚಾಯತಿಗಳಿಗೆ ದಾಖಲೆ ಮತ್ತು ದಾಖಲಾತಿಗಳನ್ನು ಗಣಕೀಕರಣಗೊಳಿಸಲು ತಗಲುವ ವೆಚ್ಚವನ್ನು ಸರ್ಕಾರದಿಂದ ಭರಿಸಲು ತೀರ್ಮಾನಿಸಲಾಯಿತು. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/16/ಗ.ಕೋಶ/2018, ಬೆಂಗಳೂರು, ದಿನಾಂಕ: 05.09.2018**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, 2018–19 ನೇ ಸಾಲಿಗೆ 10 ಜಿಲ್ಲಾ ಪಂಚಾಯತ್‌ಗಳನ್ನು ಆಯ್ಕೆ ಮಾಡಿ ಅದರಲ್ಲಿ, ಆಯ್ದ ಗ್ರಾಮ ಪಂಚಾಯತಿಗಳಲ್ಲಿ ಬಜೆಟ್ ಘೋಷಣೆಯಂತೆ ₹.5.00 ಕೋಟಿ ಅನುದಾನದ ಮಿತಿಯೊಳಗೆ ದಾಖಲೆ ಮತ್ತು ದಾಖಲಾತಿಗಳನ್ನು ಗಣಕೀಕರಣಗೊಳಿಸಲು ಆದೇಶಿಸಿದೆ. ಈ ಬಗ್ಗೆ ತಗಲುವ ವೆಚ್ಚವನ್ನು 2018–19ನೇ ಸಾಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಗಣಕೀಕರಣ ಲೆಕ್ಕ ಶೀರ್ಷಿಕೆ:2515–00–101–0–24–059 ರಡಿ ಲಭ್ಯವಿರುವ ₹.5.00 ಕೋಟಿ ಅನುದಾನದಲ್ಲಿ ಭರಿಸಲು ಮಂಜೂರಾತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/237/ವೆಚ್ಚ–6/2018, ದಿನಾಂಕ:18.07.2018 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಯೋಇ/28/ಜಿಯೋವಿ/2018, ದಿನಾಂಕ:03.09.2018ರ ಸಹಮತಿಯ ಮೇರೆಗೆ ಆದೇಶ ಹೊರಡಿಸಲಾಗಿದೆ.

(ಮಾನ್ಯ ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್)
ರವರಿಂದ ಅನುಮೋದಿಸಲ್ಪಟ್ಟಿದೆ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ/–
**(ಎನ್.ಕೃಷ್ಣಪ್ಪ ಕೋಡಿಪಾಳ್ಯ)**
ನಿರ್ದೇಶಕರು (ಇ–ಆಡಳಿತ) (ಪ್ರ) ಹಾಗೂ
ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೇಂದ್ರ ಸರ್ಕಾರ ಹೊಸದಾಗಿ ಜಾರಿಗೊಳಿಸಿರುವ "ಮಿಷನ್ ಅಂತ್ಯೋದಯ" ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ ಸುಗಮವಾಗಿ ಅನುಷ್ಠಾನಿಸಲು ಮತ್ತು ಮೇಲ್ವಿಚಾರಣೆಯನ್ನು ಮಾಡಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮನ್ವಯ ಸಮಿತಿಗಳನ್ನು ರಚಿಸುವ ಬಗ್ಗೆ.

**ಓದಲಾಗಿದೆ:**

1. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರ ಸಂಖ್ಯೆ: P-16018/4/2016-P&P (351050) ದಿನಾಂಕ: 06–02–2017ರ ಮತ್ತು 03–09–2017
2. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರ ಸಂಖ್ಯೆ: P-16018/4/2016-P&P (351050) ದಿನಾಂಕ: 09–11–2017ರ ಪತ್ರ ಹಾಗೂ ಮಿಷನ್ ಅಂತ್ಯೋದಯ ಯೋಜನೆಯ ಅನುಷ್ಠಾನದ ಚೌಕಟ್ಟು ಕೈಪಿಡಿ ಅಕ್ಟೋಬರ್ 2017.

*****

## ಪ್ರಸ್ತಾವನೆ

ಪ್ರಸ್ತುತ ಚಾಲ್ತಿಯಲ್ಲಿರುವ ವಿವಿಧ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವುದರ ಮೂಲಕ ಮಹಾತ್ಮ ಗಾಂಧೀಜಿ ಯವರ 150 ನೇ ಜನ್ಮ ದಿನಾಚರಣೆ ವೇಳೆಗೆ ದೇಶದಲ್ಲಿನ 50,000 ಗ್ರಾಮ ಪಂಚಾಯತಿಗಳನ್ನು ಬಡತನ ಮುಕ್ತ ಗ್ರಾಮ ಪಂಚಾಯತಿಗಳನ್ನಾಗಿ ಘೋಷಿಸುವುದಲ್ಲದೇ, ಒಂದು ಕೋಟಿ ಗ್ರಾಮೀಣ ಕುಟುಂಬಗಳನ್ನು ಬಡತನ ಮುಕ್ತಗೊಳಿಸುವುದು "ಮಿಷನ್ ಅಂತ್ಯೋದಯ" – Poverty Free Grama Panchayats (PFGP) ಯೋಜನೆಯ ಉದ್ದೇಶವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಓದಲಾದ (1)ರಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಸೂಚನೆಯಂತೆ, ರಾಜ್ಯದಲ್ಲಿ ಸಹ ಕೇಂದ್ರ ಸರ್ಕಾರ ನಿಗಧಿಪಡಿಸಿದ ಮಾನದಂಡಗಳನ್ನು ಪರಿಗಣಿಸಿ ಒಟ್ಟು 1126 ಗ್ರಾಮ ಪಂಚಾಯತಿಗಳನ್ನು ಮಿಷನ್ ಅಂತ್ಯೋದಯ ಯೋಜನೆಯಡಿ ಆಯ್ಕೆಮಾಡಿ, ಗ್ರಾಮ ಸಮೃದ್ಧಿ (ಮಿಷನ್ ಅಂತ್ಯೋದಯ) APP ಮೂಲಕ ಗ್ರಾಮಗಳ ಸಮೀಕ್ಷೆ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಿ ಸಂಗ್ರಹಿಸಿದ ದತ್ತಾಂಶ ಮಾಹಿತಿಯನ್ನು ಮಿಷನ್ ಅಂತ್ಯೋದಯ ವೆಬ್ ಪೋರ್ಟಲ್‌ನಲ್ಲಿ ಆರೋಹಿಸಲಾಗಿದೆ. ಇದರ ಸಂಬಂಧ, ರಾಜ್ಯ ಮಟ್ಟದ ಸಮಿತಿಯನ್ನು ರಚಿಸಲು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಅನುಮೋದಿಸಿರುತ್ತಾರೆ. ಮುಂದುವರೆದು ಓದಲಾದ (2) ರಲ್ಲಿನ ಪುಟ ಸಂಖ್ಯೆ 64ರ ಕಂಡಿಕೆ 3.4.2ರಲ್ಲಿ ಸೂಚಿಸಿರುವಂತೆ ಮಿಷನ್ ಅಂತ್ಯೋದಯ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಿಸಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮನ್ವಯ ವ್ಯವಸ್ಥೆ ನಿರ್ವಹಿಸಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರತಿ ಹಂತದಲ್ಲಿ ಯೋಜನೆಯನ್ನು ಸುಗಮವಾಗಿ ಅನುಷ್ಠಾನಿಸಲು ಮತ್ತು ಮೇಲ್ವಿಚಾರಣೆಯನ್ನು ನಡೆಸಲು ಈ ಕೆಳಕಂಡಂತೆ ಸಮಿತಿಗಳನ್ನು ರಚಿಸಲು ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಪ್ರಸ್ತಾಪಿಸಿರುತ್ತದೆ

1. ಜಿಲ್ಲಾ ಮಟ್ಟದ ಸಮನ್ವಯ ಸಮಿತಿ
2. ತಾಲ್ಲೂಕು ಮಟ್ಟದ ಸಮನ್ವಯ ಸಮಿತಿ

ಕೇಂದ್ರ ಸರ್ಕಾರ ಸೂಚಿಸಿರುವಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಮಿಷನ್ ಅಂತ್ಯೋದಯ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಿಸಬೇಕಾಗಿರುತ್ತದೆ. ಅದರಂತೆ, ಈ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 08 ಉಖಾಯೋ 2018, ಬೆಂಗಳೂರು, ದಿನಾಂಕ: 14–08–2018**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮಿಷನ್ ಅಂತ್ಯೋದಯ ಯೋಜನೆಯನ್ನು ಕರ್ನಾಟಕ ರಾಜ್ಯದ ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಚಟುವಟಿಕೆಗಳನ್ನು ಒಗ್ಗೂಡಿಸುವಿಕೆಯೊಂದಿಗೆ ಅನುಷ್ಠಾನಿಸಲು ಮತ್ತು ಮೇಲ್ವಿಚಾರಣೆ ಮಾಡಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮನ್ವಯ ಸಮಿತಿಗಳನ್ನು ಈ ಕೆಳಕಂಡಂತೆ ರಚಿಸಿದೆ.

**ಜಿಲ್ಲಾ ಮಟ್ಟದ ಸಮನ್ವಯ ಸಮಿತಿ :**

| | | |
|---|---|---|
| 1 | ಜಿಲ್ಲಾಧಿಕಾರಿ. | ಅಧ್ಯಕ್ಷರು |
| 2 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ. | ಉಪಾಧ್ಯಕ್ಷರು |
| 3 | ಜಂಟಿ ನಿರ್ದೇಶಕರು, ಕೃಷಿ ಇಲಾಖೆ. | ಸದಸ್ಯರು |
| 4 | ಜಂಟಿ ನಿರ್ದೇಶಕರು, ಡಿಐಸಿ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ | ಸದಸ್ಯರು |
| 5 | ಲೀಡ್ ಬ್ಯಾಂಕ್ ಮ್ಯಾನೇಜರ್ | ಸದಸ್ಯರು |
| 6 | ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ/ಪ್ರಾದೇಶಿಕ/ವನ್ಯಜೀವಿ ಅರಣ್ಯ ವಿಭಾಗ. | ಸದಸ್ಯರು |
| 7 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಸದಸ್ಯರು |
| 8 | ಉಪ ನಿರ್ದೇಶಕರು(ಜಿ.ಪಂ), ತೋಟಗಾರಿಕೆ ಇಲಾಖೆ | ಸದಸ್ಯರು |
| 9 | ಉಪ ನಿರ್ದೇಶಕರು(ಜಿ.ಪಂ), ರೇಷ್ಮೆ ಇಲಾಖೆ | ಸದಸ್ಯರು |
| 10 | ಉಪ ನಿರ್ದೇಶಕರು, ಪಶುಸಂಗೋಪನೆ ಇಲಾಖೆ. | ಸದಸ್ಯರು |
| 11 | ಜಿಲ್ಲಾ ಯೋಜನಾ ನಿರ್ದೇಶಕರು, ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆ (ಕೆಎಸ್‌ಆರ್‌ಎಲ್‌ಪಿಎಸ್) | ಸದಸ್ಯರು |
| 12 | ಕಾರ್ಯನಿರ್ವಾಹಕ ಅಭಿಯಂತರರು, ಜಲಸಂಪನ್ಮೂಲ ಇಲಾಖೆ | ಸದಸ್ಯರು |
| 13 | ಕಾರ್ಯನಿರ್ವಾಹಕ ಅಭಿಯಂತರರು, ಪಿ.ಆರ್.ಇ.ಡಿ | ಸದಸ್ಯರು |
| 14 | ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ | ಸದಸ್ಯರು |
| 15 | ಉಪ ನಿರ್ದೇಶಕರು ಸಮಾಜ ಕಲ್ಯಾಣ, ಸಮಾಜ ಕಲ್ಯಾಣ ಇಲಾಖೆ/ ಐ.ಟಿ.ಡಿ.ಪಿ ಅಧಿಕಾರಿ | ಸದಸ್ಯರು |
| 16 | ಪ್ರಾದೇಶಿಕ ಸಾರಿಗೆ ಆಯುಕ್ತರು, ಸಾರಿಗೆ ಇಲಾಖೆ | ಸದಸ್ಯರು |
| 17 | ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ (ಡಿ.ಡಿ.ಪಿ.ಐ), ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 18 | ಕಾರ್ಯನಿರ್ವಾಹಕ ಅಭಿಯಂತರರು, ಇಂಧನ ಇಲಾಖೆ | ಸದಸ್ಯರು |
| 19 | ಜಿಲ್ಲಾ ವಾಣಿಜ್ಯ ತೆರಿಗೆ ಅಧಿಕಾರಿ, ವಾಣಿಜ್ಯ ತೆರಿಗೆ ಇಲಾಖೆ | ಸದಸ್ಯರು |
| 20 | ಜಿಲ್ಲಾ ನೋಡಲ್ ಅಧಿಕಾರಿಗಳು, ಸಾರ್ವಜನಿಕ ಉದ್ದಿಮೆಗಳ ಇಲಾಖೆ | ಸದಸ್ಯರು |
| 21 | ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ | ಸದಸ್ಯರು |
| 22 | ಪ್ರಾಂಶುಪಾಲರು, ಜಿಲ್ಲಾ ತರಬೇತಿ ಸಂಸ್ಥೆ | ಸದಸ್ಯರು |
| 23 | ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು |
| 24 | ಜಿಲ್ಲಾ ಅಲ್ಪ ಸಂಖ್ಯಾತ ವರ್ಗಗಳ ಕಲ್ಯಾಣ ಅಧಿಕಾರಿ | ಸದಸ್ಯರು |
| 25 | ಜಿಲ್ಲಾ ಉಪ ನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ. | ಸದಸ್ಯರು |
| 26 | ಜಿಲ್ಲಾ ಎನ್‌ಐಸಿ ಅಧಿಕಾರಿ, ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ. | ಸದಸ್ಯರು |
| 27 | ಜಿಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ವಿಶೇಷ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ. | ಸದಸ್ಯರು |
| 28 | ಹಿರಿಯ ಸಹಾಯಕ ನಿರ್ದೇಶಕರು ಮೀನುಗಾರಿಕೆ, ಮೀನುಗಾರಿಕೆ ಇಲಾಖೆ. | ಸದಸ್ಯರು |
| 29 | ಜಿಲ್ಲಾ ನೋಡಲ್ ಅಧಿಕಾರಿಗಳು, ವಸತಿ ಇಲಾಖೆ. | ಸದಸ್ಯರು |
| 30 | ಜಿಲ್ಲಾ ನೋಡಲ್ ಅಧಿಕಾರಿಗಳು, ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ. | ಸದಸ್ಯರು |
| 31 | ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ. | ಸದಸ್ಯರು |
| 32 | ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ | ಸದಸ್ಯರು |
| 33 | ಜಿಲ್ಲಾ ಕಾರ್ಮಿಕ ಅಧಿಕಾರಿ, ಕಾರ್ಮಿಕ ಇಲಾಖೆ | ಸದಸ್ಯರು |
| 34 | ಹಿರಿಯ ವಾರ್ತಾಧಿಕಾರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ. | ಸದಸ್ಯರು |

| | | |
|---|---|---|
| 33 | ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ, ಇಲಾಖೆ. | ಸದಸ್ಯರು |
| 34 | ಮಿಷನ್ ಅಂತ್ಯೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮ ಪಂಚಾಯತಿಗಳ ಪಿ.ಡಿ.ಒ.(ಆವರ್ತನ ಮಾದರಿ–Rotation) | ಸದಸ್ಯರು |
| 35 | ಜಿಲ್ಲಾ ಮಟ್ಟದಲ್ಲಿ ಸರ್ಕಾರದ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಿಸಲು ಸಹಕರಿಸುವ ಸಕ್ರೀಯ ಸರ್ಕಾರೇತರ ಸಂಸ್ಥೆಗಳು/ಶೈಕ್ಷಣಿಕ ಸಂಸ್ಥೆಗಳ ಪ್ರತಿನಿಧಿಗಳು (ತಲಾ ಒಬ್ಬರು) | ಸದಸ್ಯರು |
| 36 | ಯೋಜನೆಯ ಅನುಷ್ಠಾನಕ್ಕೆ ಸಂಬಂಧಪಟ್ಟ ಇತರೆ ಇಲಾಖೆಯ ಅಧಿಕಾರಿಗಳು | ಸದಸ್ಯರು |
| 37 | ಉಪ ಕಾರ್ಯದರ್ಶಿ/ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತಿ, | ಸದಸ್ಯ ಕಾರ್ಯದರ್ಶಿಗಳು |

**ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯ ಕರ್ತವ್ಯಗಳು ಮತ್ತು ಪ್ರಕಾರ್ಯಗಳು:**

1. ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಸರ್ಕಾರಿ ಆದೇಶಗಳು/ನಡವಳಿಗಳು (ನಿರ್ಣಯಗಳು) ಜಾರಿಯಾಗುತ್ತಿರುವ/ಅನುಷ್ಠಾನವಾಗುತ್ತಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು.
2. ಜಿಲ್ಲಾ ಮತ್ತು ಉಪವಿಭಾಗ ಮಟ್ಟದಲ್ಲಿ ಅಂತರ್ ಇಲಾಖೆಗಳ ಸಮನ್ವಯತೆ ಇರುವುದನ್ನು ಖಚಿತ ಪಡಿಸುವುದು.
3. ವಿವಿಧ ಯೋಜನೆಗಳ ಮತ್ತು ಸಂಪನ್ಮೂಲಗಳ ಒಗ್ಗೂಡಿಸುವಿಕೆಯನ್ನು ಖಚಿತ ಪಡಿಸುವುದು (ವಿಶೇಷವಾಗಿ ಮಹಾತ್ಮಗಾಂಧಿ ನರೇಗಾ ಯೋಜನೆ ಮತ್ತು ಸ್ವಚ್ಛ ಭಾರತ ಮಿಷನ್)
4. ಅಗತ್ಯವಿದ್ದಲ್ಲಿ ಪ್ರಧಾನ ಮಾರ್ಗದರ್ಶನಗಳ ಒಂದು ಅಂಗವಾಗಿ ಗ್ರಾಮ ಪಂಚಾಯತಿ ಸಮೂಹಗಳ ವ್ಯಾಪ್ತಿ ಗುರುತು ಮಾಡಲು ನಿರ್ಧರಿಸುವುದು.
5. ಜಿಲ್ಲಾ ಮಟ್ಟದಲ್ಲಿ ಪರಿಸರ ಚಟುವಟಿಕೆಗಳು ಮತ್ತು ಮಾಧ್ಯಮ ಯೋಜನೆಗಳನ್ನು ಸಮನ್ವಯಗೊಳಿಸುವುದು.
6. ಕ್ಷೇತ್ರ ಮಟ್ಟದಲ್ಲಿ ಅನುಷ್ಠಾನದ ಸಂದರ್ಭಗಳಲ್ಲಿ ಕಂಡುಬರುವ ಸಮಸ್ಯೆಗಳು/ಅಡಚಣೆಗಳನ್ನು ಗುರುತಿಸಿ, ಅವುಗಳ ಪರಿಹಾರ ನಿವಾರಿಸಲು ಆದೇಶಗಳನ್ನು/ಅಗತ್ಯವಾದ ಸೂಚನೆಗಳನ್ನು ನೀಡುವುದು.
7. ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ ಪ್ರಕ್ರಿಯೆ/ಪ್ರಗತಿಗೆ ಅಗತ್ಯವೆನಿಸುವ ಮಾನವ ಸಂಪನ್ಮೂಲ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಇರುವುದನ್ನು ಖಾತರಿ ಪಡಿಸುವುದು ಮತ್ತು ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಖಚಿತ ಜವಾಬ್ದಾರಿಗಳನ್ನು ನಿಗಧಿಪಡಿಸುವುದು.
8. ಸಂಬಂಧಪಟ್ಟ ಎಲ್ಲಾ ಕಾರ್ಯನಿರ್ವಹಣ ಪ್ರಾಧಿಕಾರಿಗಳ ಸಾಮರ್ಥ್ಯ ಅಭಿವೃದ್ಧಿ ಸಂಯೋಜಿಸುವುದು.
9. ರಾಜ್ಯ ಮಾರ್ಗಸೂಚಿಗಳನ್ವಯ, ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿವಾರು ದ್ವಿತೀಯ ಅಂಕಿ ಸಂಖ್ಯೆ ಮಾಹಿತಿಗಳ ಲಭ್ಯತೆ ಬಗ್ಗೆ ಖಚಿತ ಪಡಿಸುವುದು.
10. ತಾಂತ್ರಿಕ ಮೌಲ್ಯಮಾಪನ ಮತ್ತು ಯೋಜನೆಗಳ ಅನುಮೋದನೆಯ ಸಕಾಲಿಕ ಹೊಂದಾಣಿಕೆಯನ್ನು ಖಚಿತ ಪಡಿಸುವುದು.
11. ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ ಪ್ರಕ್ರಿಯೆ/ಪ್ರಗತಿಯನ್ನು ಜಿಲ್ಲಾ ಮಟ್ಟದಲ್ಲಿ ಚಾಲನೆ ಮಾಡಿ ಮೇಲ್ವಿಚಾರಣೆ ಮಾಡುವುದು.
12. ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ ಪ್ರಕ್ರಿಯೆ/ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು.
13. ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಕುರಿತು ಸಮೀಕ್ಷೆ ಮಾಡುವುದು ಮತ್ತು ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಗಳ ಉತ್ತಮ ಆಚರಣೆಗಳು ಮತ್ತು ಸಮಸ್ಯೆಗಳ ಕುರಿತು ಕಾರ್ಯಕಾರಿ ಸಮಿತಿಗೆ ವರದಿ ಮಾಡುವುದು.
14. ರಾಜ್ಯ ಕಾರ್ಯಕಾರಿ ಸಮಿತಿಯು ಕಾಲಕಾಲಕ್ಕೆ ಸೂಚಿಸುವ ಇತರೆ ಕಾರ್ಯಗಳನ್ನು ಮಾಡುವುದು.

**ತಾಲ್ಲೂಕು ಮಟ್ಟದ ಸಮನ್ವಯ ಸಮಿತಿ :**

| | | |
|---|---|---|
| 1 | ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ | ಅಧ್ಯಕ್ಷರು |
| 2 | ತಹಶೀಲ್ದಾರ್, ತಾಲ್ಲೂಕು ಕಛೇರಿ | ಸದಸ್ಯರು |
| 3 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ/ಪ್ರಾದೇಶಿಕ/ವನ್ಯಜೀವಿ | ಸದಸ್ಯರು |
| 4 | ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯರು |
| 5 | ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ | ಸದಸ್ಯರು |

| | | |
|---|---|---|
| 6 | ತಾಲ್ಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಸದಸ್ಯರು |
| 7 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು |
| 8 | ಸಹಾಯಕ ನಿರ್ದೇಶಕರು(ತಾ.ಪಂ), ರೇಷ್ಮೆ ಇಲಾಖೆ | ಸದಸ್ಯರು |
| 9 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಜಲಸಂಪನ್ಮೂಲ ಇಲಾಖೆ | ಸದಸ್ಯರು |
| 10 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಿ.ಆರ್.ಇ.ಡಿ | ಸದಸ್ಯರು |
| 11 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ | ಸದಸ್ಯರು |
| 12 | ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ, ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |
| 13 | ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು |
| 14 | ಸಹಾಯಕ ನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ. | ಸದಸ್ಯರು |
| 15 | ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ವಿಶೇಷ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ. | ಸದಸ್ಯರು |
| 16 | ಸಹಾಯಕ ನಿರ್ದೇಶಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ. | ಸದಸ್ಯರು |
| 17 | ತಾಲ್ಲೂಕು ನೋಡಲ್ ಅಧಿಕಾರಿಗಳು, ವಸತಿ ಇಲಾಖೆ. | ಸದಸ್ಯರು |
| 18 | ತಾಲ್ಲೂಕು ಯೋಜನಾ ನಿರ್ದೇಶಕರು, ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆ (ಕೆಎಸ್ಆರ್ಎಲ್ಪಿಎಸ್) | ಸದಸ್ಯರು |
| 19 | ತಾಲ್ಲೂಕು ನೋಡಲ್ ಅಧಿಕಾರಿಗಳು, ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ. | ಸದಸ್ಯರು |
| 20 | ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ. | ಸದಸ್ಯರು |
| 21 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸಾರಿಗೆ ಇಲಾಖೆ | ಸದಸ್ಯರು |
| 22 | ತಾಲ್ಲೂಕು ಶಿಕ್ಷಣ ಅಧಿಕಾರಿ (ಬಿ.ಇ.ಒ), ಸಾರ್ವಜನಿಕ ಶಿಕ್ಷಣ ಇಲಾಖೆ/ಉನ್ನತ ಶಿಕ್ಷಣ | ಸದಸ್ಯರು |
| 23 | ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ | ಸದಸ್ಯರು |
| 24 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಇಂಧನ ಇಲಾಖೆ | ಸದಸ್ಯರು |
| 25 | ತಾಲ್ಲೂಕು ಪ್ರತಿನಿಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ. | ಸದಸ್ಯರು |
| 26 | ತಾಲ್ಲೂಕು ಕಾರ್ಮಿಕ ಅಧಿಕಾರಿ, ಕಾರ್ಮಿಕ ಇಲಾಖೆ | ಸದಸ್ಯರು |
| 27 | ತಾಲ್ಲೂಕು ವಾಣಿಜ್ಯ ತೆರಿಗೆ ಅಧಿಕಾರಿ, ವಾಣಿಜ್ಯ ಇಲಾಖೆ | ಸದಸ್ಯರು |
| 28 | ತಾಲ್ಲೂಕು ವ್ಯವಸ್ಥಾಪಕರು, ಕೈಗಾರಿಕಾ ಇಲಾಖೆ | ಸದಸ್ಯರು |
| 29 | ತಾಲ್ಲೂಕು ನೋಡಲ್ ಅಧಿಕಾರಿ, ಸಾರ್ವಜನಿಕ ಉದ್ದಿಮೆಗಳ ಇಲಾಖೆ | ಸದಸ್ಯರು |
| 30 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ | ಸದಸ್ಯರು |
| 31 | ಮಿಷನ್ ಅಂತ್ಯೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮ ಪಂಚಾಯತಿಗಳ ಪಿ.ಡಿ.ಒ.. (ಆವರ್ತನ ಮಾದರಿ–Rotation) | ಸದಸ್ಯರು |
| 32 | ತಾಲ್ಲೂಕು ಮಟ್ಟದಲ್ಲಿ ಸರ್ಕಾರದ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಿಸಲು ಸಹಕರಿಸುವ ಸಕ್ರೀಯ ಸರ್ಕಾರೇತರ ಸಂಸ್ಥೆಗಳು/ಶೈಕ್ಷಣಿಕ ಸಂಸ್ಥೆಗಳ ಪ್ರತಿನಿಧಿಗಳು (ತಲಾ ಒಬ್ಬರು) | ಸದಸ್ಯರು |
| 33 | ಯೋಜನೆಯ ಅನುಷ್ಠಾನಕ್ಕೆ ಸಂಬಂಧಪಟ್ಟ ಇತರೆ ಇಲಾಖೆಯ ಅಧಿಕಾರಿ | ಸದಸ್ಯರು |
| 34 | ಸಹಾಯಕ ನಿರ್ದೇಶಕರು, ತಾಲ್ಲೂಕು ಪಂಚಾಯತಿ, | ಸದಸ್ಯ ಕಾರ್ಯದರ್ಶಿಗಳು |

**ತಾಲ್ಲೂಕು ಮಟ್ಟದ ಸಮನ್ವಯ ಸಮಿತಿಯ ಕರ್ತವ್ಯಗಳು ಮತ್ತು ಪ್ರಕಾರ್ಯಗಳು:**

1. ತಾಲ್ಲೂಕು/ಸಮೂಹ/ಗ್ರಾಮ ಪಂಚಾಯತಿ ಮಟ್ಟದಲ್ಲಿ ಅಂತರ್ ಇಲಾಖೆಗಳ ಸಮನ್ವಯತೆ ಇರುವುದನ್ನು ಖಚಿತ ಪಡಿಸುವುದು.

2. ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ ಪ್ರಕ್ರಿಯೆ/ಪ್ರಗತಿಯನ್ನು ನಿರ್ವಹಿಸಲು ಸಮೂಹ (ಕ್ಲಸ್ಟರ್) ಮಟ್ಟದಲ್ಲಿ ತಾಂತ್ರಿಕ ಸಹಾಯಕ ತಂಡಗಳನ್ನು ರಚಿಸುವುದು.
3. ವಿವಿಧ ಯೋಜನೆಗಳ ಮತ್ತು ಸಂಪನ್ಮೂಲಗಳ ಒಗ್ಗೂಡಿಸುವಿಕೆಯನ್ನು ಖಚಿತ ಪಡಿಸುವುದು (ವಿಶೇಷವಾಗಿ ಮಹಾತ್ಮಗಾಂಧಿ ನರೇಗಾ ಯೋಜನೆ ಮತ್ತು ಸ್ವಚ್ಛ ಭಾರತ ಮಿಷನ್)
4. ಕ್ಷೇತ್ರ ಮಟ್ಟದಲ್ಲಿ ಅನುಷ್ಠಾನದ ಸಂದರ್ಭಗಳಲ್ಲಿ ಕಂಡುಬರುವ ಸಮಸ್ಯೆಗಳು/ಅಡಚಣೆಗಳನ್ನು ಗುರುತಿಸಿ, ಅವುಗಳ ಪರಿಹಾರ ನಿವಾರಿಸಲು ಆದೇಶಗಳನ್ನು/ಅಗತ್ಯವಾದ ಸೂಚನೆಗಳನ್ನು ನೀಡುವುದು.
5. ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ ಪ್ರಕ್ರಿಯೆ/ಪ್ರಗತಿಗೆ ಅಗತ್ಯವೆನಿಸುವ ಮಾನವ ಸಂಪನ್ಮೂಲಗಳನ್ನು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಇರುವುದನ್ನು ಖಾತರಿ ಪಡಿಸುವುದು ಮತ್ತು ಕೊರತೆಗಳನ್ನು ತುಂಬಲು ಅಗತ್ಯ ಸ್ಥಳೀಯ ವ್ಯವಸ್ಥೆಯನ್ನು ಮಾಡುವುದು.
6. ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ ಪ್ರಕ್ರಿಯೆ/ಪ್ರಗತಿಗೆ ಅಗತ್ಯವೆನಿಸುವ ಮಾನವ ಸಂಪನ್ಮೂಲ ಮತ್ತು ಮೂಲಭೂತ ಸೌಕರ್ಯಗಳು, ಪರಿಕರಗಳೊಂದಿಗೆ ತಾಂತ್ರಿಕ ಸಂಪನ್ಮೂಲವನ್ನು ಸಹ ಒದಗಿಸುವುದು.
7. ಸಾಮರ್ಥ್ಯ ಅಭಿವೃದ್ಧಿ ತರಬೇತಿಗೆ ಅಗತ್ಯ ಇರುವ ಸಂಪೂರ್ಣ ವ್ಯವಸ್ಥೆಯನ್ನು ಸಮೂಹ (ಕ್ಲಸ್ಟರ್) ಮಟ್ಟದಲ್ಲಿ, ಗ್ರಾಮ ಪಂಚಾಯತಿ ಹಾಗೂ ಗ್ರಾಮ ಮಟ್ಟದಲ್ಲಿ ಕಲ್ಪಿಸುವುದು.
8. ತಾಲ್ಲೂಕು ಮತ್ತು ಗ್ರಾಮ/ತಳ ಮಟ್ಟದಲ್ಲಿ ಪರಿಸರ ಚಟುವಟಿಕೆಗಳು ಮತ್ತು ಮಾಧ್ಯಮ ಯೋಜನೆಗಳನ್ನು ಸಮನ್ವಯಗೊಳಿಸುವುದು.
9. ರಾಜ್ಯ ಮಾರ್ಗಸೂಚಿಗಳನ್ವಯ, ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ದ್ವಿತೀಯ ಅಂಕಿ ಸಂಖ್ಯೆ ಮಾಹಿತಿಗಳ ಲಭ್ಯತೆ ಬಗ್ಗೆ ಖಚಿತ ಪಡಿಸುವುದು.
10. ತಾಂತ್ರಿಕ ಮೌಲ್ಯಮಾಪನ ಮತ್ತು ಯೋಜನೆಗಳ ಅನುಮೋದನೆಯ ಸಕಾಲಿಕ ಹೊಂದಾಣಿಕೆಯನ್ನು ಖಚಿತ ಪಡಿಸುವುದು.
11. ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ ಪ್ರಕ್ರಿಯೆ/ಪ್ರಗತಿಯನ್ನು ತಾಲ್ಲೂಕು ಮಟ್ಟದಲ್ಲಿ ಚಾಲನೆ ಮಾಡಿ ಮೇಲ್ವಿಚಾರಣೆ ಮಾಡುವುದು.
12. ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ ಪ್ರಕ್ರಿಯೆ/ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು.
13. ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಕುರಿತು ಸಮೀಕ್ಷೆ ಮಾಡುವುದು ಮತ್ತು ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಗಳ ಉತ್ತಮ ಆಚರಣೆಗಳು ಮತ್ತು ಸಮಸ್ಯೆಗಳ ಕುರಿತು ಜಿಲ್ಲಾ ಸಮಿತಿಗೆ ವರದಿ ಮಾಡುವುದು.
14. ರಾಜ್ಯ ಕಾರ್ಯಕಾರಿ ಸಮಿತಿ ಮತ್ತು ಜಿಲ್ಲಾ ಸಮನ್ವಯ ಸಮಿತಿಯು ಕಾಲಕಾಲಕ್ಕೆ ಸೂಚಿಸುವ ಇತರೆ ಕಾರ್ಯಗಳನ್ನು ಮಾಡುವುದು.

ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮನ್ವಯ ಸಮಿತಿಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮಿಷನ್ ಅಂತ್ಯೋದಯ ವೆಬ್ ಪೋರ್ಟಲ್‌ನಲ್ಲಿ (https://missionantyodaya.nic.in) ಅಳವಡಿಸಿರುವ ಮಾರ್ಗದರ್ಶಿ ಕೈಪಿಡಿಯನ್ನು ಆಧರಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

ಸಹಿ/–
**(ಎಸ್. ರಂಗನಗೌಡ)**
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ



**ದೊಡ್ಡಬಳ್ಳಾಪುರ ತಾಲ್ಲೂಕು, ಬಾಶೆಟ್ಟಿಹಳ್ಳಿಯಲ್ಲಿ ಮಾನ್ಯ ಸಚಿವರಿಂದ ಆಧಾರ್ ತಿದ್ದುಪಡಿ ಕೇಂದ್ರ ಸ್ಥಾಪನೆ**





# KARNATAKA VIKAS : SEPTEMBER 2018

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2018-20, License of Post “without Prepayment” WPP - 32
Date of Publication : 8th of Every Month.
RNI No: KAR KAN / 28103 / 1974 Total No. Pages 52, Posted at Bengaluru PSO, Mysore Road, Bengaluru
on 11th, 19th, 23rd of every month.
This issue is permitted to be posted on 26th September 2018




Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Chief Editor
**Shrinivas H Marangappanavar**

Place & Publication
**Karnataka Vikas**
No.309, 3rd Floor, Gate No.1
M.S.Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob: +91 95919 88347

Price : ಬೆಲೆ : ₹ 10.00